ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-32/2022-23/ A-89 ದಿನಾಂಕ: 20 FEB 2023

"ಗೌಪ್ಯ"

ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯನ್ನು **ದಿನಾಂಕ 17 ಫೆಬ್ರುವರಿ, 2023** ರಂದು **ಮುಂಜಾನೆ 11:30 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | |
|---|---|
| 1. ಪ್ರೋ. ಕೆ. ಬಿ. ಗುಡಸಿ, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2. ಶ್ರೀ. ಕೃಷ್ಣಮೂರ್ತಿ ಬಿ.ಆರ್., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ, (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 3. ಡಾ. (ಶ್ರೀಮತಿ). ಚಂದ್ರಮ್ಮ ಎಮ್, ಡೀನರು, ಕವಿವಿ, ಧಾರವಾಡ | ಸದಸ್ಯರು |
| 4. ಶ್ರೀಮತಿ. ಹಂಸವೇಣಿ ಎನ್., ಧಾರವಾಡ | ಸದಸ್ಯರು |
| 5. ಪ್ರೋ. ಎಮ್.ಕೆ. ಶೇಖ್, ಪ್ರಾಚಾರ್ಯರು, ಭಟ್ಕಳ | ಸದಸ್ಯರು |
| 6. ಡಾ (ಶ್ರೀಮತಿ). ವಿಜಯಲಕ್ಷ್ಮೀ ಎಮ್. ನಾಯ್ಕ, ಪ್ರಾಚಾರ್ಯರು, ಹೊನ್ನಾವರ | ಸದಸ್ಯರು |
| 7. ಡಾ. ಜಿ. ಎಸ್. ಯತ್ನಟ್ಟಿ, ಪ್ರಾಚಾರ್ಯರು, ಗದಗ | ಸದಸ್ಯರು |
| 8. ಡಾ. ವಿ. ವಿ. ನಾಯಕ, ಪ್ರಾಚಾರ್ಯರು, ಕಾರವಾರ | ಸದಸ್ಯರು |
| 9. ಡಾ. ಎಸ್. ಟಿ. ಬಾಗಲಕೋಟಿ, ಪ್ರಾಧ್ಯಾಪಕರು, ಕ.ವಿ.ವಿ.ಧಾರವಾಡ | ಸದಸ್ಯರು |
| 10. ಡಾ. ಸಿ. ಕೃಷ್ಣಮೂರ್ತಿ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ.ಧಾರವಾಡ | ಸದಸ್ಯರು |
| 11. ಶ್ರೀ. ಯಶಪಾಲ ಕ್ಷಿರಸಾಗರ, ಭಾ.ಆ.ಸೇ. ಕುಲಸಚಿವರು (ಆಡಳಿತ), ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 11 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ಮುಂಜಾನೆ 11:30 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಸಿಂಡಿಕೇಟ ಸದಸ್ಯರೆಂದು ನೇಮಕಗೊಂಡ ಡಾ. ಎಸ್. ಟಿ. ಬಾಗಲಕೋಟಿ, ಪ್ರಾಧ್ಯಾಪಕರು ಇವರನ್ನು ಪರಿಚಯಿಸಿ ಸ್ವಾಗತಿಸಿದರು. ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.



ಕುಲಸಚಿವರು ಕುಲಪತಿಗಳು

ದಿನಾಂಕ 05.12.2022ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. ಅದಕ್ಕೆ ಸದಸ್ಯರೆಲ್ಲರು ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

ದಿನಾಂಕ 10.12.2022ರ ಸಾಧಾರಣ ಹಾಗೂ ದಿನಾಂಕ 09.01.2023ರ ವಿಶೇಷ ಸಿಂಡಿಕೇಟ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

ಮುಂದುವರೆದು, ದಿನಾಂಕ 19.01.2023ರ ವಿಶೇಷ ಸಿಂಡಿಕೇಟ ಸಭೆಯ ನಡಾವಳಿಗಳ ನಿರ್ಣಯ ಸಂಖ್ಯೆ 03ನ್ನು ಈ ಕೆಳಗಿನಂತೆ ತಿದ್ದುಪಡೆ ಮಾಡಲಾಯಿತು ಹಾಗೂ ಉಳಿದ ನಿರ್ಣಯಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

| ನಿರ್ಣಯ ಸಂಖ್ಯೆ | ದಾಖಲಾದ ನಿರ್ಣಯ | ತಿದ್ದುಪಡೆಯಾದ ನಿರ್ಣಯ |
|---|---|---|
| **03** | **ಶ್ರೀ ಎಸ್. ಆರ್. ಮಾಲುನವರ (ನಿವೃತ್ತ) C & AG Sr. ಲೆಕ್ಕಪತ್ರ ಅಧಿಕಾರಿಗಳು ಇವರ ಗೌರವಧನ/ ಸಂಭಾವನೆಯನ್ನು ಹೆಚ್ಚಿಸುವ ಮತ್ತು ಸೇವೆಯನ್ನು ಮುಂದುವರೆಸುವ ಪ್ರಸ್ತಾವನೆ ಕುರಿತು ಚರ್ಚಿಸಲಾಗಿ, ಸದರಿಯವರ ಸೇವೆಯನ್ನು ದಿನಾಂಕ 17.08.2022 ರಿಂದ 16.02.2023 ರ ಅವಧಿಗೆ ಸಂಚಿತ ವೇತನ ಆಧಾರದ ಮೇಲೆ ಮುಂದುವರೆಸಲು ನಿರ್ಣಯಿಸಲಾಯಿತು.** | ಶ್ರೀ ಎಸ್. ಆರ್. ಮಾಲುನವರ (ನಿವೃತ್ತ) C & AG Sr. ಲೆಕ್ಕಪತ್ರ ಅಧಿಕಾರಿಗಳು ಇವರ ಗೌರವಧನ/ ಸಂಭಾವನೆಯನ್ನು ಹೆಚ್ಚಿಸುವ ಮತ್ತು ಸೇವೆಯನ್ನು ಮುಂದುವರೆಸುವ ಪ್ರಸ್ತಾವನೆ ಕುರಿತು ಚರ್ಚಿಸಲಾಗಿ, ಸದರಿಯವರ ಸೇವೆಯನ್ನು ದಿನಾಂಕ 17.08.2022 ರಿಂದ 16.02.2023 ರ ಅವಧಿಗೆ ಸಂಚಿತ ವೇತನ ಆಧಾರದ ಮೇಲೆ ಮುಂದುವರೆಸಲು ನಿರ್ಣಯಿಸಲಾಯಿತು. **ಮುಂದುವರೆದು, ಸದರೀಯವರಿಗೆ ಪ್ರಸ್ತುತವಾಗಿ ನೀಡುತ್ತಿರುವ ಸಂಭಾವನೆಯನ್ನು ದಿನಾಂಕ 19.01.2023ರಂದು ಜರುಗಿದ ಸಿಂಡಿಕೇಟ ಸಭೆಯ ದಿನಾಂಕದಿಂದ ಪ್ರತಿ ತಿಂಗಳು ರೂ.35,000/- ದಿಂದ ರೂ.40,000/- ಗಳಿಗೆ ಪರಿಷ್ಕರಿಸಲು ನಿರ್ಣಯಿಸಲಾಯಿತು ಎಂದು ಓದಿಕೊಳ್ಳುವುದು.** |



ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-02: ವಿಷಯ-: ಶ್ರೀ ವಾಗೀಶ ಎಂ. ಹೂಗಾರ, ಬಿ.ಇ. (ಸಿವ್ಹಿಲ್) ಸ್ಥಳಾಂಕ: 91AA022 ಹಾಗೂ ಶ್ರೀ ಅರುಣ ಕಾಖಂಡಕಿ, ಬಿ.ಇ. (ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್) ಸ್ಥಳಾಂಕ: 91BC016 ಇವರ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ ಪ್ರಥಮ ವರ್ಗವೆಂದು ನೀಡಿರುವ ಅಂಕಪಟ್ಟಿ ಮರಳಿ ಪಡೆಯುವ ಹಾಗೂ ಪ್ರಥಮ ವರ್ಗದ ಬದಲಾಗಿ ಉತ್ತೀರ್ಣವೆಂದು ತಿದ್ದುಪಡೆ ಮಾಡಿ ನೀಡುವುದರ ಕುರಿತು ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ: 40 ದಿನಾಂಕ: 19.11.2005 ಮತ್ತು ನಿರ್ಣಯ ಸಂಖ್ಯೆ: 21 ದಿನಾಂಕ: 12.05.2006ರ ಎರಡು ನಿರ್ಣಯಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದುಗೊಳಿಸಿದ್ದನ್ನು ಪರಿಶೀಲಿಸುವ ಕುರಿತು.

ಟಿಪ್ಪಣಿ :

1. ಸದರಿ ಪ್ರಕರಣದ ವಿವರ ಈ ಕೆಳಗಿನಂತಿದೆ-

i) ಡಾ.ಕೆ.ಪಿ. ಪ್ರಭಾಕರ, ರಾಜ್ಯಪಾಲರ ಅಧೀನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು ಇವರ ಪತ್ರ ಕ್ರಮಾಂಕ: ಜಿಎಸ್:16:ಕೆಯುಎಮ್-2004 ದಿನಾಂಕ:19-10-2005ರ ಪತ್ರದಡಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳನ್ನು ಉದ್ದೇಶಿಸಿ ಸದ್ರಿ ಪತ್ರದಲ್ಲಿ ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ.

ಅ. ದಿನಾಂಕ: 28-02-2005 ರಂದು ಜರುಗಿದ ಸಿಂಡಿಕೇಟ ಸಭೆಗೆ ಮಂಡಿಸಿದ ಟಿಪ್ಪಣಿಯಲ್ಲಿ ಪದವಿ ಪ್ರಮಾಣಪತ್ರ ಹಾಗೂ ಅಂಕಪಟ್ಟಿಯಲ್ಲಿಯ ತಪ್ಪುಗಳು ಉದ್ದೇಶಪೂರ್ವಕವಾಗಿ ಮಾಡಿದ ತಪ್ಪುಗಳಾಗಿವೆಯೇ ವಿನಃ ಕಣ್ತಪ್ಪಿನಿಂದಾದ ತಪ್ಪುಗಳಲ್ಲ. ಹಾಗೂ ಇದಕ್ಕೆ ಆಗಿನ ಕುಲಸಚಿವರು (ಮೌಲ್ಯಮಾಪನ) ಹಾಗೂ ನಿಖಾಯದ ಡೀನರು ನೇರ ಹೊಣೆಗಾರರಾಗಿದ್ದು ಆರು ವರ್ಷಗಳ ಕಾಲ ಸಂಬಂಧಪಟ್ಟ ಕಡತವನ್ನು ತಮ್ಮ ಬಳಿಯಲ್ಲಿ ಇಟ್ಟುಕೊಂಡು ನಂತರ ಕ್ಲಾಸ್ 8(ಅ) ಅಡಿಯಲ್ಲಿಯ ಸೌಲಭ್ಯವನ್ನು ತಪ್ಪಾಗಿ ಅರ್ಥೈಸಿ ದಿನಾಂಕ: 11-2-1998ರ ಟಿಪ್ಪಣಿಯಲ್ಲಿ ಫಲಿತಾಂಶವನ್ನು ಪ್ರಕಟಿಸಲು ಕೈಕೊಂಡ ಕ್ರಮ ಇದಕ್ಕೆ ಇಬ್ಬರೂ ಹೊಣೆಗಾರರಾಗಿದ್ದು ಸದ್ರಿಯವರು ಶಿಸ್ತಿನ ಕ್ರಮಕ್ಕೆ ಬಾಧ್ಯಸ್ಥರಾಗುತ್ತಾರೆ.

ಬ. ಮೇಲಿನ ಇಬ್ಬರು ಸಿಂಡಿಕೇಟಿಗೆ ತಪ್ಪಾಗಿ ಮಾರ್ಗದರ್ಶನ ನೀಡಿದ್ದು ಇದಕ್ಕಾಗಿ ಸದ್ರಿಯವರು ಅಧ್ಯಾದೇಶ ಸಂಖ್ಯೆ: 119 ಅಥವಾ 120 ರಡಿಯಲ್ಲಿ ರಕ್ಷಣೆ ಪಡೆದುಕೊಳ್ಳಲು ಸಾಧ್ಯವಾಗದು.

ಕ. ಕಟ್ಟುನಿಟ್ಟಾಗಿ ಹೇಳಬೇಕೆಂದರೆ, ಶ್ರೀ ವಾಗೀಶ ಹೂಗಾರ ಹಾಗೂ ಅರುಣ ಕಾಖಂಡಕಿ ಇವರಿಗೆ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳನ್ನು ವಿಶ್ವವಿದ್ಯಾಲಯವು ಮರಳಿ ಪಡೆದುಕೊಳ್ಳಲು ಬದ್ಧವಾಗಬೇಕಾಗುತ್ತದೆ.

ಡ. ವಿಶ್ವವಿದ್ಯಾಲಯದ ಕುಲಸಚಿವರು ಮತ್ತು ಕುಲಸಚಿವರು(ಮೌಲ್ಯಮಾಪನ) ಇಂತಹ ವಿಷಯಗಳ ಬಗ್ಗೆ ಏಕೆ ಚಿಂತಿಸಿಲ್ಲವೆಂದು ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಇ. ಭವಿಷ್ಯದಲ್ಲಿ ಇಂತಹ ತಪ್ಪುಗಳು ಮರುಕಳಿಸದಂತೆ ಉದ್ದೇಶಿತ ಅಧ್ಯಾದೇಶಕ್ಕೆ ಹಲವು ಮಾರ್ಗೋಪಾಯಗಳನ್ನು ವಿಶ್ವವಿದ್ಯಾಲಯವು ನಿರೂಪಿಸುವಂತೆ ಕ್ರಮ ಕೈಕೊಳ್ಳಲು ಸೂಚಿಸಲಾಗಿದೆ.

2) ಶ್ರೀ ವಾಗೀಶ ಎಮ್ ಹೂಗಾರ ಬಿ.ಇ.(ಸಿವ್ಹಿಲ್) ಬಿ.ವ್ಹಿ.ಬಿ. ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ ಇವರು ದಿನಾಂಕ: 14.06.2004 ರಂದು ಕುಲಸಚಿವರು ಕ.ವಿ.ವಿ. ಧಾರವಾಡ ಅವರಿಗೆ ಪತ್ರ ಬರೆದು ಅದರಲ್ಲಿ ಈ ಹಿಂದೆ ಶ್ರೀಯುತ್ ಅರುಣ ಕಾಖಂಡಕಿಯವರಿಗೆ ಸಿಂಡಿಕೇಟ ಸಭೆಯು ನಿರ್ಣಯಿಸಿದ ಪ್ರಕಾರ ಫಸ್ಟ್ ಕ್ಲಾಸ್ ಎಂದು ಅಂಕಪಟ್ಟಿಯನ್ನು ನೀಡಿದ್ದನ್ನು ಹಾಗೂ ತನಗೂ ಅನ್ವಯಿಸಿ ದೃಢೀಕರಿಸಲು ಕೇಳಿಕೊಂಡಿದ್ದರು. ಸದರಿ ವಿದ್ಯಾರ್ಥಿಯ ಜುಲೈ 1995ರ ಎಂಟನೆಯ ಸೆಮಿಸ್ಟರ್ ಪರೀಕ್ಷೆಯ ಪರಿಣಾಮವನ್ನು ತಡೆಹಿಡಿಯಲಾಗಿತ್ತು. ಕಾರಣ ಏಳನೆಯ ಸೆಮಿಸ್ಟರ್ ಪರೀಕ್ಷೆಯನ್ನು ಜನೆವರಿ 1995 ಹಾಗೂ ಜುಲೈ 1995 ರಲ್ಲಿ ಅನುತ್ತೀರ್ಣವಾಗಿ ಮುಂದೆ ಏಳನೆಯ ಸೆಮಿಸ್ಟರ್ ಪರೀಕ್ಷೆಯನ್ನು ಜನೆವರಿ 1996 ರಲ್ಲಿ ಹಾಜರಾಗಿ ಮೂರನೆಯ ಯತ್ನದಲ್ಲಿ ಉತ್ತೀರ್ಣರಾದರು. ಸದರ ವಿದ್ಯಾರ್ಥಿಯ ಎಂಟನೆಯ ಸೆಮಿಸ್ಟರ್ ಪರೀಕ್ಷೆ ಪರಿಣಾಮವನ್ನು ಘೋಷಿಸಲು ವಿನಂತಿಸಿಕೊಂಡ ಮೇರೆಗೆ ದಿನಾಂಕ: 11-4-1996 ರಂದು ತಡೆ ಹಿಡಿಯಲ್ಪಟ್ಟ ಎಂಟನೆಯ ಸೆಮಿಸ್ಟರ್ ಪರೀಕ್ಷೆಯ ಪರಿಣಾಮವನ್ನು ಘೋಷಿಸಲಾಯಿತು. ಸದರೀ ವಿದ್ಯಾರ್ಥಿ ಏಳನೆಯ ಸೆಮಿಸ್ಟರ್ ಪರೀಕ್ಷೆಯನ್ನು ಮೂರು ಯತ್ನಗಳಲ್ಲಿ ಪಾಸಾಗಿದ್ದರೂ ಕಣ್ತಪ್ಪಿನಿಂದ ಎಂಟನೆಯ



ಕುಲಸಚಿವರು ಕುಲಪತಿಗಳು

ಸೆಮಿಸ್ಟರ್ ಅಂಕಪಟ್ಟಿಯಲ್ಲಿ 'ಪ್ರಥಮ ವರ್ಗ' ದಲ್ಲಿ ಪಾಸು ಎಂದು ತಪ್ಪಾಗಿ ಸಾರಲಾಗಿದೆ. ಸದರಿ ಸಿಂಡಿಕೇಟ್ ಸಭೆಯ ನಿರ್ಣಯಗಳು ಈ ಕೆಳಗಿನಂತಿವೆ.

**Syndicate Resolutions :**

**Item No.40 dated 19.Nov.2005**

"Syndicate resolved to withdraw the classes awarded to Sri. Vaagish M. Hugar and Sri. Arun Kakhandki and allot the classes as per the provisions of the then existing Statute and send compliance report to H.E. the Chancellor."

**Item No.21 dated 12.05.2006**

"Syndicate after discussion resolved to withdraw First Class awarded inrespect of Shri. Vaagish M. Hugar B.E. (CIVIL) and Shri. Arun Kakhandki B.E. (E & E) and to declare their results of pass class. Further resolved to initiate steps to get the statement of Marks issued to both the them."

3. ಡೀನ್ ಫ್ಯಾಕಲ್ಟಿ ಆಫ್ ಇಂಜನೀಯರಿಂಗ್ ಅವರು ಕೊಟ್ಟ ಅಭಿಪ್ರಾಯವನ್ನು ಮಾನ್ಯ ಕುಲಪತಿಗಳು ವಿದ್ಯಾಮಂಡಳ ಸಭೆಯ (ಎ.ಸಿ.) ಮುಂದೆ ಮಂಡಿಸಲು ಆಜ್ಞಾಪಿಸಿದರು. ಸದರಿ ವಿಷಯವನ್ನು ವಿದ್ಯಾಮಂಡಲ ಸಭೆಯ ಮುಂದೆ ಮಂಡಿಸಲಾಯಿತು. (ದಿನಾಂಕ: 31.12.1998) ಸದರ ಸಭೆಯ ನಡುವಳಿಗಳು ನಮ್ಮ ವಿಭಾಗಕ್ಕೆ ಬರುವ ಪೂರ್ವದಲ್ಲಿ ಶ್ರೀ ಕಾಖಂಡಕಿ ಅವರು ದಿನಾಂಕ: 27.2.1998 ರಂದು ಕುಲಸಚಿವರು(ಮೌಲ್ಯಮಾಪನ) ಅವರನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ "ತಮ್ಮ ಮಗನು ಸಂದರ್ಶನಕ್ಕೆ ಹೋಗಬೇಕಾದ ಪ್ರಯುಕ್ತ ಹಾಗೂ ಪ್ರಥಮ ವರ್ಗದಲ್ಲಿ ಪಾಸಾದ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯವಿರುವುದರಿಂದ ತಮ್ಮ ಮಗನಿಗೆ ಪ್ರಥಮ ವರ್ಗದಲ್ಲಿ ಪಾಸಾದ ಕುರಿತು ಅಂಕಪಟ್ಟಿಯನ್ನು ನೀಡುವಂತೆಯೂ ಹಾಗೂ ಮುಂದೆ ವಿದ್ಯಾಮಂಡಳ ಸಭೆಯಲ್ಲಿ ತಗೆದುಕೊಳ್ಳುವ ಯಾವುದೇ ನಿರ್ಣಯಕ್ಕೆ ತಾವು ಬದ್ಧರಾಗಿರುವುದಾಗಿ ಲಿಖಿತ ಮುಚ್ಚಳಿಕೆ ನೀಡಿದರು. ಸದರಿ ಅರ್ಜಿಯನ್ನು ಕುಲಸಚಿವರು(ಮೌಲ್ಯಮಾಪನ) ಅವರ ಆದೇಶದ ಪ್ರಕಾರ (ಪ್ರತಿ ಲಗತ್ತಿಸಲಾಗಿದೆ) ದಿನಾಂಕ: 30.03.1998 ರಂದು ಶ್ರೀ ಅರುಣ ಕಾಖಂಡಕಿ ಇವರ ಅಂತಿಮ ಬಿ.ಇ. ಪರೀಕ್ಷೆ ಪರಿಣಾಮವನ್ನು ಪ್ರಥಮ ವರ್ಗದಲ್ಲಿ ಪಾಸು ಎಂದು ಪ್ರಕಟಿಸಿ ಅಂಕಪಟ್ಟಿಯನ್ನು ನೀಡಲಾಗಿರುತ್ತದೆ.

4. ವರ್ಗವನ್ನು (class) ಘೋಷಿಸಲು ವಿಶ್ವವಿದ್ಯಾಲಯದ ನಿಯಮಾವಳಿ E.8(a) ಈ ಕೆಳಗಿನಂತಿದೆ.

**DECLARATION OF AWARD OF CLASS :**

**E.8(a)** For the final declaration of successful candidates for the entire course marks obtained by a candidate in not more than 2 consecutive attempts of VII and VIII semesters examinations will be considered for declaration of class.

**(b)** Candidates who secure 70% and above marks in the aggregate of VII and VIII Semesters subject to E.8(a) will be declared to have passed the B.E. degree examination in FIRST CLASS WITH DISTINCTION.

**(c)** Candidates who secure 60% and above but less than 70% marks in the aggregate of VII and VIII Semester subject to E.8(a) will be declared to have passed the B.E. Degree examination in FIRST CLASS.

**(d)** Candidates getting less than 60% marks in the aggregate of VII and VIII Semesters subject to E.8(a) will be declared to have passed the B.E. Degree examination in SECOND CLASS.

5. ಶ್ರೀ ವಾಗೀಶ ಎಂ. ಹೂಗಾರ, ಬಿ.ಇ. (ಸಿವ್ಹಿಲ್) ಹಾಗೂ ಶ್ರೀ ಅರುಣ ಕಾಖಂಡಕಿ, ಬಿ.ಇ. (ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ ಇವರ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ ಪ್ರಥಮ ವರ್ಗವೆಂದು ನೀಡಿದ ಅಂಕಪಟ್ಟಿ ಮರಳಿ ಪಡೆಯಲು ಹಾಗೂ ಪ್ರಥಮ ವರ್ಗದ ಬದಲಾಗಿ ಪಾಸ್ ಎಂದು ತಿದ್ದುಪಡೆ ಮಾಡುವ ಕುರಿತು ದಿನಾಂಕ: 19.11.2005 ಹಾಗೂ ದಿನಾಂಕ: 12.05.2006ರ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ದಿಸೆಯಲ್ಲಿ ಸಂಬಂಧಿಸಿದ



ಕುಲಸಚಿವರು

ಕುಲಪತಿಗಳು

ವಿದ್ಯಾರ್ಥಿಗಳಿಗೆ ಮೂಲ ಅಂಕಪಟ್ಟಿಗಳನ್ನು ಒಪ್ಪಿಸುವುದಕ್ಕೋಸ್ಕರ ತಿಳಿಸಲಾಗಿತ್ತು. ಸದರಿ ವಿಷಯದ ವಿರುದ್ಧ ಶ್ರೀ ಅರುಣ ಎಲ್. ಕಾಖಂಡಕಿ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ: 11427/2007 ದಾಖಲಿಸಿರುತ್ತಾರೆ. ಸದರಿ ರಿಟ್ ಅರ್ಜಿಯ ಪ್ಯಾರಾಗಳಿಗೆ ವಿಶ್ವವಿದ್ಯಾಲಯದಿಂದ ಸ್ಟೇಟಮೆಂಟ್ ಆಫ್ ಆಬ್ಜೆಕ್ಷನ್(Statement of Objection)ನ್ನು ವಿಶ್ವವಿದ್ಯಾಲಯದ ವಕೀಲರು ನ್ಯಾಯಾಲಯಕ್ಕೆ ದಾಖಲಿಸಲಾಗಿ ತದನಂತರ ಸದರ ಪ್ರಕರಣವು ಉಚ್ಚ ನ್ಯಾಯಾಲಯದ ಧಾರವಾಡ ಬೆಂಚ್‌ಗೆ ವರ್ಗಾಯಿಸಿ ದಿನಾಂಕ: 25.07.2022 ರಂದು ಪ್ರಕರಣವು ಇತ್ಯರ್ಥವಾಗಿ ಈ ಕೆಳಗಿನಂತೆ ತನ್ನ ನಿರ್ಣಯವನ್ನು ನೀಡಲಾಗಿರುತ್ತದೆ.

## PORTION OF ORDER

**....11.** As observed above, the petitioner has completed in BE course in the year 1999 and the respondent has initiated action to withdraw the same after lapse of more than six years. The action initiated by the respondent-University is contrary to Ordinance 119 i.e., as per Ex.R.1 As per Ordinance 119 University cannot amend the result after completion of six months from the date of the publication. The proceedings initiated by the respondent University for amending the result suffers from delay and laches. On the said ground itself, the writ petition is liable to be allowed.

**....12.** In view of the above discussion, the writ petition is allowed. The impugned Annexures-M & P are hereby set aside.

ಆರ್ಡಿನನ್ಸ್ 0.119 ಈ ಕೆಳಗಿನಂತಿದೆ.

"0.119. If the result of an examination is discovered to be vitiated by error, malpractice, fraud, improper conduct or any other reason, the syndicate shall have the power to amend result in such manner as to accord with true position and to make such declaration as the Syndicate may deem necessary in that behalf; provided that (but subject to Ordinance 120), no result shall be amended after the expiration of six months from the date of publication."

ಮೇಲ್ಕಾಣಿಸಿದ ಅಂಶಗಳನ್ವಯ ಈ ಮೇಲಿನ ಕಂಡಿಕೆ-2ರಲ್ಲಿ ಕಾಣಿಸಿದ ಎರಡೂ ಸಿಂಡಿಕೇಟ್ ಕಲಂ ಗಳನ್ನು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಬೆಂಚ್ ದಿನಾಂಕ: 25.07.2022 ರಂದು ರದ್ದುಗೊಳಿಸಿದ್ದರ ಕುರಿತು ಮಾನ್ಯ ಸಿಂಡಿಕೇಟ್ ಸಭೆಗೆ ಪರಿಶೀಲಿಸಲು ಮಂಡಿಸಲಾಯಿತು.

### ನಿರ್ಣಯ

**ಶ್ರೀ. ವಾಗೀಶ ಎಂ. ಹೂಗಾರ, ಬಿ.ಇ. (ಸಿವ್ಹಿಲ್) ಸ್ಥಳಾಂಕ: 91AA022 ಹಾಗೂ ಶ್ರೀ ಅರುಣ ಕಾಖಂಡಕಿ, ಬಿ.ಇ. (ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್) ಸ್ಥಳಾಂಕ: 91BC016 ಇವರ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ ಪ್ರಥಮ ವರ್ಗವೆಂದು ನೀಡಿರುವ ಅಂಕಪಟ್ಟಿ ಮರಳಿ ಪಡೆಯುವ ಹಾಗೂ ಪ್ರಥಮ ವರ್ಗದ ಬದಲಾಗಿ ಉತ್ತೀರ್ಣವೆಂದು ತಿದ್ದುಪಡೆ ಮಾಡಿ ನೀಡುವುದರ ಕುರಿತು ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ: 40 ದಿನಾಂಕ: 19.11.2005 ಮತ್ತು ನಿರ್ಣಯ ಸಂಖ್ಯೆ: 21 ದಿನಾಂಕ: 12.05.2006ರ ಎರಡು ನಿರ್ಣಯಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು WP No.11427/2007 ರಲ್ಲಿ ರದ್ದುಗೊಳಿಸಿದ್ದನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ನ್ಯಾಯಾಲಯದ ತೀರ್ಪಿನಂತೆ ಕ್ರಮವಹಿಸಲು ನಿರ್ಣಯಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–03: ವಿಷಯ–:** ಪರೀಕ್ಷಾ ವಿಭಾಗದ ವಿವಿಧ ಶಾಖೆಗಳಿಗೆ ಪ್ರಿಂಟರ್ ಕಮ್ ಸ್ಕ್ಯಾನರ್ ಹಾಗೂ ಡಾಟ್ ಮಾಟ್ರಿಕ್ಸ್ ಪ್ರಿಂಟರ್‌ಗಳನ್ನು ಖರೀದಿಸಲು ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸುವ ಕುರಿತು.

**ಟಿಪ್ಪಣಿ:**

01. ಪರೀಕ್ಷಾ ವಿಭಾಗದ ಗಣಕ ಯಂತ್ರ ಶಾಖೆಗೆ UUCMS ಅಡಿಯಲ್ಲಿ ಎಲ್ಲ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳ ಕೇಂದ್ರಿಯ ಮೌಲ್ಯಮಾಪನ ಕೇಂದ್ರಗಳಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದ ಅಂಕಗಳನ್ನು UUCMS ತಂತ್ರಾಂಶದಲ್ಲಿ ಅಳವಡಿಸುವ ಸಲುವಾಗಿ 10 ಪ್ರಿಂಟರ್ ಕಮ್ ಸ್ಕ್ಯಾನರ್ ಹಾಗೂ ಸಾಮಾನ್ಯ ಆಡಳಿತ, ವಿಜ್ಞಾನ, ಘಟಿಕೋತ್ಸವ ಹಾಗೂ ವಾಣಿಜ್ಯ ವಿಭಾಗಗಳಿಗೆ ಸಂಬಂಧಿಸಿದಂತೆ ದೈನಂದಿನ ಕೆಲಸ ಕಾರ್ಯಗಳೊಂದಿಗೆ ಇ–ಆಫೀಸ್ ಕಾರ್ಯ ನಿರ್ವಹಿಸಲು 02 ಪ್ರಿಂಟರ್ ಕಮ್ ಸ್ಕ್ಯಾನರ್ ಹಾಗೂ 03 ಡಾಟ್ ಮಾಟ್ರಿಕ್ಸ್ ಪ್ರಿಂಟರ್‌ಗಳು ತುಂಬಾ ಅವಶ್ಯಕತೆ ಇರುತ್ತದೆ. ಕಾರಣ ಸದರಿ ಪರಿಕರಗಳನ್ನು ಖರೀದಿಸುವ ಸಲುವಾಗಿ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿವಿಧ ಫರ್ಮಗಳಿಂದ ಕೋಟೆಶನ ಕರೆಯಲಾಗಿತ್ತು. ಅದರನ್ವಯ ವಿವಿಧ ಫರ್ಮಗಳಿಂದ ಪಡೆಯಲಾದ ಕೋಟೆಶನಗಳನ್ನು ಪರಿಶೀಲಿಸಿ ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಅದರ ವಿವರ ಈ ಕೆಳಗಿನಂತಿರುತ್ತದೆ.

| Sl. No . | Particular | Quantity | Plus Point Systems, Belagavi | | Advaitha Consultancy Services, Hubballi | | Renuka Copying Solutions Hubli | |
|---|---|---|---|---|---|---|---|---|
| | | | Rate Each | Total | Rate Each | Total | Rate Each | Total |
| 1 | Printer Cum Scanner | 12 | 18,475/- | 2,21,700/- | 15,250/- | 1,83,000/- | 18,400/- | 2,20,800/- |
| 2 | Dot Matrics Printer | 03 | 27,500/- | 82,500/- | 22,250/- | 66,750/- | 27,400/- | 82,200/- |
| | Terms & Conditions | | 18% GST Inclusive /- | | GST | +44,955/- | 18% GST Inclusive | |
| | Total | | | 3,04,200/- | | 2,94,705/- | | 3,03,000/- |

02. ಸದರ ಮೇಲಿನ ಪರಿಕರಗಳನ್ನು ಖರೀದಿಸುವ ಸಲುವಾಗಿ ವಿವಿಧ ಫರ್ಮಗಳಿಂದ ಪಡೆಯಲಾದ ಕೋಟೆಶನಗಳಲ್ಲಿ ಅತಿ ಕಡಿಮೆ ಅಂದರೆ **ರೂ.2,94,705/–** ದರವನ್ನು M/s. Advaitha Consultancy Services, Hubballi ಇವರು ನೀಡಿರುತ್ತಾರೆ. ಕಾರಣ, ಪರೀಕ್ಷಾ ವಿಭಾಗದ ವಿವಿಧ ಶಾಖೆಗಳಿಗೆ ಸಂಬಂಧಪಟ್ಟಂತೆ ಸದರ ಪರಿಕರಗಳನ್ನು M/s. Advaitha Consultancy Services, Hubballi ಇವರಿಂದ ಖರೀದಿಸುವ ವಿಷಯವಾಗಿ ದೊಡ್ಡ ಖರೀದಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿತ್ತು. ಸದರ ಸಮಿತಿ ಅಭೆಯ ನಿರ್ಣಯ ಈ ಕೆಳಗಿನಂತಿದೆ.

"ಪರೀಕ್ಷಾ ವಿಭಾಗದ ವಿವಿಧ ಶಾಖೆಗಳಿಗೆ ಅವಶ್ಯವಾಗಿ ಬೇಕಾದಂತಹ 12 ಪ್ರೀಂಟರ್ ಕಂ ಸ್ಕ್ಯಾನರ್‌ಗಳು ಹಾಗೂ 3 ಡಾಟ್ ಮ್ಯಾಟ್ರಿಕ್ಸ ಪ್ರೀಂಟರ್‌ಗಳನ್ನು ಅತಿ ಕಡಿಮೆ ದರ ರೂ.2,94,705=00 ವನ್ನು ಸೂಚಿಸಿದ ಮೆ। ಅದ್ವೈತಾ ಕನ್ಸಲ್ಟೆನ್ಸಿ ಅರ್ವಿಸಿಸ್, ಹುಬ್ಬಳ್ಳಿ ಇವರಿಂದ ನಿಯಮಾವಳಿಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿ ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿತು."

03. ಕಾರಣ ದೊಡ್ಡ ಖರೀದಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಸಭೆಯಲ್ಲಿ ದೃಢೀಕರಣಕ್ಕಾಗಿ ಮಂಡಿಸಲಾಯಿತು.

**ನಿರ್ಣಯ**

ಪರೀಕ್ಷಾ ವಿಭಾಗದ ವಿವಿಧ ಶಾಖೆಗಳಿಗೆ ಅವಶ್ಯವಿರುವಂತಹ 12 ಪ್ರಿಂಟರ್ ಕಮ್ ಸ್ಕ್ಯಾನರ್ ಹಾಗೂ 03 ಡಾಟ್ ಮಾಟ್ರಿಕ್ಸ್ ಪ್ರಿಂಟರ್‌ಗಳನ್ನು ರೂ.2,94,705/–ಗಳಲ್ಲಿ M/s. Advaitha Consultancy Services, Hubballi ಇವರಿಂದ ಖರೀದಿಸಲು ದೊಡ್ಡ ಖರೀದಿ ಸಮಿತಿಯು ಮಾಡಿರುವ ಶಿಫಾರಸ್ಸನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಅನುಮೋದಿಸಿತು.



ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ–04: ವಿಷಯ–**: M/s Karnatak State Electronic Development Corporation Limited Banglore (KEONICS) ಇವರು ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಹೈಯರ್ ಕಾನ್ಫಿಗರೇಷನ್ ಸರ್ವರ್ ಪೂರೈಸಿದ ಮೊತ್ತ ರೂ.18,65,227/– ಗಳನ್ನು ಪಾವತಿಸುವ ವಿಷಯವನ್ನು ಆಡಳಿತ ಮಂಡಳಿಯ ಸಮಿತಿಯ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ :

1. ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಒಂದು ಹೈ ಕಾನ್ಫಿಗರೇಷನ್ ಸರ್ವರ್ ಖರೀದಿಸುವ ವಿಷಯವಾಗಿ ದಿನಾಂಕ:09.06.2020 ರಂದು ಜರುಗಿದ ವಿಶೇಷ ಆಡಳಿತ ಮಂಡಳಿಯ ಸಭೆಯಲ್ಲಿ ಕುಲಸಚಿವರು ಮೌಲ್ಯಮಾಪನ ಇವರು ಪರೀಕ್ಷಾ ವಿಭಾಗಕ್ಕೆ ಅತೀ ತುರ್ತಾಗಿ ಹೈ ಕಾನ್ಫಿಗರೇಷನ್ ಸರ್ವರ್ ಅಗತ್ಯವಿರುವುದರಿಂದ ಅನುಮೋದನೆ ನೀಡಬೇಕೆಂದು ಕೋರಿಕೊಂಡಾಗ, ಸಿಂಡಿಕೇಟ ಸಭೆಯು ತನ್ನ ನಿರ್ಣಯ ಸಂಖ್ಯೆ 09 ದಿನಾಂಕ:09.06.2020 ರಂದು ಅದಕ್ಕೆ ಸಮ್ಮತಿಯನ್ನು ಸೂಚಿಸಿತು. ಅದರನ್ವಯ ದಿನಾಂಕ:10.07.2020 ರಂದು M/s Karnatak State Electronic Development Corporation Limited Banglore (KEONICS) ಇವರಿಗೆ ಕಾರ್ಯಾದೇಶ ನೀಡಲಾಗಿತ್ತು. ಸದರ ಆದೇಶದನ್ವಯ ಕಂಪನಿಯವರು ಪರೀಕ್ಷಾ ವಿಭಾಗಕ್ಕೆ ಹೈ ಕಾನ್ಫಿಗರೇಷನ್ ಸರ್ವರ್‌ನ್ನು ಪೂರೈಸಿ ಅದಕ್ಕೆ ತಗಲುವ ವೆಚ್ಚ ರೂ.18,65,227/–ಗಳನ್ನು ಪಾವತಿಸಲು ಬಿಲ್ಲನ್ನು ದಿನಾಂಕ:14.10.2020 ರಂದು ಸಲ್ಲಿಸಿರುತ್ತಾರೆ. ನಂತರ Karnatak State Electronic Development Corporation Limited Banglore (KEONICS) ಇವರಿಗೆ ಸದರಿ ಬಿಲ್ಲನ್ನು ಪಾವತಿಸಲು ಹಣಕಾಸು ಅಧಿಕಾರಿಗಳಿಗೆ ದಿನಾಂಕ:28.11.2020 ರಂದು ಮೂಲ ಕಡತವನ್ನು ರವಾನಿಸಲಾಗಿತ್ತು. ಸದರ ವಿಷಯವಾಗಿ ವಿತ್ತಾಧಿಕಾರಿಗಳು ತಮ್ಮ ಪತ್ರ ದಿನಾಂಕ:10.12.2020 ರ ಮುಖಾಂತರ ಪರೀಕ್ಷಾ ವಿಭಾಗಕ್ಕೆ ಹೈ ಕಾನ್ಫಿಗರೇಷನ್ ಸರ್ವರ್ ಖರೀದಿಸಿದ ಮೊತ್ತವು General Financial Rule 146 ರ ಪ್ರಕಾರ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಯಾವುದೇ ವಸ್ತುಗಳ ಖರೀದಿಗಾಗಿ ದೊಡ್ಡ ಖರೀದಿ ಸಮಿತಿ ಸಭೆಯ ಮಂಜೂರಾತಿ ಪಡೆಯುವುದು ಅವಶ್ಯವಾಗಿರುವ ಪ್ರಯುಕ್ತ ದೊಡ್ಡ ಖರೀದಿ ಸಮಿತಿ ಸಭೆಯ ಮಂಜೂರಾತಿ ಪ್ರತಿಯನ್ನು ಲಗತ್ತಿಸಿ ಕಳುಹಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮೂಲ ಕಡತವನ್ನು ಮರಳಿ ಕಳುಹಿಸಿರುತ್ತಾರೆ.

2. ಶ್ರೀ ಸುಧೀಂದ್ರ ದೇಶಪಾಂಡೆ, ಸಿಂಡಿಕೇಟ ಸದಸ್ಯರು ದಿನಾಂಕ:10.12.2020 ರಂದು ಕುಲಪತಿಗಳಿಗೆ ಮನವಿಯನ್ನು ಸಲ್ಲಿಸಿ ಪರೀಕ್ಷಾ ವಿಭಾಗಕ್ಕೆ ಹೈ ಕಾನ್ಫಿಗರೇಷನ್ ಸರ್ವರ್ ಖರೀದಿಸಿದ್ದರ ಕುರಿತು ಹಾಗೂ 09.12.2020 ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿರುವ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ವಿನಂತಿಸಿದ ಹಿನ್ನೆಲೆಯಲ್ಲಿ, ಸದರ ವಿಷಯವನ್ನು ಚರ್ಚಿಸಲು ದಿನಾಂಕ:27.04.2021 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಮಂಡಿಸಲಾಗಿತ್ತು. ಸದರ ಸಿಂಡಿಕೇಟ ಸಭೆಯು ನಿರ್ಣಯ ಸಂಖ್ಯೆ.05 ರಲ್ಲಿ ಪರೀಕ್ಷಾ ವಿಭಾಗದ ಗಣಕಯಂತ್ರ ವಿಭಾಗಕ್ಕೆ ಹೈ ಕಾನ್ಫಿಗರೇಷನ್ ಸರ್ವರ್‌ಗಳನ್ನು ಖರೀದಿಸಿದ್ದರ ಬಗ್ಗೆ ಸರ್ವರ್‌ಗಳ ದರಗಳ ಬಗ್ಗೆ ಸಂಧಾನ ನಡೆಸಲು ಉಪ ಸಮಿತಿಯನ್ನು ನೇಮಿಸಿ, ಸಮೀತಿಯು ವರದಿಯನ್ನು 15 ದಿನಗಳೊಳಗಾಗಿ ಸಲ್ಲಿಸಬೇಕೆಂದು ತೀರ್ಮಾನಿಸಿತು.

3. ಮುಂದುವರೆದು, ಉಪಸಮಿತಿಯು ಸರ್ವರ್‌ಗಳ ದರ ಸಂಧಾನದ ಬಗ್ಗೆ ಹಲವಾರು ಬಾರಿ ಸಭೆ ಸೇರಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ:28.12.2021 ರಂದು ನೀಡಿತು. ಸದರ ಉಪಸಮಿತಿಯು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ದಿನಾಂಕ:29.12.2021 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ, ಸಭೆಯು ನಿರ್ಣಯ ಸಂಖ್ಯೆ '15' ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿತು

> **"ಪರೀಕ್ಷಾ ವಿಭಾಗಕ್ಕೆ ಹೈ ಕಾನಫೀಗರೇಷನ್ ಸರ್ವರ್‌ಗಳನ್ನು ಖರೀದಿಸಿದ್ದರ ಕುರಿತು ರಚಿಸಿದ ಸಿಂಡಿಕೇಟ ಉಪಸಮಿತಿಯು ಸಲ್ಲಿಸಿದ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ್ ಸಭೆಯಲ್ಲಿ ತೆರೆದು. ಪರಿಶೀಲಿಸಿದ ನಂತರ ವರದಿಯ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಅದಕ್ಕೆ ಬೇಕಾದ ಸಾಫ್ಟವೇರ್ ಮತ್ತು ಹಾರ್ಡವೇರ್‌ಗಳನ್ನು ಸಮುಚಿತ ಮಾರ್ಗದಲ್ಲಿ ಖರೀದಿಸಲು ಸಭೆಯು ಒಪ್ಪಿಗೆ ನೀಡಿತು."**

4. ಮೇಲಿನ ಸಿಂಡಿಕೇಟ್ ನಿರ್ಣಯದನ್ವಯ ಹೈ ಕಾನ್ಫಿಗರೇಷನ್ ಸರ್ವರ್‌ಗಳಿಗೆ ತಂತ್ರಾಂಶಗಳನ್ನು ಕಂಪನಿಯ ಖರ್ಚಿನಲ್ಲಿಯೆ ಉಚಿತವಾಗಿ ಅಳವಡಿಸಿಕೊಡುವಂತೆ ಶ್ರೀ ರಾಜೇಶ ಜೈನ್, ಸಿ.ಇ.ಓ., ಸ್ಟೋರ್ಸ ಓನ್ ಇಂಕ್, ಬೆಂಗಳೂರು ಇವರಿಗೆ ದಿನಾಂಕ 18.03.2022 ರಂದು ಪತ್ರವನ್ನು ಬರೆಯಲಾಗಿತ್ತು. ಅದರನ್ವಯ ಸದರಿಯವರು



ಕುಲಸಚಿವರು ಕುಲಪತಿಗಳು

ದಿನಾಂಕ:10.08.2022 ರಂದು ಪರೀಕ್ಷಾ ವಿಭಾಗದ ಗಣಕಯಂತ್ರ ಕೇಂದ್ರದ ಸರ್ವರ್‌ಗೆ ಉಚಿತವಾಗಿ ತಂತ್ರಾಂಶಗಳನ್ನು ಅಳವಡಿಸಿರುವುದಾಗಿ ತಿಳಿಸಿ ಪತ್ರವನ್ನು ಸಲ್ಲಿಸಿರುತ್ತಾರೆ. ಅದರಂತೆ ಸಿಸ್ಟಮ್ ಅನಾಲಿಸ್ಟ ಇವರು ಸದರ ತಂತ್ರಾಂಶಗಳನ್ನು ಅಳವಡಿಸಿರುವುದಾಗಿ ದೃಢೀಕರಿಸಿತ್ತಾರೆ.

5. ಕಾರಣ, ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಅವಲೋಕಿಸಿ ಹಾಗೂ ಹಣಕಾಸು ಅಧಿಕಾರಿಗಳ ಪತ್ರ ದಿನಾಂಕ:10.12.2020 ರನ್ವಯ M/s Karnatak State Electronic Development Corporation Limited Banglore (KEONICS) ಇವರು ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಹೈ ಕಾನ್ಫಿಗರೇಷನ್ ಸರ್ವರ್ ಪೂರೈಸಿದ ಮೊತ್ತ ರೂ.18,65,227/– ಗಳನ್ನು ಪಾವತಿಸುವ ವಿಷಯವನ್ನು ದೊಡ್ಡ ಖರೀದಿ ಸಮಿತಿಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿತ್ತು. ದೊಡ್ಡ ಖರೀದಿ ಸಮಿತ ನಿರ್ಣಯ ಈ ಕೆಳಗಿನಂತಿದೆ.

"ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಅವಶ್ಯವಿದ್ದ ಹೈಯರ್ ಕಾನ್ಫಿಗರೇಶನ್ ಸರ್ವರ್ ದಿನಾಂಕ: 29/12/2021 ರಂದು ಜರುಗಿದ ಸಿಂಡಿಕೇಟ್ ಸಭೆಯ ಕೈಗೊಂಡ ಕಲಂ 15 ರಲ್ಲಿ ನಿರ್ಣಯದಂತೆ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು (KEONICS) ಇವರಿಂದ ಖರೀದಿಸಲಾಗಿದ್ದು, ಸರ್ವರ್ ಖರೀದಿಸದ ಮೊತ್ತ ರೂ.18,65,227/–ಗಳನ್ನು ಪಾವತಿಸುವ ವಿಷಯವಾಗಿ ದೊಡ್ಡ ಖರೀದಿ ಸಮಿತಿಯು ಅನುಮೋದನೆಯನ್ನು ನೀಡಿತು.

ಆದ್ದರಿಂದ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು. ಇವರಿಂದ ಹೈಯರ್ ಕಾನ್ಫಿಗರೇಶನ್ ಸರ್ವರ್ ಮತ್ತು ಸದರ ಸರ್ವರ್‌ಗೆ ಉಚಿತವಾಗಿ ತಂತ್ರಾಂಶವನ್ನು ಅಳವಡಿಸಿದ ವಿಷಯವನ್ನು ಆಡಳಿತ ಮಂಡಳಿ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

<u>ನಿರ್ಣಯ</u>

ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಅವಶ್ಯವಿರುವಂತಹ ಹೈಯರ್ ಕಾನ್ಫಿಗರೇಷನ್ ಸರ್ವರ್ **M/s Karnatak State Electronic Development Corporation Limited, Bangalore (KEONICS)** ಇವರಿಂದ ಖರೀದಿಸಿರುವ ವಿಷಯವಾಗಿ ಮೊತ್ತ ರೂ.18,65,227/– ಗಳನ್ನು ಪಾವತಿಸುವ ಬಗ್ಗೆ ದೊಡ್ಡ ಖರೀದಿ ಸಮಿತಿಯ ಶಿಫಾರಸ್ಸನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–05: ವಿಷಯ–:** ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರಿಂದ ಒಂದು ಹೈ ವರ್ಷನ್ ಕಲರ್ ಲೇಜರ್ ಪ್ರಿಂಟರ್, ಒಂದು ಲೈನ್ ಪ್ರಿಂಟರ್‌ಗಳನ್ನು ಖರೀದಿಸಿದ್ದರ ಕುರಿತು ಮಾನ್ಯ ಕುಲಪತಿಗಳು ತೆಗೆದುಕೊಂಡು ಕ್ರಮವನ್ನು ಆಡಳಿತ ಮಂಡಳಿ ಸಭೆಯ ಧೃಢೀಕರಣಕ್ಕಾಗಿ ಕುರಿತು.

ಟಿಪ್ಪಣಿ:

ದಿನಾಂಕ: 09.06.2020ರಂದು ನಡೆದ ವಿಶೇಷ ಆಡಳಿತ ಮಂಡಳಿಯ ಸಭೆಯಲ್ಲಿ ಪರೀಕ್ಷಾ ವಿಭಾಗಕ್ಕೆ ಅತೀ ಅವಶ್ಯವಿರುವ ಪರೀಕ್ಷಾ ಕಾರ್ಯಗಳಿಗೆ ಹಾಗೂ ಅಂಕಪಟ್ಟಿಗಳ ಮುದ್ರಣಕ್ಕಾಗಿ ಹೈ ವರ್ಷನ್ ಕಲರ್ ಲೇಜರ್ ಪ್ರಿಂಟರ್, ಒಂದು ಲೈನ್ ಪ್ರಿಂಟರ್ ಖರೀದಿಸಲು ಅನುಮೋದನೆ ನೀಡಿದ್ದರಿಂದ ಸದರ ಪ್ರಿಂಟರ್ ಮತ್ತು ಸರ್ವಗಳನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರಿಂದ ಖರೀದಿಸಲಾಗಿದೆ. ಸದರ ಪ್ರಿಂಟರ್‌ಗಳ ಬೆಲೆಯು ಈ ಕೆಳಗಿನಂತಿದೆ.

| Sl.No | Particular | Amount |
|---|---|---|
| 01 | Printonix P8220,2000LPM With Cabinate Line Printer | Rs.10,99,820=00 |
| 02 | High Version Colour Laser Printer Konica Minolta C 450i | RS 6,99,493=00 |

ಸದರ ಪ್ರಿಂಟರಗಳನ್ನು ರಾಜ್ಯ ಸರ್ಕಾರದ ಆದೇಶ ಪತ್ರ ಸಂಖ್ಯೆ ಆಇ/1033/ವೆಚ್ಚ–12/19 ದಿನಾಂಕ:06/12/2019ರಲ್ಲಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರಿಂದ ನೇರವಾಗಿ ಖರೀದಿಸಲು ಮಾನ್ಯ ಕುಲಪತಿಗಳು ನಿರ್ದೇಶನ ನೀಡಿರುತ್ತಾರೆ.

ನಿಯಮಗಳ ಪ್ರಕಾರ ರೂಪಾಯಿ ಒಂದು ಲಕ್ಷ ರೂಗಳಿಗಿಂದ ಹೆಚ್ಚಿಗೆ ಮೊತ್ತದ ಸಾಮಗ್ರಿಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯ ಒಪ್ಪಗೆಯನ್ನು ಪಡೆಯುವುದು ಅವಶ್ಯವಾಗಿರುತ್ತದೆ.

ಆದ್ದರಿಂದ, ಪರೀಕ್ಷಾ ವಿಭಾಗದಲ್ಲಿ ಸದರ ಪ್ರಿಂಟರ್‌ಗಳು ಅತೀ ಅವಶ್ಯವಾಗಿ ಬೇಕಾಗಿರುವದರಿಂದ ಮಾನ್ಯ ಕುಲಪತಿಗಳು ದಿನಾಂಕ:22, 29/06/2020ರಂದು ಆದೇಶ ನೀಡಿರುವ ಪ್ರಕಾರ ಕಚೇರಿ ಪತ್ರ ಸಂಖ್ಯೆ:295, 296 ದಿನಾಂಕ:10/07/2020ರ ಮೂಲಕ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರಿಗೆ ಕಾರ್ಯಾದೇಶ ನೀಡಿ ಸದರ ಪ್ರಿಟಂರ್‌ಗಳನ್ನ ಖರೀದಿಸಲಾಗಿದೆ.

ಮುಂದುವರೆದು, ದಿನಾಂಕ:24/08/2019ರಂದು ಜರುಗಿದ ಅಂತಿಮ ತಾಂತ್ರಿಕ ಸಭೆಯಲ್ಲಿ ಒಂದು 2000LPM Line Printer ನ್ನು ಟೆಂಡರ್ ಮುಖಾಂತರ ಖರೀದಿಸಲು ಒಪ್ಪಿಗೆಯನ್ನು ಸೂಚಿಸಿತು ನಂತರ ಕಾರಣಾಂತರಗಳಿಂದ ಪ್ರಿಂಟರ್‌ನ್ನು ಖರೀಸಿರುವುದಿಲ್ಲ. ನಂತರ ದಿನಾಂಕ:09/06/2020ರಂದು ನಡೆದ ವಿಶೇಷ ಆಡಳಿತ ಮಂಡಳಿಯ ಸಭೆಯಲ್ಲಿ ಸದರ ಲೈನ್ ಪ್ರಿಂಟರ್‌ನ್ನು ಖರೀದಿಸಲು ಅನುಮೋದನೆ ನೀಡಿದ್ದರಿಂದ ಒಂದು 2000LPM Line Printerನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರಿಂದ ಖರೀದಿಸಲಾಗಿದೆ.

ದಿನಾಂಕ:22/02/2021ರಂದು ನಡೆದ ತಾಂತ್ರಿಕ ಸಭೆಯಲ್ಲಿ ಕಲರ್ ಪ್ರಿಂಟರ್‌ನ ಯಾವುದೇ ತಾಂತ್ರಿಕ ವರದಿಯನ್ನು ನೀಡಲು ಈ ಸಮಿತಿಯ ವ್ಯಾಪ್ತಿಗೆ ಬರುವುದಿಲ್ಲವೆಂದು ತಾಂತ್ರಿಕ ಪರಿಣಿತರು ತಿಳಿಸಿರುವರು.



ಕುಲಸಚಿವರು ಕುಲಪತಿಗಳು

ಆದ್ದರಿಂದ, ಸದರ ಪ್ರಿಂಟರ್‌ಗಳನ್ನು ಖರೀದಿಸದ್ದರ ಮೊತ್ತವನ್ನು ಪಾವತಿಸಲು ಸದರ ವಿಷಯವಾಗಿ ಮಾನ್ಯ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ದೊಡ್ಡ ಖರೀದಿ ಸಮಿತಿ ಸಭೆಯ ದೃಡೀಕರಣಕ್ಕಾಗಿ ಮಂಡಿಸಲಾಗಿತ್ತು. ಸದರ ಸಮಿತಿ ಸಭೆಯ ನಿರ್ಣಯ ಈ ಕೆಳಗಿನಂತಿದೆ.

**"ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಅತಿ ಅವಶ್ಯವಾದ ಕಾರ್ಯಗಳಿಗೆ ಹಾಗೂ ಅಂಕಪಟ್ಟಿಗಳ ಮುದ್ರಣಕ್ಕೆ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು (Keonics) ಇವರಿಂದ ಒಂದು ಹೈ ವರ್ಷನ್ ಕಲರ್ ಲೇಜರ್ ಪ್ರಿಂಟರ್ ಒಂದು ಲೈನ್ ಪ್ರಿಂಟರ್ ಖರೀದಿಸಲು ಕೈಗೊಂಡ ಕ್ರಮವನ್ನು ಕೂಲಂಕುಶವಾಗಿ ಪರಿಶೀಲಿಸಿ ಒಟ್ಟು ಮೊತ್ತ ರೂ.17,99,313/- ಗಳನ್ನು ಪಾವತಿಸಲು ಧೃಡೀಕರಿಸಲಾಯಿತು".**

ಕಾರಣ ದೊಡ್ಡ ಖರೀದಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಆಡಳಿತ ಮಂಡಳಿ ಸಭೆಯ ಧೃಡೀಕರಣಕ್ಕಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರಿಂದ ಪರೀಕ್ಷಾ ವಿಭಾಗಕ್ಕೆ ಅವಶ್ಯವಿರುವ ಒಂದು ಹೈ ವರ್ಷನ್ ಕಲರ್ ಲೇಜರ್ ಪ್ರಿಂಟರ್, ಒಂದು ಲೈನ್ ಪ್ರಿಂಟರ್‌ಗಳನ್ನು ರೂ.17,99,313/- ಗಳಲ್ಲಿ ಖರೀದಿಸಿದ ದರವನ್ನು ಪಾವತಿಸಲು ದೊಡ್ಡ ಖರೀದಿ ಸಮಿತಿಯ ಶಿಫಾರಸ್ಸನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಅನುಮೋದಿಸಿತು.**



ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ-06: ವಿಷಯ-:** ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಿರುವ ಅಂಕಪಟ್ಟಿಗಳು, ಉತ್ತೀರ್ಣ ಪ್ರಮಾಣ ಪತ್ರ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಿದ ಮೊತ್ತದಲ್ಲಿ ವ್ಯತ್ಯಾಸವಾದ ಹಿನ್ನಲೆಯಲ್ಲಿ ದೊಡ್ಡ ಖರೀದಿ ಸಮಿತಿಯ ಶಿಫಾರಸ್ಸನ್ನು ಆಡಳಿತ ಮಂಡಳಿಯ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.

ಟಿಪ್ಪಣಿ :

1. ಪರೀಕ್ಷಾ ವಿಭಾಗಕ್ಕೆ ಮಾರ್ಚ-2022, ಅಗಸ್ಟ್/ಸಪ್ಟೆಂಬರ್-2022 ರಲ್ಲಿ ಜರುಗಿರುವ ಹಾಗೂ ಮಾರ್ಚ-2023 ರಲ್ಲಿ ಜರುಗಲಿರುವ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳಿಗೆ ಹಾಜರಾಗಿರುವ/ಹಾಜರಾಗುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ, ಉತ್ತೀರ್ಣ ಪ್ರಮಾಣ ಪತ್ರ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಈ ಕೆಳಗಿನ ನಮೂನೆಯ ಅಂಕಪಟ್ಟಿಗಳು, ಉತ್ತೀರ್ಣ ಪ್ರಮಾಣ ಪತ್ರ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸುವ ವಿಷಯವನ್ನು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ದಿನಾಂಕ.16.09.2022 ರಂದು ಜರುಗಿದ ದೊಡ್ಡ ಖರೀದಿ ಸಮಿತಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಸಭೆಯು **ಕಲಂ ನಂ-01** ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**"ಆಯವ್ಯಯ ಅಂದಾಜು 2022-23 ರಲ್ಲಿ ಲೆಕ್ಕ ಶಿರ್ಷಿಕೆ 20026 ಅಗಸ್ಟ್/ಸಪ್ಟೆಂಬರ್-2022 ರಲ್ಲಿ ಜರುಗಿರುವ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಪಟ್ಟ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಈಗಿರುವ ಭದ್ರತಾ ವೈಶಿಷ್ಟಗಳೊಂದಿಗೆ ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಕಾಣಿಸಿದಂತೆ ಒಪ್ಪಿಗೆ ಸೂಚಿಸಿತು"**

| Sl No | Particulars of Marks Cards and Degree Certificates | Present Stock | Requirement to be purchased for March-2022, August-2022 & March-2023 Examinations | Total Amount as per MSIL approved rates |
|---|---|---|---|---|
| **I** | **II** | **III** | **IV** | **V** |
| 1 | 'A' Series Marks Card | Nil | 1,30,000 | Rs. 35.175 X 1,30,000 = Rs. 43,12,750/- |
| 2 | 'F' Series Marks Card | Nil | 20,000 | Rs. 35.175 X 20,000 = Rs. 6,63,500/- |
| 3 | Passing Certificates | Nil | 30,000 | Rs. 17.58 X 30,000 = Rs. 5,27,400/- |
| 4 | PG CBCS Marks Cards | Nil | 50,000 | Rs. 35.175 X 50,000 = Rs. 16,58,750/- |
| 5 | UG CBCS Marks Cards | Nil | 1,50,000 | Rs. 35.175 X 1,50,000 = Rs. 49,76,250/- |
| 6 | Degree Certificates | Nil | 30,000 | Rs. 35.175 X 30,000= Rs. 9,95,250/- |
| | | | Total: | Rs. 1,31,33,900/- + GST + Transport charges |

3. ದಿನಾಂಕ.16.09.2022 ರ ದೊಡ್ಡ ಖರೀದಿ ಸಭೆಯ ನಿರ್ಣಯದಂತೆ ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಅಂಕಪಟ್ಟಿಗಳು, ಉತ್ತೀರ್ಣ ಪ್ರಮಾಣ ಪತ್ರಗಳು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸುವ ಕುರಿತು ಕಾರ್ಯಾದೇಶವನ್ನು ದಿನಾಂಕ.01.10.2022 ರಂದು ನೀಡಲಾಗಿರುತ್ತದೆ.

2. ಮುಂದುವರೆದು, ದಿನಾಂಕ.16.09.2022 ರ ದೊಡ್ಡ ಖರೀದಿ ಸಮಿತಿ ಸಭೆಯ ನಿರ್ಣಯವನ್ನು ದಿನಾಂಕ.05.12.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ಧೃಢೀಕರಣಕ್ಕಾಗಿ ಮಂಡಿಸಲಾಗಿ, ಸಭೆಯು ತನ್ನ ನಿರ್ಣಯ ಸಂಖ್ಯೆ.8 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**"ಪರೀಕ್ಷಾ ವಿಭಾಗಕ್ಕೆ ಬೇಕಾದಂತಹ ವಿವಿಧ ನಮೂನೆಯ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ದೊಡ್ಡ ಖರೀದಿ ಸಮಿತಿ ಸಭೆಯ ಒಪ್ಪಿಗೆಯಂತೆ ಖರೀದಿಸಲು ಕುಲಪತಿಗಳು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಧೃಢೀಕರಿಸಿತು"**

3. ಮುಂದುವರೆದು, ಎಂ.ಎಸ್.ಆಯ್.ಎಲ್. ಬೆಂಗಳೂರು ಇವರು ಮೇಲೆ ನಮೂದಿಸಿದಂತೆ ಎಲ್ಲ ಮಾದರಿಯ ಅಂಕಪಟ್ಟಿಗಳು, ಉತ್ತೀರ್ಣ ಪ್ರಮಾಣ ಪತ್ರ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಪರೀಕ್ಷಾ ವಿಭಾಗಕ್ಕೆ ಪೂರೈಸಿ, ಬಿಲ್ಲಿನ ಮೊತ್ತವನ್ನು ಪಾವತಿಸಲು ವಿನಂತಿಸಿರುತ್ತಾರೆ. ಎಂ.ಎಸ್.ಆಯ್.ಎಲ್. ಬೆಂಗಳೂರು ಇವರು ಪೂರೈಸಿದ ಬಿಲ್ಲುಗಳನ್ನು ಕಡತದಲ್ಲಿರುವ ವಿವರಗಳೊಂದಿಗೆ ಪರಿಶೀಲಿಸಲಾಗಿ, ಕಡತದಲ್ಲಿ ಮೇಲೆ **ಕಾಲಂ- V** ರಲ್ಲಿ ನಮೂದಿಸಿದ ದರಗಳಲ್ಲಿ



ಕುಲಸಚಿವರು ಕುಲಪತಿಗಳು

**Rs. 1,38,93,900/- + GST + Freight charges** ಎಂದು ನಮೂದಾಗುವ ಬದಲಾಗಿ ನಜರಚೂಕಿನಿಂದ ತಪ್ಪಾಗಿ Rs. 1,31,33,900/- + GST + Transport charges ಎಂದು ನಮೂದಾಗಿರುವುದು ಕಂಡುಬಂದಿರುತ್ತದೆ. ಕಾರಣ ಸದರ ದರಗಳಲ್ಲಿನ ವ್ಯತ್ಯಾಸವನ್ನು ಈ ಕೆಳಗಿನಂತೆ ಸರಿಪಡಿಸಲಾಗಿರುವುದನ್ನು ತಮ್ಮ ಅವಗಾಹನೆಗೆ ತರಲಾಗಿದೆ.

| Sl No | Particulars of Marks cards & Degree Certificates | Present Stock | Requirement to be purchased for March-2022, August-2022 & March-2023 Examinations | Total Amount as per MSIL approved rates |
|---|---|---|---|---|
| 1 | 'A' Series Marks Card | Nil | 1,30,000 | 35.175 X 1,30,000 = Rs. 45,72,750/- |
| 2 | 'F' Series Marks Card | Nil | 20,000 | 35.175 X 20,000 = Rs. 7,03,500/- |
| 3 | Passing Certificates | Nil | 30,000 | 17.58 X 30,000 = 5,27,400/- |
| 4 | PG CBCS Marks Cards | Nil | 50,000 | 35.175 X 50,000 = 17,58750/- |
| 5 | UG CBCS Marks Cards | Nil | 1,50,000 | 35.175 X 1,50,000 = 52,76,250/- |
| 6 | Degree Certificates | Nil | 30,000 | 35.175 X 30,000= 10,55,250/- |
| | | | Total: | 1,38,93,900/- + GST + Freight charges |

4. ಕಾರಣ ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಅವಲೋಕಿಸಿ, ದಿನಾಂಕ.16.09.2022 ರಂದು ಜರುಗಿದ ದೊಡ್ಡ ಖರೀದಿ ಸಮಿತಿ. ಸಭೆಯು ಕಲಂ ನಂ–01 ರಲ್ಲಿ ನಿರ್ಣಯಿಸಿದ ನಿರ್ಣಯವನ್ನು ಕಂಡಿಕೆ '03' ರಲ್ಲಿ ನಮೂದಿಸಿದ ದರಗಳನ್ವಯ ಸರಿಪಡಿಸಿ ದೊಡ್ಡ ಖರೀದಿ ಸಭೆಯಲ್ಲಿ ತಿದ್ದುಪಡಿ ನಿರ್ಣಯವನ್ನು ಹೊರಡಿಸುವ ಕುರಿತಂತೆ ವಿಷಯವನ್ನು ದೊಡ್ಡ ಖರೀದಿ ಸಮಿತಿ ಸಭೆಯ ಮರುಪರಿಶೀಲನೆಗಾಗಿ ದಿನಾಂಕ:30.12.2022 ರಂದು ಜರುಗಿದ ದೊಡ್ಡ ಖರೀದಿಸಮೀತಿ ಸಭೆಯಲ್ಲಿ ಮಂಡಿಸಲಾಗಿತ್ತು. ಸದರ ಸಮಿತಿ ಸಭೆಯ ನಿರ್ಣಯ ಈ ಕೆಳಗಿನಂತಿದೆ.

"ಪರೀಕ್ಷಾ ವಿಭಾಗಕ್ಕೆ ಅವಶ್ಯವಾಗಿರುವ ವಿವಿಧ ಕೋರ್ಸಗಳಿಗೆ ಬೇಕಾದ ಅಂಕಪಟ್ಟಿಗಳು, ಉತೀರ್ಣ ಪ್ರಮಾಣಪತ್ರಗಳು ಮತ್ತು ಪದವಿ ಪ್ರಮಾಣಪತ್ರಗಳನ್ನು ಎಂ.ಎಸ್ಐಎಲ್ ದಿಂದ ಖರೀದಿಸಿರುವ ವಿಷಯವನ್ನು ದಿನಾಂಕ: 16/09/2022 ರಂದು ಜರುಗಿದ ದೊಡ್ಡ ಖರೀದಿ ಸಮಿತಿಯು ಒಟ್ಟು ರೂ.1,31,33,900/–ಬದಲಾಗಿ 1,38,93,900/– +ಜಿಎಸ್‌ಟಿ+ಸಾಗಾಣೆ–ವೆಚ್ಚವೆಂದು ಸರಿಪಡಿಸಲು ಮಂಡಿಸಿದ ಪ್ರಸ್ತಾವನೆಯನ್ನು ದೊಡ್ಡ ಖರೀದಿ ಸಮಿತಿಯು ಪರಿಶೀಲಿಸಿ ಕೈಗೊಂಡ ಕ್ರಮವನ್ನು ದೊಡ್ಡ ಖರೀದಿ ಸಮಿತಿಯು ದೃಢೀಕರಿಸಿತು.

| Sl No | Particulars of Marks cards & Degree Certificates | Present Stock | Requirement to be purchased for March-2022, August-2022 & March-2023 Examinations | Total Amount as per MSIL approved rates |
|---|---|---|---|---|
| 1 | 'A' Series Marks Card | Nil | 1,30,000 | 35.175 X 1,30,000 = Rs. 45,72,750/- |
| 2 | 'F' Series Marks Card | Nil | 20,000 | 35.175 X 20,000 = Rs. 7,03,500/- |
| 3 | Passing Certificates | Nil | 30,000 | 17.58 X 30,000 = 5,27,400/- |
| 4 | PG CBCS Marks Cards | Nil | 50,000 | 35.175 X 50,000 = 17,58750/- |
| 5 | UG CBCS Marks Cards | Nil | 1,50,000 | 35.175 X 1,50,000 = 52,76,250/- |
| 6 | Degree Certificates | Nil | 30,000 | 35.175 X 30,000= 10,55,250/- |
| | | | Total: | 1,38,93,900/- + GST + Freight charges |

5. ಕಾರಣ ದಿನಾಂಕ.30.12.2022 ರಂದು ಜರುಗಿದ ದೊಡ್ಡ ಖರೀದಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

**ನಿರ್ಣಯ**

**ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಿರುವ ಅಂಕಪಟ್ಟಿಗಳು, ಉತ್ತೀರ್ಣ ಪ್ರಮಾಣ ಪತ್ರ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ರೂ.1,38,93,900/–ಗಳಲ್ಲಿ ಖರೀದಿಸಲಾಗಿರುವುದನ್ನು ಮುದ್ರಣ ದೋಷದಿಂದ ರೂ.1,31,33,900/– ಎಂದು ನಮೂದಾಗಿರುವುದನ್ನು ದೊಡ್ಡ ಖರೀದಿ ಸಮಿತಿಯ ಶಿಫಾರಸ್ಸನ್ನು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಆಗಿರುವ ಮುದ್ರಣ ದೋಷವನ್ನು ಸರಿಪಡಿಸಿ ರೂ.1,38,93,900/–ಗಳೆಂದು ಪರಿಗಣಿಸಲು ಹಾಗೂ ಸದರ ಹಣವನ್ನು ಪಾವತಿಸಲು ಒಪ್ಪಿಗೆಯನ್ನು ಸೂಚಿಸಿತು.**



ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ-07: ವಿಷಯ-: ಕರ್ನಾಟಕ ವಿಶ್ವವಿದ್ಯಾಲಯ ಪರೀಕ್ಷಾ ವಿಭಾಗಕ್ಕೆ ಒಂದು ಓ.ಎಂ.ಆರ್ ಸ್ಕ್ಯಾನರ್ ಖರೀದಿಸುವ ವಿಷಯವನ್ನು ಆಡಳಿತ ಮಂಡಳಿಯ ಸಮಿತಿ ಸಭೆಯ ಪರಿಶೀಲನೆಗೆ ಮಂಡಿಸುವ ಕುರಿತು.

ಟಿಪ್ಪಣಿ:

1. ಕರ್ನಾಟಕ ವಿಶ್ವವಿದ್ಯಾಲಯ ಪರೀಕ್ಷಾ ಗಣಕ ಕೇಂದ್ರ ವಿಭಾಗಕ್ಕೆ ಸ್ನಾತಕ/ಸ್ನಾತಕೋತ್ತರ ಓ.ಎಂ.ಆರ್ ಮಾದರಿಯ ಉತ್ತರ ಪತ್ರಿಕೆಯನ್ನು ಸ್ಕ್ಯಾನ ಮಾಡಿ ಫಲಿತಾಂಶ ಪ್ರಕಟಿಸಲು ಈಗಾಗಲೇ ಲಭ್ಯವಿರುವ ಓ.ಎಂ.ಆರ್ ಸ್ಕ್ಯಾನರ್ ತುಂಬಾ ಹಳೆಯದಾಗಿದ್ದು ಇದರಿಂದ ನಿಗದಿತ ಅವಧಿಯಲ್ಲಿ ಫಲಿತಾಂಶವನ್ನು ಪ್ರಕಟಿಸಲು ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ತುರ್ತಾಗಿ ಈ ಕೆಳಗೆ ನಮೂದಿಸಿದ **Specification** ಆಧಾರದಾ ಓ.ಎಂ.ಆರ್ ಸ್ಕ್ಯಾನರನ ಅವಶ್ಯಕತೆ ಇರುವುದಾಗಿ ಸಿಸ್ಟಮ್ ಅನಾಲಿಸ್ಟ ತಿಳಿಸಿರುತ್ತಾರೆ.

| S.No | Specification |
|---|---|
| 01 | Scanner Should be able to scan OMR Sheets and answer sheets |
| 02 | Scanning capacity: 40,000 to 50,000 Sheets per day |
| 03 | Scanning size both: A3 and A4 Sheets. |
| 04 | Input Tray capacity: at least 300 sheets |
| 05 | The scanner should be supported with the required software. |

ಆದ್ದರಿಂದ ಪರೀಕ್ಷಾ ಗಣಕಯಂತ್ರ ಕೇಂದ್ರಕ್ಕೆ ತುರ್ತಾಗಿ ಅವಶ್ಯವಿರುವ ಒಂದು ಓ.ಎಂ.ಆರ್ ಸ್ಕ್ಯಾನರ್ ಖರಿದೀಸುವ ಕುರಿತಂತೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿವಿಧ ಫರ್ಮದವರಿಂದ ದಿನಾಂಕ: 02.11.2022ರಂದು ಕೋಟೆಶನಗಳನ್ನು ಕರೆಯಲಾಗಿತ್ತು, ಅದರಂತೆ ವಿವಿಧ ಫರ್ಮಗಳಿಂದ ಸ್ವೀಕೃತವಾದ ದರ ಪಟ್ಟಿಗಳನ್ವಯ ಸಿದ್ಧಪಡಿಸಿದ ತುಲನಾತ್ಮಕ ದರಪಟ್ಟಿಯ ವಿವರಗಳು ಈ ಕೆಳಗಿನಂತಿವೆ.

**Comparative Statement**

| Sl | Particular | Qty | M/s Dasha Imaging Technologies, No. 121 AK shay colony, Vidyanagar Hubli | | M/s Plus Point, Systems No. 09 Shapurkar Complex, Gounhali Galli, Belgaum | | M/s Advaitha Consultancy Services, No. 101, Siddivinayak Apartments, Adhyapak Nagar, Hubli. | | Battery Care Point No 5 Beride RNS Motors Unkal Hubli. | |
|---|---|---|---|---|---|---|---|---|---|---|
| | | | Rate Each | Total | Rate Each | Total | Rate Each | Total | Rate Each | Total |
| 1 | Fujitsu Image Scanner With OMR Software | 01 | 4,75,700/- | 4,75,700/- | 4,99,950/- | 4,99,950/- | 4,41,025/- | 4,41,025/- | 4,65,500/- | 4,65,500/- |
| | Total | 01 | Including GST 4,75,700/- | | Including GST 4,99,950/- | | Including GST 4,41,025/- | | Including GST 4,65,500/- | |

2. ಸದರಿ ಫರ್ಮದವರು ದರ ನಿಗದಿಪಡಿಸಿ ಸಲ್ಲಿಸಿದ (Comparative Statement) ದರಪಟ್ಟಿಗಳನ್ನು ಪರಿಶೀಲಿಸಲಾಗಿ, ಪರೀಕ್ಷಾ ವಿಭಾಗದ ಗಣಕಯಂತ್ರ ಶಾಲೆಗೆ ಅವಶ್ಯವಿರುವ OMR Scanner ಖರಿದೀಸುವ ಕುರಿತು M/s Advaitha Consultancy Services, No. 101, Siddivinayak Apartments, Adhyapak Nagar, Hubli-580032 ಇವರು ಉಳಿದ ಮೂರು ಫರ್ಮಗಳಿಗಿಂತ ಕಡಿಮೆ ಮೊತ್ತ ರೂ. 4,41,025/– (Including GST)ಗಳನ್ನು ನಮೂದಿಸಿರುವರು.

3. ಆದ್ದರಿಂದ, ಮೇಲ್ಕಾಣಿಸಿದ ಅಂಶಗಳನ್ನು ಅವಲೋಕಿಸಿ ಸದರ ಮೇಲಿನಂತೆ ವಿವಿಧ ಫರ್ಮದವರು ದರ ನಿಗದಿಪಡಿಸಿ ಸಲ್ಲಿಸಿದ ಕೋಟೇಶನ್ ಪ್ರತಿಗಳನ್ನು ಹಾಗೂ ತಮ್ಮ ಅವಗಾಹನೆಗೆ ಇಡಲಾದ ತುಲನಾತ್ಮಕ ಪಟ್ಟಿಯನ್ನು (Comparative Statement) ಪರಿಶೀಲಿಸಿ, ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಅವಶ್ಯವಿರುವ OMR Scanner ನ್ನು ಖರೀದಿಸಲು M/s Advaitha Consultancy Services, No. 101, Siddivinayak



ಕುಲಸಚಿವರು ಕುಲಪತಿಗಳು

Apartments, Adhyapak Nagar, Hubli-580032 ಇವರಿಗೆ ಕಾರ್ಯಾದೇಶ ನೀಡುವ ಕುರಿತು ಹಾಗೂ ಕಂಡಿಕೆ '55' ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸದರ ವಿಷಯವನ್ನು ದೊಡ್ಡ ಖರೀದಿ ಸಮಿತಿ ಸಭೆಯ ಪರಿಶೀಲನೆಗಾಗಿ ದಿನಾಂಕ:30.12.2022 ರಂದು ಜರುಗಿದ ದೊಡ್ಡ ಖರೀದಿಸಮೀತಿ ಸಭೆಯಲ್ಲಿ ಮಂಡಿಸಲಾಗಿತ್ತು. ಸದರ ಸಮಿತಿ ಸಭೆಯ ನಿರ್ಣಯ ಈ ಕೆಳಗಿನಂತಿದೆ.

"ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆಗೆ ಈಗಿರುವ ಓ.ಎ.ಆರ್ ಸ್ಕ್ಯಾನರ್ ಅತಿ ಹಳೆಯದಾಗಿದ್ದು ಯು.ಯು.ಸಿ.ಎಂ.ಎಸ್ ತಂತ್ರಾಂಶ ಅಳವಡಿಸಿದ್ದಕ್ಕಾಗಿ 40,000 ಪುಟಗಳನ್ನು ಹಾಗೂ ಅದಕ್ಕಿಂತ ಹೆಚ್ಚು ಪುಟಗಳನ್ನು ಸ್ಕ್ಯಾನ್ ಮಾಡುವಂತಹ ಹೆಚ್ಚಿನ ಸಾಮರ್ಥ್ಯವುಳ್ಳ ಸ್ಕ್ಯಾನರ್ ಅವಶ್ಯಕತೆ ಇದ್ದ ಕಾರಣ ನಿಯಮಗಳನ್ನು ಪಾಲಿಸಿ ಅತಿ ಕಡಿಮೆ ದರವನ್ನು ಸೂಚಿಸಿದ ಮೆ॥ ಅದ್ವೈತಾ ಕನ್ಸಲ್ಟೆನ್ಸಿ ಸರ್ವೀಸಿಸ್, ಹುಬ್ಬಳ್ಳಿ ಇವರಿಂದ ಒಟ್ಟು ರೂ. 4,41,025/- (ಜಿ.ಎಸ್.ಟಿ ಸೇರಿಸಿ) ಮೊತ್ತದಲ್ಲಿ ಖರೀದಿಸಲು ದೊಡ್ಡ ಖರೀದಿ ಸಮಿತಿಯು ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು."

4. ಕಾರಣ ದೊಡ್ಡ ಖರೀದಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಸಭೆಯಲ್ಲಿ ದೃಢೀಕರಣಕ್ಕಾಗಿ ಮಂಡಿಸಲಾಯಿತು.

## <u>ನಿರ್ಣಯ</u>

ಪರೀಕ್ಷಾ ವಿಭಾಗಕ್ಕೆ ಅವಶ್ಯವಿದ್ದಂತಹ 40,000 ಪುಟಗಳನ್ನು ಹಾಗೂ ಅದಕ್ಕಿಂತ ಹೆಚ್ಚು ಪುಟಗಳನ್ನು ಸ್ಕ್ಯಾನ ಮಾಡುವಂತಹ ಸಾಮರ್ಥ್ಯವುಳ್ಳ ಒಂದು ಓ.ಎಂ.ಆರ್ ಸ್ಕ್ಯಾನರ್ ಖರೀದಿಸುವ ವಿಷಯವಾಗಿ ದೊಡ್ಡ ಖರೀದಿ ಸಮಿತಿಯ ಶಿಫಾರಸ್ಸನನ್ವಯ ಮೆ॥ ಅದ್ವೈತಾ ಕನ್ಸಲ್ಟೆನ್ಸಿ ಸರ್ವೀಸಿಸ್, ಹುಬ್ಬಳ್ಳಿ ಇವರಿಂದ ಒಟ್ಟು ರೂ. 4,41,025/- (ಜಿ.ಎಸ್.ಟಿ ಸೇರಿಸಿ) ಮೊತ್ತದಲ್ಲಿ ಸ್ಕ್ಯಾನರ ಖರೀದಿಸಲು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಅನುಮೋದಿಸಿತು.



ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-08: ವಿಷಯ-: ದಿನಾಂಕ: 17.11.2022 ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯಲ್ಲಿ ಗ್ರೂಪ್-'ಡಿ' ಹುದ್ದೆಯಿಂದ ಗ್ರೂಪ್-'ಸಿ' ಹುದ್ದೆಗೆ ಪದೋನ್ನತಿ ನೀಡುವ ಕುರಿತು.

ಪ್ರಸ್ತಾವನೆ :

ಕರ್ನಾಟಕ ವಿಶ್ವವಿದ್ಯಾಲಯದ ಬೋಧಕೇತರ ನೌಕರರ ಮುಂಬಡ್ತಿ ವಿಷಯವನ್ನು ಪರಿಶೀಲಿಸಲು ದಿನಾಂಕ: 21.06.2022 ರಂಧು ಗ್ರೂಪ್-'ಡಿ' ಹುದ್ದೆಯಿಂದ ಗ್ರೂಪ್-'ಸಿ' ಹುದ್ದೆಗೆ ಪದೋನ್ನತಿ ನೀಡುವ ಕುರಿತು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಭವನದಲ್ಲಿ ಜರುಗಿದ ಇಲಾಖಾ ಪದೋನ್ನತಿ ಸಮಿತಿಗೆ ಈ ಕೆಳಗಿನ ಸದಸ್ಯರು ಹಾಜರಾಗಿದ್ದರು.

1) ಕುಲಪತಿಗಳು – ಅಧ್ಯಕ್ಷರು
2) ಕುಲಸಚಿವರು – ಸದಸ್ಯರು
3) ಕುಲಸಚಿವರು(ಮೌಲ್ಯಮಾಪನ) – ಸದಸ್ಯರು
4) ಹಣಕಾಸು ಅಧಿಕಾರಿಗಳು – ಸದಸ್ಯರು
5) ಶ್ರೀಮತಿ.ಹಂಸವೇಣಿ.ಎನ್. ಸಿಂಡಿಕೇಟ್ ಸದಸ್ಯರು – ಸದಸ್ಯರು
6) ಡಾ. ಎಂ.ವಾಯ್. ಕರಿದುರ್ಗನವರ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ – ಸದಸ್ಯರು (ಪ.ಜಾ/ಪ.ಪಂ. ಪ್ರತಿನಿಧಿ)
7) ಉಪಕುಲಸಚಿವರು ಸಿಆಸು ವಿಭಾಗ – ಸಮಿತಿಯ ಸಂಚಾಲಕರು

ಕವಿವಿಯಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರುಪ್ 'ಡಿ' ವೃಂದದ ಸಿಬ್ಬಂದಿಗಳು ನಿಯಮಾನುಸಾರ ಪ್ರಸ್ತುತ ಕಿರಿಯ ಸಹಾಯಕರ ಪದೋನ್ನತಿಗೆ ಅರ್ಜಿ ಸಲ್ಲಿಸಿದ್ದನ್ನು ಭರ್ತಿ ಮಾಡುವ ಕುರಿತು ಪ್ರಸ್ತಾವನೆಯನ್ನು ಸಮಿತಿಯ ಮುಂದೆ ಮಂಡಿಸಿದಾಗ, ಈ ಕೆಳಗಿನ ಸಿಬ್ಬಂದಿಗಳಿಗೆ ಗ್ರೂಪ್-'ಡಿ' ಹುದ್ದೆಯಿಂದ ಗ್ರೂಪ್-'ಸಿ' ಹುದ್ದೆಗೆ ಪದೋನ್ನತಿ ನೀಡುವ ಕುರಿತು ನಿರ್ಣಯವನ್ನು ಶಿಫಾರಸು ಮಾಡಿರುತ್ತದೆ.

| Sl. No. | Name of persons likely to be promote | Vacancy/ Cause | Date of Vacancy | Date of Promotion |
|---|---|---|---|---|
| 1] | Sri. A. M. Bisti | Sri. K. M. Joshi | Promotion 01.06.2011 | From the date of joining to the post of Junior Assistant |
| 2] | Sri. R. U. Gurulingappa goudra | Sri. B. O. Kumarswamy | Promotion 01.06.2011 | |
| 3] | Sri. R. R. Nagayya | Sri. P. Y. Madar | Promotion 01.06.2011 | |
| 4] | Smt. M. S. Kulennavar | Smt. J. S. Diwan | Promotion 05.06.2011 | |
| 5] | Sri. S. B. Waddar | Sri. P. K. Yawalekar | Promotion 01.07.2011 | |
| 6] | Smt. B. I. Kenganur | Sri. R. G. Hiremath | Promotion 22.09.2011 | |

ನಿರ್ಣಯ:

"ಪ್ರಸ್ತಾವನೆಯಲ್ಲಿ ನಮೂದಿಸಿದ ಅಂಶಗಳನ್ನು ಪರಿಗಣಿಸಿ, ಪ್ರಸ್ತುತ ಖಾಲಿಯಿರುವ ಕಿರಿಯ ಸಹಾಯಕ ಹುದ್ದೆಗೆ ಪ್ರಸ್ತಾಪಿತ ಸಿಬ್ಬಂದಿಯ ಹೆಸರನ್ನು ಪದೋನ್ನತಿಗೆ ಶಿಫಾರಸ್ಸು ಮಾಡಲಾಯಿತು. ಅನುಕ್ರಮ ಸಂಖ್ಯೆ 01 ರಲ್ಲಿ ನಮೂದಿಸಿದ ಶ್ರೀ.ಎ. ಎಂ. ಬಿಸ್ತಿ ಇವರ ನೇಮಕಾತಿಗೆ ಸಂಬಂಧಿಸಿಂತೆ ಆಡಿಟ್ ಆಕ್ಷೇಪಣೆಯಲ್ಲಿ ವರದಿಯಾಗಿರುವುದರಿಂದ ಅಡಿಟ್ ವರದಿಗೆ ವಿಶ್ವವಿದ್ಯಾಲಯವು ನಿಯಮಾನುಸಾರ ತೆಗೆದುಕೊಳ್ಳುವ ನಿರ್ಣಯಕ್ಕೆ ಬದ್ಧವಾಗಿರುವುದಾಗಿ ಮತ್ತು ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯದ ವಿರುದ್ಧ ಯಾವುದೇ ಹಕ್ಕನ್ನು ಚಲಾಯಿಸುವುದಿಲ್ಲವೆಂದು ರೂ.100/- ಗಳ ಛಾಪಾ ಕಾಗದ ಮೇಲೆ ಮುಚ್ಚಳಿಕೆ ಪತ್ರವನ್ನು ಪಡೆಯುವುದು, ಸದರಿ ಸಿಬ್ಬಂದಿಗಳಿಗೆ ಈ ಮೊದಲು ದಿನಾಂಕ.22.03.2022 ರಂದು ಸಹಾಯಕ ಹುದ್ದೆಗೆ ಮುಂಬಡ್ತಿ ನೀಡುವ ಕುರಿತಂತೆ ತೆಗೆದುಕೊಂಡ ನಿರ್ಣಯದಂತೆ ಪದೋನ್ನತಿ ಆದೇಶ ನೀಡಿದ ಒಂದು ವರ್ಷದೊಳಗೆ ಕೆ.ಪಿ.ಎಸ್.ಸಿಯಿಂದ ನಡೆಸಲ್ಪಡುವ ಜನರಲ್ ಲಾ ಭಾಗ-01 ಮತ್ತು ಭಾಗ-2 ಮತ್ತು ಅಕೌಂಟ್ಸ್ ಹೈಯರ್ ಹಾಗೂ ಅಕೌಂಟ್ಸ್ ಲೋಯರ್ ಇಲಾಖಾ ಪರೀಕ್ಷೆಯನ್ನು ತೇರ್ಗಡೆ ಮತ್ತು ಗಣಕಯಂತ್ರದ ಮೂಲ ಜ್ಞಾನದ (Computer Basic Knowledge) ಪ್ರಮಾಣ ಪತ್ರ ಹೊಂದಬೇಕು. ಒಂದು ವೇಳೆ ಇಲಾಖಾ ಪರೀಕ್ಷೆಯನ್ನು ಮತ್ತು ಗಣಕಯಂತ್ರದ ಮೂಲ ಜ್ಞಾನದ ಪ್ರಮಾಣ ಪತ್ರವನ್ನು ಒಂದು ವರ್ಷದೊಳಗೆ ತೇರ್ಗಡೆ ಹೊಂದದೇ ಇದ್ದರೆ ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ಮತ್ತು ಮುಂದಿನ ಪದೋನ್ನತಿಗೆ ಪರಿಗಣಿಸಲಾಗುವದಿಲ್ಲವೆಂಬ ಷರತ್ತನ್ನು ವಿಧಿಸಲು ಇಲಾಖಾ ಪದೋನ್ನತಿ ಸಮಿತಿ ನಿರ್ಣಯಿಸಿತು."



ಕುಲಸಚಿವರು ಕುಲಪತಿಗಳು

ಕಾರಣ, ಮೇಲ್ಕಾಣಿಸಿದ ಇಲಾಖಾ ಪದೋನ್ನತಿಯ ಸಮಿತಿಯ ಸಭೆಯ ನಿರ್ಣಯವನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

ದಿನಾಂಕ: **17.11.2022** ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯಲ್ಲಿ ಗ್ರೂಪ್–'ಡಿ' ಹುದ್ದೆಯಿಂದ ಗ್ರೂಪ್–'ಸಿ' ಹುದ್ದೆಗೆ ಪದೋನ್ನತಿ ನೀಡುವ ನಿರ್ಣಯವನ್ನು ಪರಿಶೀಲಿಸಿದ ಸಭೆಯು ಪದೋನ್ನತಿ ನೀಡುವ ಬಗ್ಗೆ ಮುಂದಿನ ಹುದ್ದೆಗೆ ಬಡ್ತಿ ಹೊಂದಲು ಕೆ.ಪಿ.ಎಸ್.ಸಿ.ಯಿಂದ ಜರುಗಿಸಲ್ಪಡುವ ಇಲಾಖಾ ಪರೀಕ್ಷೆ ಉತ್ತೀರ್ಣರಾದ ಹಾಗೂ ಗಣಕಯಂತ್ರದ ಮೂಲ ಜ್ಞಾನದ ಪ್ರಮಾಣ ಪತ್ರಗಳನ್ನು ಹೊಂದಿರುವ ಬಗ್ಗೆ ಒಂದು ವರ್ಷದೊಳಗೆ ಸಲ್ಲಿಸದೇ ಇದ್ದರೆ ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ಮತ್ತು ಮುಂದಿನ ಪದೋನ್ನತಿಗೆ ಪರಿಗಣಿಸಲಾಗುವದಿಲ್ಲವೆಂಬ ಷರತ್ತಿಗೊಳಪಟ್ಟು ಗ್ರೂಪ್–'ಡಿ' ಹುದ್ದೆಯಿಂದ ಗ್ರೂಪ್–'ಸಿ' ಹುದ್ದೆಗೆ ಸದರಿ ಸಿಬ್ಬಂದಿಗಳಿಗೆ ಪದೋನ್ನತಿ ನೀಡಲು ಕೆಸಿಎಸ್ ನಿಯಮದಂತೆ ಅಗತ್ಯ ಕ್ರಮ ಜರುಗಿಸುವಂತೆ ಠರಾಯಿಸಿತು.



ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ–09: ವಿಷಯ–: ವಲಯ ಅರಣ್ಯ ಅಧಿಕಾರಿ, ಉಪ ವಲಯ ಅರಣ್ಯ ಅಧಿಕಾರಿ, ಅರಣ್ಯ ರಕ್ಷಕ ಹಾಗೂ ಅರಣ್ಯ ವೀಕ್ಷಕ ತರಬೇತಾರ್ಥಿಗಳಿಗೆ PG Diploma / Diploma / Certificate Course ಗಳಿಗೆ ಸಂಯೋಜನೆಗೆ ಸಂಬಂಧಿಸಿದಂತೆ ಪ್ರಕ್ರಿಯೆ ಜರುಗಿಸುವ ಹಾಗೂ ಸಂಯೋಜನಾ ಶುಲ್ಕ ಹಾಗೂ ಠೇವಣಿ ಆಕರಣೆ ವಿಷಯದ ಪರಿಶೀಲನೆಗಾಗಿ.

ಟಿಪ್ಪಣಿ:

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಮಾನವ ಸಂಪನ್ಮೂಲ ಅಭಿವೃದ್ಧಿ) ಕರ್ನಾಟಕ ಅರಣ್ಯ ಅಕಾಡೆಮಿ, ಧಾರವಾಡ ಇವರು ದಿನಾಂಕ: 27.01.2023 ರಂದು ಬರೆದ ಪತ್ರದಲ್ಲಿ ತಿಳಿಸಿದಂತೆ, PG Diploma / Diploma / Certificate Course ಗಳನ್ನು ಸಂಯೋಜಿಸುವ ಹಾಗೂ ಒಡಂಬಡಿಕೆ MoU ಕರ್ನಾಟಕ ವಿಶ್ವವಿದ್ಯಾಲಯದೊಂದಿಗೆ ಮಾಡಿಕೊಳ್ಳಲು ಅರಣ್ಯ ಭವನಕ್ಕೆ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಇದಕ್ಕೂ ಮುನ್ನ ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ ಅರಣ್ಯ ಅಕಾಡೆಮಿ, ಧಾರವಾಡ ಇವರು ಸದರ ಕೋರ್ಸುಗಳ ಮಾನ್ಯತೆ / ಸಂಲಗ್ನತೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಈ ವಿಷಯ ದಿನಾಂಕ: 07.12.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚಿಗೊಂಡು ಈ ಕೆಳಗಿನಂತೆ ನಿರ್ಣಯಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ಸಭೆಯ ಠರಾವು ಸಂ: 6, ದಿನಾಂಕ: 07.12.2022**

ವಲಯ ಅರಣ್ಯ ಅಧಿಕಾರಿ, ಉಪ ವಲಯ ಅರಣ್ಯ ಅಧಿಕಾರಿ, ಅರಣ್ಯ ರಕ್ಷಕ ಹಾಗೂ ಅರಣ್ಯ ವೀಕ್ಷಕ ತರಬೇತಾರ್ಥಿಗಳಿಗೆ PG Diploma / Certificate Course ಪ್ರಮಾಣ ಪತ್ರದ ಸಲುವಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಂಯೋಜಿಸುವ ಕುರಿತಂತೆ ಮಾರ್ಗಸೂಚಿಗಳನ್ನು ತಯಾರಿಸಲು ಈ ಕೆಳಗಿನಂತೆ ಸಮಿತಿಯನ್ನು ರಚಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ನಿರ್ಣಯಿಸಿತು. ಈ ಸಮಿತಿಯು ಸದರಿ ಸಂಸ್ಥೆಗೆ ಸಂದರ್ಶಿಸಿ ಪರಿಶೀಲಿಸುವುದು.

1. ಕುಲಸಚಿವರು, ಕ.ವಿ.ವಿ. ಧಾರವಾಡ – ಅಧ್ಯಕ್ಷರು
2. ಜಂಟಿ ನಿರ್ದೇಶಕರು ಕರ್ನಾಟಕ ಅರಣ್ಯ ಅಕ್ಯಾಡೆಮಿ – ಸದಸ್ಯರು
3. ನಿರ್ದೇಶಕರು, ಪಿ.ಎಂ.ಇ.ಬಿ. ವಿಭಾಗ ಕ.ವಿ.ವಿ. ಧಾರವಾಡ – ಸದಸ್ಯರು
4. ನಿರ್ದೇಶಕರು, ಸಿ.ಡಿ.ಸಿ. ವಿಭಾಗ, ಕ.ವಿ.ವಿ. ಧಾರವಾಡ – ಸದಸ್ಯರು
5. ಉಪಕುಲಸಚಿರು ವಿದ್ಯಾಮಂಡಳ ಕ.ವಿ.ವಿ ವಿಭಾಗ – (ಸಂಯೋಜಕರು)

ಅದರಂತೆ, ಕಚೇರಿ ಪತ್ರ ನಂ. 1389, ದಿನಾಂಕ: 16.12.2022ರ ಮುಖಾಂತರ ನಿರ್ದೇಶಕರು, ಕರ್ನಾಟಕ ಅಕ್ಯಾಡೆಮಿ, ಧಾರವಾಡ ಇವರಿಗೆ ತಿಳಿಸಲಾಗಿರುತ್ತದೆ. ಮುಂದುವರೆದು, ದಿನಾಂಕ: 19.01.2023 ರಂದು, ಮೇಲಿನ ಸದಸ್ಯರನ್ನೊಳಗೊಂಡ ಸಮಿತಿಯು ಕರ್ನಾಟಕ ಅರಣ್ಯ ಅಕ್ಯಾಡೆಮಿ, ಗುಂಗರಗಟ್ಟಿ, ಧಾರವಾಡದಲ್ಲಿ ಜರುಗಿದ್ದು, ಈ ಕುರಿತಂತೆ ಒಡಂಬಡಿಕೆ (MoU) ಮತ್ತು ಮಾರ್ಗಸೂಚಿಗಳನ್ನು ತಯಾರಿಸಲು ತೀರ್ಮಾನಿಸಲಾಗಿರುತ್ತದೆ. ಆ ಪ್ರಕಾರ ಒಡಂಬಡಿಕೆಯ MoU ಮತ್ತು ಮಾರ್ಗಸೂಚಿಯ ಕರಡನ್ನು ನಿರ್ದೇಶಕರು, ಕರ್ನಾಟಕ ಅರಣ್ಯ ಅಕಾಡೆಮಿ, ಧಾರವಾಡ ಇವರಿಗೆ ಕಚೇರಿ ಪತ್ರ ದಿನಾಂಕ: 23.01.2023ರ ಮೂಲಕ ಸಲ್ಲಿಸಲಾಗಿರುತ್ತದೆ.

ನಿರ್ದೇಶಕರು, ಕರ್ನಾಟಕ ಅಕ್ಯಾಡೆಮಿ, ಧಾರವಾಡ ಇವರ ಪತ್ರ ಸಂ. 710, ದಿನಾಂಕ: 27.01.2023ರ ಮೂಲಕ ಈ ಪ್ರಸ್ತಾವನೆಗೆ ಒಪ್ಪಿ ಸದರ ಕೋರ್ಸುಗಳ ಸಂಲಗ್ನತೆ ಪಡೆಯಲು ಮತ್ತು ಒಡಂಬಡಿಕೆ MoU ಮಾಡಲು ಅನುಮತಿ ಕೋರಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ವಲಯ, ಬೆಂಗಳೂರು ಇವರಿಗೆ ಪತ್ರ ಬರೆದು ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಅದರಂತೆ, ಸದರ ಕೋರ್ಸಗಳಿಗೆ ಮಾನ್ಯತೆ / ಸಂಯೋಜನೆ ಪರಿಶೀಲನೆ ಕುರಿತಂತೆ ಕ.ರಾ.ವಿ.ಕಾಯ್ದೆ 2000 ನಿಯಮ 66 ರಂತೆ ಕ್ರಮಕೈಗೊಳ್ಳಲು ಅನುಕೂಲವಾಗುವಂತೆ ಸದರ ಕೋರ್ಸುಗಳ ಠೇವಣಿ ಶುಲ್ಕ, ಸಂಯೋಜನಾ ಶುಲ್ಕ ಹಾಗೂ ವಾರ್ಷಿಕ ಸಂಯೋಜನಾ ಮುಂದುವರಿಕೆ ಶುಲ್ಕ ಆಕರಣೆಗೆ ಕುರಿತಾದ ಮಾಹಿತಿಯನ್ನು ಪೂರೈಸಲು ನಿರ್ದೇಶಕರು, ಅಭಿವೃದ್ಧಿ ಮಂಡಳಿ (ಸಿ.ಡಿ.ಸಿ.), ಕ.ವಿ.ವಿ. ಧಾರವಾಡ ಇವರಿಗೆ ದಿ. 05.02.2023ರ ಮೂಲಕ ಕೋರಲಾಗಿರುತ್ತದೆ.



ಕುಲಸಚಿವರು ಕುಲಪತಿಗಳು

ನಿರ್ದೇಶಕರು, ಅಭಿವೃದ್ಧಿ ಮಂಡಳಿ (ಸಿ.ಡಿ.ಸಿ.), ಕ.ವಿ.ವಿ. ಧಾರವಾಡ ಇವರು ಪತ್ರ ದಿ. 06.02.2023ರ ಮೂಲಕ PG Diploma / Diploma / Certificate Course ಗಳನ್ನು ಸಂಯೋಜನೆ ನೀಡುವ ಕುರಿತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪರಿಚ್ಛೇದ 66 ರಲ್ಲಿ ಈ ಕೆಳಗಿನಂತಿದ್ದು, ಅದರಂತೆ ಮುಂದಿನ ಕ್ರಮಕ್ಕಾಗಿ ತಿಳಿಸಿರುವರು.

"66) ಕೆಲವು ಸಂಸ್ಥೆಗಳಿಗೆ ಮನ್ನಣೆ: (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ಪರಿಣಿತ ಅಧ್ಯಯನಗಳನ್ನು ನಡೆಸುವ ಕಾಲೇಜನ್ನು ಹೊರತುಪಡಿಸಿ, ವಿಶ್ವವಿದ್ಯಾನಿಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಉದ್ದೇಶಕ್ಕಾಗಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಸಿಂಡಿಕೇಟ್ ಮನ್ನಣೆ ಪಡೆದ ಸಂಸ್ಥೆಯೆಂದು ಮನ್ನಣೆ ಕೊಡಬಹುದು".

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪರಿಚ್ಛೇದ 66 ರಲ್ಲಿ ಸೂಚಿಸಿದಂತೆ ಸದರ ವಿಭಾಗವು ಸರ್ಕಾರಿ / ಖಾಸಗಿ ಮಹಾವಿದ್ಯಾಲಯ ಆಗಿರದೇ, ಸರ್ಕಾರಿ ಸಂಸ್ಥೆ ಇರುವುದರಿಂದ ಅರಣ್ಯ ರಕ್ಷಕ ಹಾಗೂ ಅರಣ್ಯ ವೀಕ್ಷಕ ತರಬೇತಾರ್ಥಿಗಳಿಗೆ PG Diploma / Diploma / Certificate Course ಗಳಿಗೆ ಸಂಯೋಜನೆಗೆ ಸಂಬಂಧಿಸಿದಂತೆ ಸಂಯೋಜನಾ ಶುಲ್ಕ ಹಾಗೂ ಶೇವಣಿ ಆಕರಣೆ ವಿಷಯವನ್ನು ಆಡಳಿತ ಮಂಡಳಿಯು ನಿರ್ಧರಿಸಬೇಕೆಂದು ತಿಳಿಸಿರುವರು. ಅದರಂತೆ, ಈ ಪ್ರಸ್ತಾವನೆಯ ಪರಿಶೀಲನೆಗಾಗಿ ಆಡಳಿತ ಮಂಡಳಿಯ ಮುಂದೆ ಕಲಂನ್ನು ಮಂಡಿಸಲಾಯಿತು.

## ನಿರ್ಣಯ

**ವಲಯ ಅರಣ್ಯ ಅಧಿಕಾರಿ, ಉಪ ವಲಯ ಅರಣ್ಯ ಅಧಿಕಾರಿ, ಅರಣ್ಯ ರಕ್ಷಕ ಹಾಗೂ ಅರಣ್ಯ ವೀಕ್ಷಕ ತರಬೇತಾರ್ಥಿಗಳಿಗೆ PG Diploma / Diploma / Certificate Course ಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪರಿಚ್ಛೇದ 66ರನ್ವಯ ಸಂಯೋಜನೆಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಪಾಲಿಸಿ ಪ್ರಕ್ರಿಯೆ ಜರುಗಿಸುವ ಹಾಗೂ ಸಂಯೋಜನಾ, ಶೇವಣಿಗಳನ್ನು ಹಾಗೂ ಇತರೇ ಶುಲ್ಕಗಳನ್ನು ಈ ಕೆಳಗಿನಂತೆ ಆಕರಣೆ ಮಾಡಲು ಆಡಳಿತ ಮಂಡಳಿಯು ಒಪ್ಪಿಗೆಯನ್ನು ಸೂಚಿಸಿತು.**

| | |
|---|---|
| **ಅ. ಪ್ರಾರಂಭಿಕ ಸಂಯೋಜನಾ ಶುಲ್ಕ** | **– ರೂ.40,000/–** |
| **ಬ. ಪ್ರವೇಶ ಶುಲ್ಕ (ಪ್ರತಿ ವಿದ್ಯಾರ್ಥಿಗೆ)** | **– ರೂ.200/–** |
| **ಕ. ಪರೀಕ್ಷಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ)** | **– ರೂ.300/–** |
| **ಡ. ವಾರ್ಷಿಕ ಸಂಯೋಜನೆ ಮುಂದುವರಿಕೆ ಶುಲ್ಕ** | **– ರೂ.40,000/–** |
| **ಇ. ಶೇವಣಿ** | **– ರಹಿತವಾಗಿ** |



ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ-10: ವಿಷಯ-: Reconsideration of the "**Draft Statute Governing the Operation of Research and Development (R & D) Projects in Karnatak University-2022**".

**Note:**

The Karnatak University is well known for its notable contributions in Science, Arts, Music, History, Archaeology, Humanities and Social Science by its research output. This is evident from the recognitions at National as well as in International levels and awards bagged by the faculty. Considerable infrastructures like research laboratories and sophisticated equipment have been developed and procured out of research grants received by the faculty. Several P.G. Departments and Constituent Colleges have received special assistance grants from UGC under SAP (Phase 1, II, III. COSIST, DST-FIST, CPEPA, DRDO, CSIR, VGST and other various RD funding agencies. In addition, the university has been conferred with the UPE (University with Potential for Excellence), PURSE (Promotion of University Research and Scientific Excellence), SAIF (Sophisticated Analytical Instrument Facility), VGST (Vision Group on Science Technology) etc. with huge Financial support by the various funding agencies.

In order to respond to the needs in processing the requisition of proposals from teachers, the administration has to adapt a policy for autonomy to the researchers. The University earlier had RD guidelines (February 2012) which was a unique and progressive step in this regard. However, keeping in view the changes taking place in the field of higher educational research, the administrative officials of Karnatak University have decided to frame a statute in this regard for hassle free process of operation of projects to complete on time. Hence, the statute entitled "Statute governing the operation of Research and Development (R & D) Projects in Karnatak University-2022" is framed for smooth and easy handling of RD grants to give more freedom to the investigators and promote smooth operation of research grants.

In this regard, the draft statute was prepared and placed as Guidelines in the Academic Council Meeting held on 07.12.2022 and is was resolved as under:

**"ಕರ್ನಾಟಕ ವಿಶ್ವವಿದ್ಯಾಲಯವು "Guidelines for Operations of Research & Development Grants" ಗಳನ್ನು ಸರ್ಕಾರಕ್ಕೆ ಅನುಶಾಸನ ರೂಪದಲ್ಲಿ (statute) ಪ್ರಸ್ತಾವನೆಯನ್ನು ನಿಯಮಾವಳಿಗಳ ಪ್ರಕಾರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರದ ಮುಖಾಂತರ ಕಳುಹಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು".**

Accordingly the statute in the form of Guidelines was placed in the Syndicate meeting held on 10.12.2022 and it was resolved as under:

**"Syndicate considered and approved the recommendations of the Academic Council, held on 07.12.2022 regarding the Guidelines for Operations of Research &**



ಕುಲಸಚಿವರು ಕುಲಪತಿಗಳು

**Development (R&D) Grants, and the same be may sent as a Statute for Governments approval"**

Though the Syndicate agenda was pertaining to statute but due to typographical error the word 'Statute' was no where mentioned in the agenda instead it was mentioned as Guidelines.

Hence, the Agenda and the draft statute with necessary corrections as **"Draft Statute Governing the Operation of Research and Development (R & D) Projects in Karnatak University-2022** is placed before the Syndicate for reconsideration.

<u>ನಿರ್ಣಯ</u>

**Syndicate after thorough discussion decided to modify the Syndicate resolution no.07 dated 10.12.2022 regarding the title as "Draft Statute Governing the Operation of Research and Development (R & D) Projects in Karnatak University-2022".**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ–11: ವಿಷಯ–:** ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ. ಅನುಸುಯಾ ತಂದೆ ಬೊಮ್ಮಯ್ಯ ನಾಯಕ ಇವರ ವಿರುದ್ಧ ಧಾರವಾಡ ಉಪನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಪರಾಧ ಸಂಖ್ಯೆ: 136/2022 ಕಲಂ 504, 506 ಸಹಕಲಂ 34ಐಪಿಸಿ ಮತ್ತು ಕಲಂ 3(1)(5)3(1) (2a) (E) ಎಸ್.ಸಿ/ಎಸ್.ಟಿ (ಪಿ.ಎ) ಅಮೆಂಡಮೆಂಟ್ ಆಕ್ಟ್ 2015 ನೇದ್ದರಡಿಯಲ್ಲಿ ತಯಾರಿಸಿದ ದೋಷಾರೋಪಣೆ ಪಟ್ಟಿಯನ್ನು ಕಲಂ 197 ಸಿ.ಆರ್.ಪಿ.ಸಿ ರಡಿ ಪ್ರಾಶ್ಯೂಕ್ಯೂಶನ್ ನಡೆಸಲು ಅಭಿಯೋಜನಾ ಮಂಜೂರಾತಿ (ಪೂರ್ವಾನುಮತಿ) ಕೋರಿ ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತರು ಸಲ್ಲಿಸಿದ ಪ್ರಸ್ತಾವನೆಗೆ ಅನುಮತಿ ನೀಡುವ ಕುರಿತು.

ಟಿಪ್ಪಣಿ:

ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತರು (ಸಂಕ್ಷಿಪ್ತವಾಗಿ ಪೊಲೀಸ್ ಆಯುಕ್ತರು) ದಿನಾಂಕ: 02.11.2022 ರಂದು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು ಅದರಲ್ಲಿ ಪಿರ್ಯಾದುದಾರರಾದ ಕುಮಾರಿ. ಸಂಗೀತಾ ಎನ್ ತಂದೆ ನಾಗರಾಜ, ಜಾತಿ–ಹಿಂದೂ (ಮಾದಿಗ), ಅತಿಥಿ ಉಪನ್ಯಾಸಕರು, ಕವಿವಿ ಪದವಿ ಪೂರ್ವ ಕಾಲೇಜು ಇವರು ದಿನಾಂಕ:27.06.2022 ರಂದು ದೂರು ನೀಡಿ ತಾನು ಕಳೆದ ನಾಲ್ಕು ವರ್ಷಗಳಿಂದ ಧಾರವಾಡ ಯು.ಪಿ.ಎಸ್ ಕಾಲೇಜಿನಲ್ಲಿ ಅತಿಥಿ ಸಹಾಯಕ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದೇನೆ. ನನ್ನಂತೆ ರಾಮಕೃಷ್ಣ ತೆಲಗು, ಸವಿತಾ ವಣಕೇರಿ ಮತ್ತು ಶೈಲಜಾ ಕೆರಗಿ ಇವರು ಇದ್ದು ಅನಸೂಯಾ ನಾಯಕ ಅನ್ನುವವರು ಕಳೆದ ನಾಲ್ಕು ತಿಂಗಳ ಹಿಂದೆ ಪ್ರಾಂಶುಪಾಲರಾಗಿ ನಮ್ಮ ಕಾಲೇಜಿಗೆ ಆಗಮಿಸಿದ್ದು ಅಂದಿನಿಂದ ಮೇಲೆ ಕಾಣಿಸಿದ ಮೂರು ಜನರೊದಿಗೆ ಕೂಡಿಕೊಂಡು ವಿನಾಃಕಾರಣ ನನ್ನನ್ನು ನಿಂದಿಸುವುದು. ಕೀಳಾಗಿ ನೋಡುವುದು, ಕಡಿಮೆ ಜಾತಿಯವಳೆಂಬ ಕಾರಣಕ್ಕೆ ತಾರತಮ್ಯ ಮಾಡುವುದು, ವಿದ್ಯಾರ್ಥಿಗಳಿಗೂ ಸಹ ನನ್ನಿಂದ ಅಂತರ ಕಾಯ್ದುಕೊಳ್ಳಲು ಸೂಚಿಸುವುದು, ನಾನು ಬಳಿಸಿದ ಉಪಕರಣಗಳನ್ನು ಬಳಸದಿರುವುದು, ನನ್ನೊಂದಿಗೆ ಬೆರೆಯದೇ ನನ್ನಿಂದ ಅಂತರ ಕಾಯ್ದುಕೊಂಡು ದೂರ ಇಡುವುದು ಮುಂತಾದವುಗಳನ್ನು ಮಾಡುತ್ತಿದ್ದರು. ಹೀಗಿರುವಾಗ ದಿನಾಂಕ: 17.06.2022 ರಂದು ಸಂಜೆ 4.30 ಗಂಟೆ ಸುಮಾರಿಗೆ ಅನಸೂಯಾ ನಾಯಕ ಇವರು ನನ್ನನ್ನು ಅವರ ಕಛೇರಿಗೆ ಕರೆಯಿಸಿ, ನೀನು ನಾಳೆಯಿಂದ ನಮ್ಮ ಕಾಲೇಜಿಗೆ ಸಹಾಯಕ ಉಪನ್ಯಾಸಕಿಯಾಗಿ ಬರತಕ್ಕದ್ದಲ್ಲ. ಸ್ವಯಂ ರಾಜೀನಾಮೆ ಪತ್ರ ಬರೆದುಕೊಟ್ಟು ಹೋಗತಕ್ಕದ್ದು ಅಂತಾ ಅಸಮಾಧಾನದಿಂದ ಹೇಳಿದರು. ನಾನು ಕಾರಣ ಕೇಳಲಾಗಿ, ನೀನು ಹೊಲೆಯ ಮಾದಿಗ ಜಾತಿಯವಳಿದ್ದು, ವಿದ್ಯಾರ್ಥಿಗಳಿಗೆ ಪಾಠ ಮಾಡಲು ಯೋಗ್ಯಳಲ್ಲ. ನಿಮ್ಮ ಜಾತಿಯವರು ಕೇವಲ ಸತ್ತಾಗ ಹಲಿಗೆ ಬಡೆಯಲು ಯೋಗ್ಯರು ಇರುತ್ತೀರಿ. ನಿಮ್ಮಂತ ಮಾದಿಗ ಜಾತಿಯವರು ಪಾಠ ಮಾಡುವುದರಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ನಿನ್ನ ಸ್ಥಾನಮಾನಕ್ಕೆ ತಕ್ಕಂತೆ ನೀನು ಇರಬೇಕು ಅಂತಾ ಅವಾಚ್ಯ ಶಬ್ದದಿಂದ ಬೈದಾಡಹತ್ತಿದರು. ಆಗ ಅಲ್ಲಿಯೇ ಇದ್ದ ಭುವನೇಶ್ವರಿ ದಾನಪ್ಪಗೌಡರ ಇವರು ಹಾಗೂ ಮಲ್ಲಿಕಾರ್ಜುನ ಅನ್ನುವವರು ಹಾಗೂ ಕಾಲೇಜಿಗೆ ಪ್ರವೇಶ ಪಡೆಯಲು ಬಂದ ವಿದ್ಯಾರ್ಥಿಗಳ ಪಾಲಕರು ನೀವು ಈ ಕಾಲೇಜಿನ ಗೌರವಯುತ ಪ್ರಾಂಶುಪಾಲರಾಗಿ ಜಾತಿ ನಿಂದನೆ ಹಾಗೂ ಅವಾಚ್ಯ ಶಬ್ದದಿಂದ ಸಹಶಿಕ್ಷಕರನ್ನು ನಿಂದಿಸಬಾರದು. ನಿಮ್ಮ ಘನತೆಗೆ ತಕ್ಕಂತೆ ನೀವು ನಡೆದುಕೊಳ್ಳಬೇಕು ಅಂತಾ ಅವರಿಗೆ ಸಿಟ್ಟಿನಿಂದ ಬುದ್ಧಿವಾದ ಹೇಳಲಾಗಿ, ಅನಸೂಯಾ ನಾಯಕ ಅವರು ನಿಮ್ಮಿಂದ ನಾನು ಬುದ್ಧಿ ಕಲಿಯಬೇಕಾಗಿಲ್ಲಾ ಇವಳು ನೀಚ ಜಾತಿಯ ಮಾದಿಗಳು ಏನು ಮಾಡಿಕೊಳ್ಳುತ್ತಾಳೋ ಮಾಡಿಕೊಳ್ಳಲಿ, ಇಂತಹ ಕೀಳು ಜಾತಿಯವರನ್ನು ನಾನು ಸಾಕಷ್ಟು ಕಂಡಿದ್ದೇನೆ. ಇವಳನ್ನು ಬಿಡುವುದಿಲ್ಲಾ. ಇನ್ನು ಮುಂದೆ ನೋಡಿಕೊಳ್ಳುತ್ತೇನೆ. ಇವಳು ಈ ಕಾಲೇಜಿನಲ್ಲಿ ಹೇಗೆ ಜೀವನ ಮಾಡುತ್ತಾಳೊ ಮಾಡಲಿ, ನನಗೂ ವಿಶ್ವವಿದ್ಯಾಲಯದ ಕುಲಸಚಿವರು ಹಾಗೂ ರಾಜಕಾರಣಿಗಳ ವಸೂಲಿ ಇದೆ ಅಂತಾ ಧಮಕಿ ಹಾಕಲಾರಂಭಿಸಿದರು. ಆಗ ಅಲ್ಲಿದ್ದವರು ನನ್ನನ್ನು ಸಮಾಧಾನಪಡಿಸಿ ಹೊರಗೆ ಕಳುಹಿಸಿರುತ್ತಾರೆ.

ಈ ಮೇಲ್ಕಾಣಿಸಿದ 04 ಜನರು ನಾನು ಮಾದಿಗ ಜಾತಿಯವಳೆಂದು ಗೊತ್ತಿದ್ದೂ ಸಹ ಕಳೆದ ನಾಲ್ಕು ತಿಂಗಳಿಂದ ಉದ್ದೇಶಪೂರ್ವಕವಾಗಿ ನಮ್ಮ ಸಹದ್ಯೋಗಿ ಹಾಗೂ ವಿದ್ಯಾರ್ಥಿಗಳ ಎದುರು ನಿರಂತರವಾಗಿ ನನ್ನ ಮೇಲೆ ಜಾತಿ ನಿಂದನೆ ಮಾಡುತ್ತ ನನಗೆ ಮಾನಸಿಕ ಹಿಂಸೆ ನೀಡಿದ್ದಲ್ಲದೇ ನನ್ನ ಜಾತಿಯನ್ನು ಅವಮಾನಿಸಿದ್ದಾರೆ. ಅಷ್ಟೇ ಅಲ್ಲದೇ ಕಳೆದ 01 ತಿಂಗಳ ಹಿಂದೆ ರಾಮಕೃಷ್ಣ ತೆಲಗು ಅವರು ತರಗತಿಯಲ್ಲಿ ಕ್ಷುಲ್ಲಕ ಕಾರಣಕ್ಕೆ ನನ್ನೊಂದಿಗೆ ಮಾತಿಗೆ ಮಾತು ಬೆಳಸಿ ಜಗಳ ತೆಗೆದು ಇಂತಹ ಮಾದಿಗ ಹೊಲೆಯ ಜಾತಿಯವರು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಪಾಠ ಮಾಡುತ್ತಿರುವುದು ಶಿಕ್ಷಣದ ಗುಣಮಟ್ಟ ಹಾಳಾಗುತ್ತಿದೆ. ನೀವು ಮರ್ಯಾದೆ ಇದ್ದರೆ ರಾಜೀನಾಮೆ ಕೊಟ್ಟು ಹೋಗಿರಿ ಅಂತಾ ಬೈದಾಡಿದ್ದು ಇದನ್ನು



ಕುಲಸಚಿವರು ಕುಲಪತಿಗಳು

ಪ್ರಾಂಶುಪಾಲರ ಗಮನಕ್ಕೆ ತರಲಾಗಿ, ಅವರೂ ಸಹ ರಾಮಕೃಷ್ಣನನ್ನೇ ಬೆಂಬಲಿಸಿ ನನ್ನನ್ನು ಎಲ್ಲರ ಎದುರು ಅವಮಾನಿಸಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ಈ ಮೇಲೆ ಕಾಣಿಸಿದ ನಾಲ್ಕೂ ಜನರ ವಿರುದ್ಧ ದಯಾಳುಗಳಾದ ತಾವು ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ವಿನಂತಿ ಅಂತಾ ನೀಡಿದ ದೂರನ್ನು ಧಾರವಾಡ ಉಪನಗರ ಪೊಲೀಸ್ ಠಾಣೆಯ ಪಿ.ಎಸ್.ಐ ರವರು ಅದನ್ನು ಸ್ವೀಕರಿಸಿ, ತಮ್ಮ ಠಾಣೆಯ ಅಪರಾಧ ಸಂಖ್ಯೆ: 136/2022 ಕಲಂ. 504, 506 ಸಹ ಕಲಂ 34 ಐಪಿಸಿ ಮತ್ತು ಕಲಂ 3(1)(s), 3(1)(za)(E) ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ತಿದ್ದುಪಡಿ ಕಾಯ್ದೆ 2015 ನೇದ್ದಕ್ಕೆ ಪ್ರಕರಣ ದಾಖಲಿಸಿಕೊಂಡು ಮೂಲ ದೂರು ಹಾಗೂ ಎಫ್.ಐ.ಆರ್‌ನ್ನು ಮಾನ್ಯ 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಧಾರವಾಡ ರವರಲ್ಲಿ ಕಳುಹಿಸಿರುತ್ತಾರೆ.

ಮಾನ್ಯ ಪೊಲೀಸ್ ಆಯುಕ್ತರು ತಮ್ಮ ದಿನಾಂಕ: 02.11.2022 ರ ಪತ್ರವನ್ನು ಮುಂದುವರೆಸುತ್ತಾ ಸದರಿ ಪ್ರಕರಣ ಜಾತಿ ನಿಂದನೆಯ ಘೋರ ಪ್ರಕರಣವಾಗಿದ್ದರಿಂದ ಪ್ರಕರಣಕ್ಕೆ ಮುಂದಿನ ತನಿಖೆಯನ್ನು ಸಹಾಯಕ ಆಯುಕ್ತರು, ಧಾರವಾಡ ಉಪವಿಭಾಗ, ಧಾರವಾಡ ಇವರು ವಹಿಸಿಕೊಂಡು ಘಟನಾಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ 9 ಸಾಕ್ಷಿಗಳ ಹೇಳಿಕೆ ಪಡೆದು ತನಿಖೆಯ ಭಾಗವಾಗಿ ರಾಣೆಬೆನ್ನೂರ ತಹಶೀಲ್ದಾರರಿಂದ ಫಿರ್ಯಾದುದಾರರ ಜಾತಿ ಪ್ರಮಾಣ ಪತ್ರ 1 ನೇ ಆರೋಪಿ ಶ್ರೀಮತಿ. ಅನುಸೂಯಾ ತಂದೆ ಬೊಮ್ಮಯ್ಯ ನಾಯಕ, ಪ್ರಾಂಶುಪಾಲರು, ಪಿಯು ಕಾಲೇಜು ಇವರ ಸೇವಾ ಪುಸ್ತಕದ ದೃಢೀಕೃತ ಪ್ರತಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಯು ಕಾಲೇಜಿನ ಪ್ರಾಚಾರ್ಯರಿಂದ ದಿನಾಂಕ: 17.06.2022 ರಂದು ಹಾಜರಿದ್ದ ಅಧಿಕಾರಿ ವ ಸಂಬಂಧಿಸಿದವರ ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿ, ಪ್ರಾಂಶುಪಾಲರ ಕೊಠಡಿಯಲ್ಲಿ ಅಳವಡಿಸಿದ ಸಿಸಿ ಟಿವಿ ಕ್ಯಾಮರಾ ಫುಟೇಜ, ಲೋಕೋಪಯೋಗಿ ಇಲಾಖೆಯಿಂದ ಪಡೆದ ಘಟನಾ ಸ್ಥಳದ ನಕಾಶೆ ಮುಂತಾದ ಎಲ್ಲ ಸಾಕ್ಷಾಧಾರಗಳನ್ನು ಸಂಗ್ರಹಿಸಲಾಗಿ ಆರೋಪಿತಳ ಮೇಲೆ ಸಾಕಷ್ಟು ಸಾಕ್ಷ್ಯ ಪುರಾವೆಗಳಾಗಿದ್ದರಿಂದ ಆರೋಪಿತಳ ಮೇಲೆ ಕಲಂ 3(1)(5), 3(1)(2a)(E) ಎಸ್‌ಸಿ/ಎಸ್‌ಟಿ (ಪಿ.ಎ) ಅಮೆಂಡಮೆಂಟ್ ಆಕ್ಟ್ 2015 ನೇದ್ದರಲ್ಲಿ ತಯಾರಿಸಿದ ದೋಷಣಾ ಪಟ್ಟಿಯನ್ನು ಕಲಂ 197ಸಿಆರ್‌ಸಿ ನೇದ್ದರಡಿಯಲ್ಲಿ ಪ್ರಾಶ್ಯೂಕ್ಯೂಶನ್ ನಡೆಸಲು ಅಭಿಯೋಜನಾ ಮಂಜೂರಾತಿ (ಪೂರ್ವಾನುಮತಿ) ನೀಡಲು ಕೋರಿರುತ್ತಾರೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ ಆರೋಪಿತಳ ನೇಮಕಾತಿ ಪ್ರಾಧಿಕಾರಿ ಸಿಂಡಿಕೇಟವಾಗಿದ್ದರಿಂದ ಸದರ ವಿಷಯನ್ನು ದಿನಾಂಕ 05-12-2022 ರಂದು ಜರುಗಿದ ಸಿಂಡಿಕೇಟ ಸಭೆಗೆ ಮಂಡಿಸಲಾಗಿ, ಸಿಂಡಿಕೇಟ್ ಈ ಕೆಳಗಿನಂತೆ ಠರಾಯಿಸಿತು.

> "ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ. ಅನುಸುಯಾ ತಂದೆ ಬೊಮ್ಮಯ್ಯ ನಾಯಕ ಇವರ ವಿರುದ್ಧ ಧಾರವಾಡ ಉಪನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಪರಾಧ ಸಂಖ್ಯೆ: 136/2022 ಕಲಂ 504, 506 ಸಹಕಲಂ 34ಐಪಿಸಿ ಮತ್ತು ಕಲಂ 3(1)(5)3(1) (2a) (E) ಎಸ್.ಸಿ/ಎಸ್.ಟಿ (ಪಿ.ಎ) ಅಮೆಂಡಮೆಂಟ್ ಆಕ್ಟ್ 2015 ನೇದ್ದರಡಿಯಲ್ಲಿ ತಯಾರಿಸಿದ ದೋಷಾರೋಪಣೆ ಪಟ್ಟಿಯನ್ನು ಕಲಂ 197 ಸಿ.ಆರ್.ಪಿ.ಸಿ ರಡಿ ಪ್ರಾಶ್ಯೂಕ್ಯೂಶನ್ ನಡೆಸಲು ಅಭಿಯೋಜನಾ ಮಂಜೂರಾತಿ (ಪೂರ್ವಾನುಮತಿ) ಕೋರಿ ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರು ಸಲ್ಲಿಸಿದ ಪ್ರಸ್ತಾವನೆಗೆ ಅನುಮತಿ ನೀಡುವ ಕುರಿತು ಸಿಂಡಿಕೇಟ ಸಭೆಗೆ ಸದರ ವಿಷಯವಾಗಿ ಸಂಪೂರ್ಣ ಮಾಹಿತಿ ಬೇಕಾಗಿದ್ದರಿಂದ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೊಂದಿಗೆ ಚರ್ಚಿಸಿ ಅವುಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲು ಮುಂಬರುವ ಸಿಂಡಿಕೇಟ ಸಭೆಗೆ ಮಂಡಿಸುವಂತೆ ನಿರ್ಣಯಿಸಲಾಯಿತು".

ಮೇಲ್ಕಾಣಿಸಿದ ಸಿಂಡಿಕೇಟ ನಿರ್ಣಯದಂತೆ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಸಲಹೆ ಪಡೆಯಲಾಗಿ ಅವರು ದಿನಾಂಕ 20-01-2023 ರಂದು ಈ ಕೆಳಕಾಣಿಸಿದಂತೆ ಸಲಹೆ ನೀಡಿದ್ದಾರೆ.

> "Perused the entire case papers along with charge Sheet. Discussed with staff of the concerned Department. Perused the provisions of Sec 197 of Cr.P.C The offences or acts alleged to have been committed by accused person (who is public servant) while discharging of and in connection with official duties and alleged incident has taken place within public premises of University Public School. Therefore, it is



ಕುಲಸಚಿವರು ಕುಲಪತಿಗಳು

necessary for Investigation Officer to obtain sanction or permission to prosecute the accused person by name Smt.Anusuya Nayak.

Hence sanction to prosecute accused who is an employee of the University may be issued.

Further, it is noticed that some staff members of said U.P.School PU College have submitted joint letter to the Vice-Chancellor. The said letter may be forwarded to the Investigation Officer alongwith sanction letter".

ಸದರ ವಿಷಯವನ್ನು ಮಾನ್ಯ ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ. ಅನುಸುಯಾ ತಂದೆ ಬೊಮ್ಮಯ್ಯ ನಾಯಕ ಇವರ ವಿರುದ್ಧ ಧಾರವಾಡ ಉಪನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಪರಾಧ ಸಂಖ್ಯೆ: 136/2022 ಕಲಂ 504, 506 ಸಹಕಲಂ 34ಐಪಿಸಿ ಮತ್ತು ಕಲಂ 3(1)(5)3(1) (2a) (E) ಎಸ್.ಸಿ/ಎಸ್.ಟಿ (ಪಿ.ಎ) ಅಮೆಂಡಮೆಂಟ್ ಆಕ್ಟ್ 2015 ನೇದ್ದರಡಿಯಲ್ಲಿ ತಯಾರಿಸಿದ ದೋಷಾರೋಪಣೆ ಪಟ್ಟಿಯನ್ನು ಕಲಂ 197 ಸಿ.ಆರ್.ಪಿ.ಸಿ ರಡಿ ಪ್ರಾಶ್ಯೂಕ್ಯೂಶನ್ ನಡೆಸಲು ಅಭಿಯೋಜನಾ ಮಂಜೂರಾತಿ (ಪೂರ್ವಾನುಮತಿ) ಕೋರಿ ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರು ಸಲ್ಲಿಸಿದ ಪ್ರಸ್ತಾವನೆಗೆ ಕಾನೂನು ಸಲಹೆಗಾರರು ಸೂಚಿಸಿದಂತೆ ಕ್ರಮ ಜರುಗಿಸಲು ಒಪ್ಪಿಗೆಯನ್ನು ನೀಡಿತು.**



ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ–12: ವಿಷಯ–:** ದಿನಾಂಕ. 23.01.2023 ರಂದು ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಪರಿಶೀಲನೆಗಾಗಿ ಹಾಗೂ ಸಮಿತಿಯ ಶಿಫಾರಸ್ಸಿನ ಪ್ರಕಾರ ಕವಿವಿ ಬೋಧಕೇತರ ನೌಕರರಿಗೆ ಮುಂಬಡ್ತಿ ಆದೇಶಗಳನ್ನು ಜಾರಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿದೆ.

**ಪ್ರಸ್ತಾವನೆ:**

ಕರ್ನಾಟಕ ವಿಶ್ವವಿದ್ಯಾಲಯದ ಬೋಧಕೇತರ ನೌಕರರ ಮುಂಬಡ್ತಿ ವಿಷಯವನ್ನು ಪರಿಶೀಲಿಸಲು ದಿನಾಂಕ: 23.01.2023 ರಂದು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯು ಜರುಗಿತು. ಸದರಿ ಸಭೆಗೆ ಒಟ್ಟು 08 ಜನ ಸದಸ್ಯರಿರುತ್ತಾರೆ. ಸದರಿ ಸಭೆಯಲ್ಲಿ ಉಪಕುಲಸಚಿವರು ಮತ್ತು 371 (ಜೆ) ಭಾಗಕ್ಕೆ ಒಳಪಡುವ ಖಾಲಿ ಇರುವ ಹಾಗೂ ತತ್ಪರಿಣಾಮದ ಪ್ರಯುಕ್ತ ಉಂಟಾಗುವ ಖಾಲಿ ಸ್ಥಾನಗಳ ಎದುರಾಗಿ ಮುಂಬಡ್ತಿ ಮೂಲಕ ಭರ್ತಿ ಮಾಡುವ ಕುರಿತು ಪ್ರಸ್ತಾವನೆಯನ್ನು ಸಮಿತಿಯ ಮುಂದೆ ಮಂಡಿಸಲಾಗಿತ್ತು. ಅದರಂತೆ, ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗೆ ತಿಳಿಸಿದ ಸದಸ್ಯರು ಹಾಜರಾಗಿ ಪದೋನ್ನತಿ ಸಮಿತಿಯು ತನ್ನ ನಡವಳಿಯನ್ನು ಮಾನ್ಯ ಕುಲಪತಿಗಳಿಗೆ ಸಲ್ಲಿಸಿರುತ್ತದೆ.

| | | |
|---|---|---|
| 1) ಕುಲಪತಿಗಳು | – | ಅಧ್ಯಕ್ಷರು |
| 2) ಕುಲಸಚಿವರು | – | ಸದಸ್ಯರು |
| 3) ಕುಲಸಚಿವರು (ಮೌಲ್ಯಮಾಪನ) | – | ಸದಸ್ಯರು |
| 4) ಶ್ರೀಮತಿ.ಹಂಸವೇಣಿ.ಎನ್. ಸಿಂಡಿಕೇಟ್ ಸದಸ್ಯರು | – | ಸದಸ್ಯರು |
| 5) ಡಾ. ಎಂ.ವಾಯ್. ಕರಿದುರ್ಗನವರ, ಪ್ರಾಧ್ಯಾಪಕರು, | – | ಸದಸ್ಯರು (ಪ.ಜಾ/ಪ.ಪಂ. ಪ್ರತಿನಿಧಿ) |
| 6) ಉಪಕುಲಸಚಿವರು ಸಿಆಸು ವಿಭಾಗ | – | ಸಮಿತಿಯ ಸಂಚಾಲಕರು |

ಇಲಾಖಾ ಪದೋನ್ನತಿ ಸಮಿತಿಯ 08 ಸದಸ್ಯರ ಪೈಕಿ 06 ಸದಸ್ಯರು ಹಾಜರಾಗಿರುವುದರಿಂದ, ಸದರಿ ಸಭೆಗೆ ಕೋರಂ ಆಗಿರುತ್ತದೆ. ಸದರಿ ಇಲಾಖಾ ಪದೋನ್ನತಿ ಸಮಿತಿ ಸಭೆಯ ಸದಸ್ಯರಲ್ಲಿ ಮಾನ್ಯ ಶ್ರೀಮತಿ ಹಂಸವೇಣಿ ಎನ್., ಸಿಂಡಿಕೇಟ್ ಸದಸ್ಯರು ಇವರು ಇಲಾಖಾ ಪದೋನ್ನತಿ ಸಮಿತಿ ಸಭೆಯ ತನ್ನ ನಡಾವಳಿಯ (ವರದಿ) ಪ್ರತಿಗೆ ಸಹಿಯನ್ನು ಮಾಡಿರುವುದಿಲ್ಲ. ಆದರೆ ಸಮಿತಿಯಲ್ಲಿ ಹಾಜರಿದ್ದ ಉಳಿದ ಐವರು ಸದಸ್ಯರು ನಡಾವಳಿಯ (ವರದಿ) ಪ್ರತಿಗೆ ಒಪ್ಪಿಗೆ ಸಹಿಯನ್ನು ಮಾಡಿರುತ್ತಾರೆ.

ಮುಂದುವರೆದು, ಶ್ರೀಮತಿ.ಹಂಸವೇಣಿ.ಎನ್., ಸಿಂಡಿಕೇಟ್ ಸದಸ್ಯರು ಇವರು ಪದೋನ್ನತಿಗೆ ಸಂಬಂಧಿಸಿದಂತೆ ದಿನಾಂಕ.24.01.2023 ರಂದು ನೀಡಿದ ಪತ್ರದಲ್ಲಿ ಈ ಕೆಳಗಿನ ಮಾಹಿತಿಯನ್ನು ಕೋರಿದ್ದು ಇರುತ್ತದೆ.

"ಕರ್ನಾಟಕ ವಿಶ್ವವಿದ್ಯಾಲಯ ಇಲಾಖಾ ಪದೋನ್ನತಿ ಸಮಿತಿ ಸಭೆಯು ದಿನಾಂಕ: 23.01.2023 ರಂದು ಜರುಗಿರುತ್ತದೆ. ಸದರ ಸಭೆಯಲ್ಲಿ ನಾನು ಅಜೆಂಡಾ ಸಂಖ್ಯೆ. 01 ಕ್ಕೆ ಸಂಬಂಧಿಸಿದಂತೆ, ಸಿಬ್ಬಂದಿಯ ಪೂರ್ಣ ಹೆಸರನ್ನು ಕೇಳಿದಾಗ ಹಾಗೂ ಸೇವಾ ಪುಸ್ತಕದಲ್ಲಿರುವಂತೆ ಅವರ ಪೂರ್ಣ ಹೆಸರನ್ನು ಪೂರೈಸುವಂತೆ ಕೋರಿದಾಗ ಮಾನ್ಯ ಕುಲಪತಿಗಳು ಅದ್ನು ನೀಡುವುದಕ್ಕೆ ಬರುವುದಿಲ್ಲವೆಂದು ಸಭೆಯಲ್ಲಿ ಮೌಖಿಕವಾಗಿ ತಿಳಿಸಿರುತ್ತಾರೆ. ಸಭೆಯ ಸದಸ್ಯಳಾದ ನನಗೆ ಅದರ ವಿವರವಾದ ಮಾಹಿತಿಯನ್ನು ನೀಡುವುದಕ್ಕೆ ಬರುವುದಿಲ್ಲವೆಂದು ಪುನಃರುಚ್ಛರಿಸಿದ ಕಾರಣ ಯಾವ ನಿಯಮದ ಅನುಸಾರ ಮಾನ್ಯ ಕುಲಪತಿಗಳು ಈ ಕಾರಣವನ್ನು ನೀಡಿರುತ್ತೀರಿ ಅದಕ್ಕೆ ನಿಖರವಾದ ದಾಖಲೆಗಳನ್ನು ನೀಡಲು ವಿನಂತಿ.

ಗೌರವಾನ್ವಿತ ರಾಜ್ಯಪಾಲರ ಹಾಗೂ ರಾಜ್ಯ ಸರಕಾರದ ನಿಯಮಾನುಸಾರ ಸಭೆಗಳಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲಾಗುತ್ತದೆಯೇ ಎಂಬುದರ ಬಗ್ಗೆ ತಾವು ತುರ್ತಾಗಿ ಪತ್ರದ ಮೂಲಕ ಈ ಪತ್ರಕ್ಕೆ ಹಿಂಬರಹ ನೀಡಿ ಅಗತ್ಯ ದಾಖಲೆಗಳನ್ನು ಪೂರೈಸಲು ವಿನಂತಿಸುತ್ತೇನೆ ಹಾಗೂ ಡಿ.ಪಿ.ಸಿ. ಸಭೆ ಅಜೆಂಡಾ 01 ಕ್ಕೆ ಸಂಬಂಧಿಸಿದಂತೆ



ಕುಲಸಚಿವರು ಕುಲಪತಿಗಳು

ಸದರ ಸಿಬ್ಬಂದಿಯ ಸಿಂಧುತ್ವ ಪತ್ರವನ್ನು ಪೂರೈಸಲು ವಿನಂತಿಸುತ್ತೇನೆ. ಮಾಹಿತಿ ಪೂರೈಸುವವರೆಗೂ ಪದೋನ್ನತಿ ನೀಡುವುದನ್ನು ತಡೆ ಹಿಡಿಯಲು ಕೋರುತ್ತೇನೆ. ಕೋರಿದ ಮಾಹಿತಿಗಳನ್ನು ತುರ್ತಾಗಿ 2 ದಿನದೊಳಗಾಗಿ ಪೂರೈಸಲು ವಿನಂತಿ"

The Rules of Business of the Syndicate ನಿಯಮ 15 ರ ಪ್ರಕಾರ, ಸದರಿ ಇಲಾಖಾ ಪದೋನ್ನತಿ ಸಮಿತಿಗೆ ಸಂಬಂಧಿಸಿದ ಮಾಹಿತಿಯ ಬಗ್ಗೆ ಸಭೆಯು ಮುಗಿಯುವ ಮೊದಲೇ ತಮ್ಮ ಆಕ್ಷೇಪಣೆ ಪತ್ರವನ್ನು ಅಧ್ಯಕ್ಷರಿಗೆ ಸಲ್ಲಿಸಬೇಕಾಗುತ್ತದೆ. ಇಲಾಖಾ ಸಮಿತಿಯ ಬಗ್ಗೆ ಈ ರೀತಿಯ ಯಾವುದೇ ನಿಖರತೆ ಇರುವುದಿಲ್ಲವಾದರೂ ಸಹ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಮಿತಿಯ ಜರುಗುವ ಸಂದರ್ಭದಲ್ಲಿಯೇ ಲಿಖಿತವಾಗಿ ದಾಖಲಿಸುವುದು ಸೂಕ್ತವಾಗಿರುತ್ತದೆ. ವಿಶ್ವವಿದ್ಯಾಲಯದ ಇಲಾಖಾ ಪದೋನ್ನತಿ ಸಮಿತಿ ಸಭೆಯು ದಿನಾಂಕ:23.01.2023 ರಂದು ಮುಂಜಾನೆ 11.30 ಘಂಟೆಗೆ ಜರುಗಿದ್ದು, ಶ್ರೀಮತಿ. ಹಂಸವೇಣಿ.ಎನ್., ಸಿಂಡಿಕೇಟ್ ಸದಸ್ಯರು, ಇವರು ದಿನಾಂಕ.24.01.2023 ರಂದು ಮಾನ್ಯ ಅಧ್ಯಕ್ಷರಿಗೆ ತಮ್ಮ ಆಕ್ಷೇಪಣೆ ಸಲ್ಲಿಸಿರುತ್ತಾರೆ.

ಆದ್ದರಿಂದ, ಮೇಲ್ಕಾಣಿಸಿದ ಅಂಶಗಳನ್ನು ಪರಿಶೀಲಿಸಿ, ದಿನಾಂಕ: 23.01.2023 ರಂದು ಕವಿವಿ ಇಲಾಖಾ ಪದೋನ್ನತಿ ಸಮಿತಿ ಸಭೆಯು ಶಿಪಾರಸ್ಸು ಮಾಡಿರುವ ಉಪಕುಲಸಚಿವರು ಮತ್ತು 371 (ಜೆ) ಭಾಗಕ್ಕೆ ಒಳಪಡುವ ಖಾಲಿ ಇರುವ ಹಾಗೂ ತತ್ಪರಿಣಾಮದ ಪ್ರಯುಕ್ತ ಉಂಟಾಗುವ ಖಾಲಿ ಸ್ಥಾನಗಳ ಎದುರಾಗಿ ಮುಂಬಡ್ತಿ ನೀಡುವ ಕುರಿತಂತೆ ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಿದೆ.

## ನಿರ್ಣಯ

**ದಿನಾಂಕ. 23.01.2023 ರಂದು ಜರುಗಿದ ಕವಿವಿ ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸಿನ ಪ್ರಕಾರ ಕವಿವಿ ಬೋಧಕೇತರ ನೌಕರರಿಗೆ ಮುಂಬಡ್ತಿ ಆದೇಶಗಳನ್ನು ಜಾರಿ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಿ ಉಪಕುಲಸಚಿವರು ಮತ್ತು 371 (ಜೆ) ಭಾಗಕ್ಕೆ ಒಳಪಡುವ ಖಾಲಿ ಇರುವ ಹಾಗೂ ತತ್ಪರಿಣಾಮದ ಪ್ರಯುಕ್ತ ಉಂಟಾಗುವ ಖಾಲಿ ಸ್ಥಾನಗಳ ಎದುರಾಗಿ ಮುಂಬಡ್ತಿ ನೀಡಲು ಕೆಸಿಎಸ್ ನಿಯಮದಂತೆ ಮುಂದಿನ ಅಗತ್ಯ ಕ್ರಮವಹಿಸಲು ನಿರ್ಣಯಿಸಲಾಯಿತು. ಆದರೆ ಶ್ರೀಮತಿ. ಹಂಸವೇಣಿ ಎನ್., ಸಿಂಡಿಕೇಟ ಸದಸ್ಯರು ಇವರು ಉಪ ಕುಲಸಚಿವರ ಹುದ್ದೆಗೆ ಪದೋನ್ನತಿ ನೀಡುವ ವಿಷಯವಾಗಿ ಅಸಮ್ಮತಿ ಸೂಚಿಸಿದರು ಹಾಗೂ ಉಳಿದ ಸದಸ್ಯರು ಸಮ್ಮತಿ ಸೂಚಿಸಿದರು.ಮುಂದುವರೆದು, ಇಲಾಖಾ ಪರೀಕ್ಷೆಗಳನ್ನು ಉತ್ತೀರ್ಣರಾಗದೇ ಇರುವಂತಹ ಸಿಬ್ಬಂದಿಗಳು ಮುಂದಿನ ಹುದ್ದೆಗೆ ಬಡ್ತಿ ಹೊಂದಲು ಕೆ.ಪಿ.ಎಸ್.ಸಿ.ಯಿಂದ ಜರುಗಿಸಲ್ಪಡುವ ಇಲಾಖಾ ಪರೀಕ್ಷೆ ಉತ್ತೀರ್ಣರಾದ ಹಾಗೂ ಗಣಕಯಂತ್ರದ ಮೂಲ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಒಂದು ವರ್ಷದೊಳಗೆ ಸಲ್ಲಿಸದೇ ಇದ್ದರೆ ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ಮತ್ತು ಮುಂದಿನ ಪದೋನ್ನತಿಗೆ ಪರಿಗಣಿಸಲಾಗುವದಿಲ್ಲವೆಂಬ ಷರತ್ತಿಗೊಳಪಟ್ಟು ಆದೇಶ ನೀಡುವಂತೆ ನಿರ್ಣಯಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-13: ವಿಷಯ–:** ಡಾ. ಹೊನ್ನಪ್ಪ. ಎಸ್, ಸಹ ಪ್ರಾಧ್ಯಪಕರು (ಅಮಾನತ್ತು) ಇವರು ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿ ತಮ್ಮ ಕಿರು ರುಜು ಮಾಡಿರುವ ಪ್ರಕರಣದ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳಲು ಇಲಾಖಾ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡುವ ವಿಷಯವನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಡಾ. ಹೊನ್ನಪ್ಪ. ಎಸ್, ಸಹ ಪ್ರಾಧ್ಯಪಕರು (ಅಮಾನತ್ತು) ಇವರು ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿ ತಮ್ಮ ಕಿರು ರುಜು ಮಾಡಿರುವ ವಿಷಯದ ಬಗ್ಗೆ ದಿನಾಂಕ: 16.11.2022 ರಂದು ಜರುಗಿದ ವಿಶೇಷ ಆಡಳಿತ ಮಂಡಳಿ ಸಭೆಯ ನಿರ್ಣಯ ಸಂಖ್ಯೆ.01 ರಲ್ಲಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿರುತ್ತದೆ.

> *"ಡಾ.ಹೊನ್ನಪ್ಪ. ಎಸ್., ಸಹ ಪ್ರಾಧ್ಯಾಪಕರು ಅರ್ಥಶಾಸ್ತ್ರ ವಿಭಾಗ ಕರ್ನಾಟಕ ಕಲಾ ಮಹಾವಿದ್ಯಾಲಯ ಧಾರವಾಡ ಇವರು ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ: **18.07.1961** ಎಂದು ಇದ್ದಿದ್ದನ್ನು **18.07.1964** ಎಂದು ತಿದ್ದಿರುವ ಬಗ್ಗೆ ಸತ್ಯ ಶೋಧನ ಸಮಿತಿಯು ಸಲ್ಲಿಸಿದ ವರದಿಯನ್ನು ಹಾಗೂ ಕಛೇರಿಯಲ್ಲಿ ಇದ್ದಂತಹ ದಾಖಲೆಗಳನ್ನು ಪರಿಶಿಲಿಸಲಾಗಿ ಸದರಿಯವರು ಜನ್ಮ ದಿನಾಂಕವನ್ನು ತಿದ್ದಿರುವ ಬಗ್ಗೆ ಮೇಲ್ನೋಟಕ್ಕೆ ಕಂಡುಬರುತ್ತಿರುವದರಿಂದ ಸಿಂಡಿಕೇಟ ಸಭೆಯು ಪರೀಶಿಲಿಸಿ ಕರ್ನಾಟಕ ವಿಶ್ವವಿದ್ಯಾಲಯದ ಸಿಬ್ಬಂದಿಗಳ ವರ್ಗೀಕರಣ ನಿಯಂತ್ರಣ ಹಾಗೂ ಮನವಿ ನಿಯಮಾವಳಿಗಳು (ಸಿಸಿಎ) 1998 ರ (8) ರನ್ವಯ ಡಾ. ಹೊನ್ನಪ್ಪ ಎಸ್. ರವರಿಂದ ಏಳು ದಿನಗಳ ಒಳಗಾಗಿ ಸೂಕ್ತ ಲಿಖಿತ ವಿವರಣೆ ಪಡೆದು ಅದರ ಆಧಾರದಲ್ಲಿ ಇಲಾಖೆ ವಿಚಾರಣೆಯನ್ನು ಕೈಗೊಳ್ಳುವುದು ಹಾಗೂ ಸೂಕ್ತ ವಿವರಣೆ ನೀಡದಿದ್ದಲ್ಲಿ ಸೇವೆಯಿಂದ ಅಮಾನುತಗೊಳಿಸಿ, ಇಲಾಖೆ ವಿಚಾರಣೆ ನಿರ್ವಹಿಸಲು ಮುಂದಿನ ಕ್ರಮವಹಿಸುವಂತೆ ನಿರ್ಣಯಿಸಿತು.*
>
> *ಮುಂದುವರಿದು ಮೇಲ್ಕಂಡ ಇಲಾಖಾ ವಿಚಾರಣೆ ನಿರ್ವಹಿಸಲು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಂದ ವಿಚಾರಣಾಧಿಕಾರಿಯನ್ನಾಗಿ ಹಾಗೂ ಡಾ. (ಶ್ರೀಮತಿ) ಅಂಜನಾದೇವಿ ಎಸ್. ತಾಮ್ರಗುಂಡಿ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಮಂಡಣಾಧಿಕಾರಿಯನ್ನಾಗಿ ನೇಮಿಸಲು ಸಭೆಯು ನಿರ್ಣಯಿಸಿತು."*

ಸದರ ಮೇಲ್ಕಾಣಿಸಿದ ಆಡಳಿತ ಮಂಡಳಿ ಸಭೆಯ ನಿರ್ಣಯದ ಮೇರೆಗೆ ಡಾ. ಹೊನ್ನಪ್ಪ. ಎಸ್, ಸಹ ಪ್ರಾಧ್ಯಪಕರು (ಅಮಾನತ್ತು) ಇವರು ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿ ತಮ್ಮ ಕಿರು ರುಜು ಮಾಡಿರುವ ಬಗ್ಗೆ ಇವರಿಗೆ ದಿನಾಂಕ: 24.11.2022 ರ ಈ ಕಚೇರಿ ಪತ್ರ ಸಂಖ್ಯೆ.2174 ರ ಮೂಲಕ ಏಳು ದಿನಗಳ ಅವಧಿಯೊಳಗಾಗಿ ಸೂಕ್ತ ಲಿಖಿತ ವಿವರಣೆ ಸಲ್ಲಿಸಲು ತಿಳಿಸಲಾಯಿತು ಅದಕ್ಕೆ ಪ್ರತಿಯಾಗಿ ಡಾ. ಹೊನ್ನಪ್ಪ. ಎಸ್, ಸಹ ಪ್ರಾಧ್ಯಪಕರು (ಅಮಾನತ್ತು) ಇವರು ತಮ್ಮ ಲಿಖಿತ ವಿವರಣೆಯನ್ನು ದಿನಾಂಕ: 12.12.2022 ರ ಮೂಲಕ ಕವಿವಿ ಗೆ ಸಲ್ಲಿಸಿರುವರು. ಸದರಿಯವರು ಸಲಿಸಿದ ಲಿಖಿತ ವಿವರಣೆಯು ಸಮಂಜಸವೆನಿಸದ ಕಾರಣ ದಿನಾಂಕ: 26.12.2022 ರ ಈ ಕಚೇರಿ ಆದೇಶ ಸಂಖ್ಯೆ. 2423 ರ ಮೂಲಕ ಸದರಿಯವರನ್ನು ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತ್ತುಗೊಳಿಸಲಾಯಿತು. ನಂತರ ಸದರಿಯವರಿಗೆ ದೋಷಾರೋಪಣ ಪಟ್ಟಿಯನ್ನು (ಅನುಬಂಧ 1 ರಿಂದ 4) ಲಗತ್ತಿಸಿ 15 ದಿಗಳೊಳಗಾಗಿ ಸ್ಪಷ್ಟ ಲಿಖಿತ ಹೇಳಿಕೆಯನ್ನು ಸಲ್ಲಿಸಲು ದಿನಾಂಕ: 10.01.2023 ರ ಈ ಕಚೇರಿಯಿಂದ ಕಾರಣ ಕೇಳುವ ನೋಟೀಸ್ ಸಂಖ್ಯೆ. 2510 ರ ಮೂಲಕ ಜಾರಿ ಮಾಡಿದ್ದು ಅದಕ್ಕೆ ಪ್ರತಿಯಾಗಿ ಡಾ. ಹೊನ್ನಪ್ಪ ಎಸ್ (ಅಮಾನತ್ತು) ಇವರು ದಿನಾಂಕ: 24.01.2023 ರಂದು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದಂತೆ ಡಾ. ಹೊನ್ನಪ್ಪ ಎಸ್ (ಅಮಾನತ್ತು) ಇವರ ಲಿಖಿತ ವಿವರಣೆ, ದೋಷಾರೋಪಣ ಪಟ್ಟಿ ಲಗತ್ತಿಸಿ, ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಇಲಾಖಾ ವಿಚಾರಣೆ ಕೈಗೊಳ್ಳಲು ದಿನಾಂಕ: 28.01.2023 ರ ಈ ಕಚೇರಿ ಪತ್ರ ಸಂಖ್ಯೆ.2740 ರ ಮೂಲಕ ಕಾನೂನು ಸಲಹೆಗಾರರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಡಾ. (ಶ್ರೀಮತಿ) ಅಂಜನಾದೇವಿ ತಾಮ್ರಗುಂಡಿ, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗ, ಕವಿವಿ ಧಾರವಾಡ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ದಿನಾಂಕ:28.01.2023 ರ ಈ ಕಚೇರಿ ಅಧಿಸೂಚನೆ ಸಂಖ್ಯೆ.2740 ನ್ನು ಹೊರಡಿಸಲಾಗಿತ್ತು ಆದರೆ ಕಾನೂನು ಸಲಹೆಗಾರರು, ಕವಿವಿ, ಧಾರವಾಡ ಇವರು ತಮ್ಮನ್ನು ಈಗಾಗಲೇ ಸತ್ಯ ಶೋಧನಾ ಸಮಿತಿಯ ಸಭೆಯಲ್ಲಿ ಸದಸ್ಯರೆಂದು ತಮ್ಮನ್ನು ನೇಮಕ ಮಾಡಲಾಗಿದ್ದು ಈಗ ಇಲಾಖಾ ವಿಚಾರಣಾ ಸಮಿತಿಗೆ ತಮ್ಮನ್ನು ವಿಚಾರಣಾಧಿಕಾರಿ ಎಂದು ಕಾರ್ಯನಿರ್ವಹಿಸಲು ಬರುವುದಿಲ್ಲ ಮತ್ತು ವಿಚಾರಣಾಧಿಕಾರಿ ಎಂದು ಕಾರ್ಯನಿರ್ವಹಿಸುವುದು ಪಕ್ಷಪಾತವಾಗುತ್ತದೆ. ಸದರ ಇಲಾಖಾ ವಿಚಾರಣಾ ಸಮಿತಿಗೆ ಬೇರೆ ನಿಷ್ಪಕ್ಷಪಾತ/ಸ್ವತಂತ್ರ ಅಧಿಕಾರಿಯನ್ನು ನೇಮಿಸುವುದು ಸೂಕ್ತವಾಗುತ್ತದೆ ಎಂದು ಕವಿವಿ ಕಾನೂನು ಸಲಹೆಗಾರರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.



ಕುಲಸಚಿವರು ಕುಲಪತಿಗಳು

ಆದ್ದರಿಂದ, ಡಾ. ಹೊನ್ನಪ್ಪ ಎಸ್., ಸಹ ಪ್ರಾಧ್ಯಾಪಕರು (ಅಮಾನತ್ತು) ಇವರ ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿ ಕಿರು ರುಜು ಮಾಡಿರುವ ಪ್ರಕರಣದ ಬಗ್ಗೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಇಲಾಖಾ ವಿಚಾರಣಾ ಸಮಿತಿ ಸಭೆಗೆ ವಿಚಾರಣಾಧಿಕಾರಿಯನ್ನು ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡುವ ಕುರಿತು ಆಡಳಿತ ಮಂಡಳಿ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಡಾ. ಹೊನ್ನಪ್ಪ. ಎಸ್., ಸಹ ಪ್ರಾಧ್ಯಪಕರು (ಅಮಾನತ್ತು) ಇವರು ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ ತಿದ್ದುಪಡಿ ಮಾಡಿ ತಮ್ಮ ಕಿರು ರುಜು ಮಾಡಿರುವ ಪ್ರಕರಣದ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳಲು ಇಲಾಖಾ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯವರ ಹೆಸರುಗಳನ್ನು ತಿಳಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರವಹಿಸಲಾಯಿತು.**



ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ–14: ವಿಷಯ–:** ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು ಸಿಂಡಿಕೇಟ ಸದಸ್ಯರು/ ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ದಿನಾಂಕ: 05.08.2022 ರ ಪ್ರಸ್ತಾವನೆಯ ಮೇಲೆ ಆಡಳಿತ ಮಂಡಳಿ ಸಭೆಯು ತೆಗೆದುಕೊಂಡ ನಿರ್ಣಯ ಮತ್ತು ಈ ಕುರಿತು ಕಲಾ ಮತ್ತು ವಿಜ್ಞಾನ ನಿಖಾಯಗಳ ಜಂಟಿ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಹಾಗೂ ವಿದ್ಯಾವಿಷಯಕ್ ಪರಿಷತ್ ಸಭೆಯು ಕೈಗೊಂಡ ನಿರ್ಣಯ ಮತ್ತು ದಿನಾಂಕ: 10.12.2022 ರಲ್ಲಿ ಆಡಳಿತ ಮಂಡಳಿ ಸಭೆಯು ಕೈಗೊಂಡ ನಿರ್ಣಯದ ಕುರಿತು ಮತ್ತು ಈ ಕೆಳಕಂಡ ಟಿಪ್ಪಣಿಯಲ್ಲಿ ಕಾಣಿಸಿದ ಎಲ್ಲ ಅಂಶಗಳನ್ನು ಪರಿಶೀಲಿಸುವ ಕುರಿತು.

ಟಿಪ್ಪಣಿ:

ಕುಲಸಚಿವರು, ಕವಿವಿ, ಧಾರವಾಡ ಇವರ ದಿನಾಂಕ: 08.08.2022 ರ ತಮ್ಮ ಪತ್ರದಲ್ಲಿ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು, ಸಿಂಡಿಕೇಟ ಸದಸ್ಯರು/ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಸಲ್ಲಿಸಿದ ದಿನಾಂಕ: 05.08.2022 ರ ಪತ್ರದಲ್ಲಿನ ವಿಷಯ **ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಮತ್ತು ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ** ಸಲ್ಲಿಸಿದ ಪ್ರಸ್ತಾವನೆಯ ಬಗ್ಗೆ ತಿಳಿಸುತ್ತ ಸಿಂಡಿಕೇಟ ಸಭೆಗೆ ಕಲಂ ತಯಾರಿಸಿ ಮಂಡಿಸಲು ತಿಳಿಸಿದ್ದು ಹಾಗೂ ಸದರ ಪ್ರಸ್ತಾವನೆಯಲ್ಲಿ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು, ಇವರು ಸದರ ವಿಷಯದ ಬಗ್ಗೆ ದಿನಾಂಕ: 18.08.2022 ರಂದು ಜರುಗುವ ಸಿಂಡಿಕೇಟ ಸಭೆಗೆ ಮಂಡಿಸಲು ತಿಳಿಸಿ ಈ ಕೆಳಗಿನಂತೆ ಕೋರಿರುತ್ತಾರೆ.

**"Karnatak Arts College is having Mathematics Department without any subjects either in its Degrees programmes or in PUC. Similarly, it has statistics department also having only one paper in B.A. with workload for a single teacher, but not in PUC. The recruited permanent faculties in Karnatak Arts College for the said subjects are working for Science College. Since both the subjects are purely belonging to Science stream, it is necessary to shift the said Departments along with Faculty from Karnatak Arts College to Karnatak Science College. Administratively, it is good also for monitoring the day-to-day academic activities by the Principal of Karnatak Science College.**

**Hence, I am herewith proposing the item for Syndicate to be held on 18-08-2022 for consideration of Shifting / Transferring the Mathematics and Statistics Departments along with Permanent teachers from Karnatak Arts College to Karnatak Science College".**

ಸದರ ವಿಷಯವಾಗಿ ನಿವೇದಿಸಿಕೊಳ್ಳುವುದೇನೆಂದರೆ, ಪ್ರಸ್ತುತ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳು ಕರ್ನಾಟಕ ಕಲಾ ಮಹಾವಿದ್ಯಾಲಯದ ಅಧೀನದ ಕಾರ್ಯನಿರ್ವಹಣೆಯಲ್ಲಿದ್ದು ಹಾಗೂ ಸದರಿ ಮಹಾವಿದ್ಯಾಲಯಕ್ಕೆ ಮಂಜೂರಾದ ಬೋಧಕ ಹುದ್ದೆಗಳಿರುತ್ತವೆ. ಸದರಿ ಖಾಯಂ ಬೋಧಕ ಸಿಬಂದಿಗಳು ಕರ್ನಾಟಕ ಕಲಾ ಮಹಾವಿದ್ಯಾಲಯದ ಅಧೀನದ ಕಾರ್ಯನಿರ್ವಹಣೆಯಲ್ಲಿ ಇರುತ್ತಾರೆ. ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯದ ತರಗತಿಗಳಿಗೆ ತೊಂದರೆಯಾಗದಂತೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕಾರ್ಯ ಹೊಂದಾಣಿಕೆಯ ಮೇರೆಗೆ ಬೋಧಕ ಸಿಬ್ಬಂದಿಯವರು ತರಗತಿಗಳನ್ನು ಬೋಧಿಸುತ್ತಿರುವರು.

ಸದರ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳು ಕರ್ನಾಟಕ ಕಲಾ ಮಹಾವಿದ್ಯಾಲಯದ ಆಡಳಿತ ವ್ಯಾಪ್ತಿಗೊಳಪಟ್ಟದ್ದಾಗಿದ್ದು ಸದರಿ ಮಹಾವಿದ್ಯಾಲಯಕ್ಕೆ ಈ ಕೆಳಗಿನಂತೆ ಮಂಜೂರಾದ ಬೋಧಕ ಹುದ್ದೆಗಳಿರುತ್ತವೆ. ಆದರೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಮಂಜೂರಾದ ಹುದ್ದೆಗಳು ಇರುವುದಿಲ್ಲ.

| ಅ. ನಂ. | ವಿಭಾಗ | ಮಂಜೂರಾದ ಹುದ್ದೆಗಳು | ಕಾರ್ಯನಿರತ ಹುದ್ದೆಗಳು | ಖಾಲಿ ಹುದ್ದೆಗಳು | ಶರಾ |
|---|---|---|---|---|---|
| 1 | ಗಣಿತ | 08 | 03 | 04 | ಒಂದು ಹುದ್ದೆಯನ್ನು ಗಣಕ ಯಂತ್ರ ವಿಭಾಗಕ್ಕೆ ಈ ಕಚೇರಿ ಟಿಪ್ಪಣಿ ಸಂಖ್ಯೆ.1480, ದಿ:24.02.2014 ರ ಮೂಲಕ ಮರು ಹಂಚಿಕೆ ಮಾಡಲಾಗಿದೆ. |
| 2 | ಸಂಖ್ಯಾಶಾಸ್ತ್ರ | 09 | 04 | 05 | --- |



ಕುಲಸಚಿವರು ಕುಲಪತಿಗಳು

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ಡಾ.ಬಿ.ಬಸವನಗೌಡ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ಪ್ರಸ್ತಾವನೆಯು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಭಾಗಗಳ ಮಂಜೂರಾದ ಹುದ್ದೆಗಳನ್ನು ಮತ್ತು ಕಾರ್ಯನಿರತ ಬೋಧಕ ಸಿಬ್ಬಂದಿಯವರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದು ಈ ಪ್ರಕ್ರೀಯೆಯು ಕಲಾ ಮತ್ತು ವಿಜ್ಞಾನ ನಿಖಾಯದ ಡೀನರುಗಳ ಕೈಗೊಳ್ಳುವ ನಿರ್ಣಾಯಕ್ಕೊಳಪಟ್ಟಿರುತ್ತದೆ. ಕಾರಣ ಕಲಾ ಮತ್ತು ವಿಜ್ಞಾನ ನಿಖಾಯಗಳ ಡೀನರುಗಳ ಜಂಟಿ ಸಭೆಯನ್ನು ಕರೆದು, ಸದರ ಸಭೆಯಲ್ಲಿ (Arts and Science Faculties Joint Deans Meeting) ತೆಗೆದುಕೊಳ್ಳುವ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ ಎಂದು ಎಲ್ಲ ವಿವರಗಳೊಂದಿಗೆ ಡಾ.ಬಿ.ಬಸವನಗೌಡ ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ದಿನಾಂಕ: 05.08.2022 ರ ಪ್ರಸ್ತಾವನೆಯ ಅಂಶಗಳನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಆಡಳಿತ ಮಂಡಳಿಯು ಈ ಕೆಳಗಿನಂತೆ ನಿರ್ಣಯ ಕೈಗೊಂಡಿರುತ್ತದೆ.

**ಆಡಳಿತ ಮಂಡಳಿ ನಿರ್ಣಯ ಸಂಖ್ಯೆ.12, ದಿನಾಂಕ: 02.09.2022**

**"ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಖ್ಯಾಶಾಸ್ತ್ರ ವಿಭಾಗ ಮತ್ತು ಗಣಿತ ವಿಭಾಗಗಳನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ವಿಷಯವನ್ನು ಆಡಳಿತ ಮಂಡಳಿಯು ತಾತ್ವಿಕವಾಗಿ ಒಪ್ಪಿತು. ಈ ವಿಷಯವನ್ನು ಕಲಾ ಹಾಗೂ ವಿಜ್ಞಾನ ನಿಖಾಯಗಳ ಡೀನರ ಜಂಟಿ ಸಭೆಯನ್ನು ಕರೆದು ನಿರ್ಣಯಿಸಲು ಒಪ್ಪಿತು. ಮುಂದುವರೆದು, ಸದರಿ ವಿಷಯವನ್ನು ವಿದ್ಯಾವಿಷಯಕ್ ಪರಿಷತ್ & ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಕ್ರಮ ಜರುಗಿಸಲು ಸೂಚಿಸಿತು."**

ಮೇಲ್ಕಾಣಿಸಿದ ಸದರ ಆಡಳಿತ ಮಂಡಳಿಯ ನಿರ್ಣಯದ ಮೇರೆಗೆ, ದಿನಾಂಕ: 22.09.2022 ರಂದು ಮದ್ಯಾಹ್ನ 3.00 ಘಂಟೆಗೆ ಸದರ ವಿಷಯದ ಕುರಿತು ಚರ್ಚಿಸಲು ಕಲಾ ಮತ್ತು ವಿಜ್ಞಾನ ನಿಖಾಯಗಳ ಡೀನರ ಜಂಟಿ ಸಮಿತಿ ಸಭೆಯನ್ನು ಉಪಕುಲಸಚಿವರು, ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ, ಕವಿವಿ, ಧಾರವಾಡ ಇವರ ಕೊಠಡಿಯಲ್ಲಿ ಕರೆಯಲಾಗಿತ್ತು ಸದರ ಜಂಟಿ ಸಮಿತಿ ಸಭೆಯು ಈ ಕೆಳಗಿನಂತೆ ನಿರ್ಣಯಿಸಿ ನಡಾವಳಿಗಳನ್ನು ಸಲ್ಲಿಸಿರುತ್ತದೆ.

Resolutions:

1. It is resolved to transfer the Mathematics and Statistics Departments along with posts which includes vacant posts and the Teaching staff working on permanent basis to Karnatak Science College from Karnatak Arts College with immediate effect.
2. It is resolved to maitain the seniority and other privileges of such transferred teaching staff in Karnatak Science College.
3. It is resolved to prepare the statute for such purpose if necessary. However, shifting to Karnatak Science College shall be taken with immediate effect.
4. The workload for applied statistics in Karnatak Arts College shall be managed by Teaching Assistant / Guest Faculty / deploying one Teacher on deputation from Statistics Department to work under Karnatak Arts College.

ಈ ಹಿನ್ನೆಲೆಯಲ್ಲಿ ದಿನಾಂಕ: 02.09.2022 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ಠರಾವು ಸಂಖ್ಯೆ.12 ರಲ್ಲಿ ನಿರ್ಣಯಿಸಿದಂತೆ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ದಿನಾಂಕ: 22.09.2022 ರಂದು ಜರುಗಿದ ಕಲಾ ಮತ್ತು ವಿಜ್ಞಾನ ನಿಖಾಯದ ಡೀನರುಗಳ ಜಂಟಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ಮೇಲ್ಕಾಣಿಸಿದ ನಿರ್ಣಯವನ್ನು ವಿದ್ಯಾವಿಷಯಕ್ ಪರಿಷತ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಸಭೆಯು ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿರುತ್ತದೆ.



ಕುಲಸಚಿವರು ಕುಲಪತಿಗಳು

ವಿದ್ಯಾವಿಷಯಕ್ ಪರಿಷತ್ ಸಭೆಯ ಕಲಂ ಸಂಖ್ಯೆ. 12 ದಿನಾಂಕ 07.12.2022

"ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು ಸಿಂಡಿಕೇಟ ಸದಸ್ಯರು/ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ದಿನಾಂಕ: 05.08.2022 ರ ಪ್ರಸ್ತಾವನೆಯ ಮೇಲೆ ಆಡಳಿತ ಮಂಡಳಿ ಸಭೆಯು ತೆಗೆದುಕೊಂಡ ನಿರ್ಣಯ ಮತ್ತು ಈ ಕುರಿತು ಕಲಾ ಮತ್ತು ವಿಜ್ಞಾನ ನಿಖಾಯಗಳ ಜಂಟಿ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ವಿದ್ಯಾವಿಷಯಕ್ ಪರಿಷತ್ ಸಭೆಯು ಒಪ್ಪಿ ಅನುಮೋದಿಸಿತು."

ದಿನಾಂಕ: 07.12.2022 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ. 12 ರಲ್ಲಿ ನಿರ್ಣಯಿಸಿದಂತೆ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ದಿನಾಂಕ: 22.09.2022 ರಂದು ಜರುಗಿದ ಕಲಾ ಮತ್ತು ವಿಜ್ಞಾನ ನಿಖಾಯದ ಡೀನರುಗಳ ಜಂಟಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ಮೇಲ್ಕಾಣಿಸಿದ ನಿರ್ಣಯವನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಸಭೆಯು ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿರುತ್ತದೆ.

ಆಡಳಿತ ಮಂಡಳಿ ಸಭೆಯ ನಿರ್ಣಯ ಸಂಖ್ಯೆ. 10, ದಿನಾಂಕ: 10.12.2022

**"ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು ಸಿಂಡಿಕೇಟ ಸದಸ್ಯರು/ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ ವರದಿಯನ್ವಯ ದಿನಾಂಕ: 07-12-2022 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯವನ್ನು ಆಡಳಿತ ಮಂಡಳಿ ಸಭೆಯು ಕೂಲಂಕೂಷವಾಗಿ ಪರಿಶೀಲಿಸಿ ಅನುಮೋದಿಸಿತು".**

ಸದರ ವಿಷಯವಾಗಿ ಇಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಸದರಿ ದಿನಾಂಕ 22.09.2022 ರ ಜಂಟಿ ಡೀನರುಗಳ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಷಯಗಳನ್ನು ಬೋಧಿಸುವ ಶಿಕ್ಷಕರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಜೇಷ್ಠತಾ ಯಾದಿಯಲ್ಲಿ ಸೇರಿಸಿದ್ದಾದಲ್ಲಿ ಆ ಮಹಾವಿದ್ಯಾಲಯದ ಶಿಕ್ಷಕರಿಗಿಂತ ಮೊದಲು ಅಥವಾ ನಂತರ ಜೇಷ್ಠತೆಯಲ್ಲಿ ಬರುವ ಸಾಧ್ಯತೆಯಿರುತ್ತದೆ ಒಂದು ವೇಳೆ ಕರ್ನಾಟಕ ಕಲಾ ಮಹಾವಿದ್ಯಾಲಯದ ಶಿಕ್ಷಕರು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಶಿಕ್ಷಕರಿಗಿಂತ ಜೇಷ್ಠತೆಯಲ್ಲಿ ಮೇಲೆ ಬಂದರೆ ಅಲ್ಲಿನ ಶಿಕ್ಷಕರು ಆಕ್ಷೇಪಣೆ ಎತ್ತುವ ಸಾಧ್ಯತೆಯು ಇರುತ್ತದೆ. ಕಾರಣ ಕರ್ನಾಟಕ ಕಲಾ ಮಹಾವಿದ್ಯಾಲಯ ಶಿಕ್ಷಕರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಶಿಕ್ಷಕರ ಜೇಷ್ಠತೆಯ ಯಾದಿಯಲ್ಲಿ ಸೇರ್ಪಡೆಗೊಳಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ. ಈ ಕುರಿತು ಕರ್ನಾಟಕ ಕಲಾ ಮಹಾವಿದ್ಯಾಲಯದ ಶಿಕ್ಷಕರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಶಿಕ್ಷಕರ ಜೇಷ್ಠತೆಯಲ್ಲಿ ಸೇರ್ಪಡೆಗೊಳಿಸುವ ಪೂರ್ವದಲ್ಲಿನ ಹಾಗೂ ಸೇರ್ಪಡೆಗೊಳಿಸಿದ ನಂತರದಲ್ಲಿನ ಜೇಷ್ಠತಾ ಪಟ್ಟಿಯನ್ನು ಕಡತದಲ್ಲಿ ಇರಿಸಲಾಗಿದೆ.

ಮುಂದುವರೆದು, ಈ ವಿಷಯವಾಗಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಷಯಗಳಿಗೆ ಮಂಜೂರಾದ ಬೋಧಕ ಹುದ್ದೆಗಳಿಗೆ ಮಾನ್ಯ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆಗೊಂಡ ಅನುಶಾಸನ ಇರುತ್ತದೆ. ಕಾರಣ ಈಗ ಸದರ ಹುದ್ದೆಗಳನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸಬೇಕಾದಲ್ಲಿ ಪುನ: ಅನುಶಾಸನದ ಮೂಲಕ ಮಾನ್ಯ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆ ಪಡೆದು ಕ್ರಮ ವಹಿಸಬೇಕಾಗುತ್ತದೆ. ಒಂದು ವೇಳೆ ಸಮಿತಿಯ ಶಿಫಾರಸ್ಸಿನಂತೆ, ಮೊದಲೇ ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ವರ್ಗಾಯಿಸಿ



ಕುಲಸಚಿವರು ಕುಲಪತಿಗಳು

ನಂತರ ಅನುಶಾಸನ ರಚಿಸಿ, ಸರ್ಕಾರಕ್ಕೆ ಕಳುಹಿಸಿದರೆ, ಪೂರ್ವಾನುಮತಿ ಇಲ್ಲದೇ ಕ್ರಮ ವಹಿಸಿದಂತಾಗುತ್ತದೆ. ಅಲ್ಲದೇ ಆಡಿಟ್ ಆಕ್ಷೇಪಣೆ ಆಗುವ ಸಂಭವ ಸಹ ಇರುತ್ತದೆ.

ಆದ್ದರಿಂದ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಡಾ.ಬಿ.ಬಸವನಗೌಡ, ಪ್ರಾಧ್ಯಾಪಕರು ಸಿಂಡಿಕೇಟ ಸದಸ್ಯರು/ ಡೀನರು ವಿಜ್ಞಾನ ನಿಖಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ದಿನಾಂಕ: 05.08.2022 ರ ಪ್ರಸ್ತಾವನೆಯ ಮೇಲೆ ಆಡಳಿತ ಮಂಡಳಿ ಸಭೆಯು ತೆಗೆದುಕೊಂಡ ನಿರ್ಣಯ ಮತ್ತು ಈ ಕುರಿತು ಕಲಾ ಮತ್ತು ವಿಜ್ಞಾನ ನಿಖಾಯಗಳ ಜಂಟಿ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯ, ವಿದ್ಯಾವಿಷಯಕ್ ಪರಿಷತ್ ಸಭೆಯು ಕೈಗೊಂಡ ನಿರ್ಣಯ ಮತ್ತು ದಿನಾಂಕ 10.12.2022 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ನಿರ್ಣಯದ ಕುರಿತು ಹಾಗೂ ಮೇಲೆ ತಿಳಿಸಿದ ಎಲ್ಲ ಅಂಶಗಳನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

**ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳನ್ನು ಹಾಗೂ ಶಿಕ್ಷಕರುಗಳನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ದಿನಾಂಕ. 02.09.2022 ರಂದು ಜರುಗಿದ ಆಡಳಿತ ಮಂಡಳಿಯ ನಿರ್ಣಯ ಸಂಖ್ಯೆ: 12 ರ ಪ್ರಕಾರ ದಿನಾಂಕ. 22.09.2022 ರಂದು ಜರುಗಿದ ಕಲಾ ಮತ್ತು ವಿಜ್ಞಾನ ನಿಖಾಯಗಳ ಜಂಟಿ ಸಮಿತಿಯ ಸಭೆಯಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಸಂಖ್ಯಾಶಾಸ್ತ್ರ ಮತ್ತು ಗಣಿತ ವಿಷಯಗಳ ಶಿಕ್ಷಕರನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ವರ್ಗಾವಣೆ ಮಾಡಲು ಕೈಗೊಂಡ ನಿರ್ಣಯವನ್ನು ದಿನಾಂಕ. 07.12.2022 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯ ನಿರ್ಣಯ ಸಂಖ್ಯೆ: 12ರಲ್ಲಿ ಒಪ್ಪಲಾಗಿದ್ದು, ಆಡಳಿತಾತ್ಮಕ ದೃಷ್ಟಿಯಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗಗಳ ಶಿಕ್ಷಕರುಗಳನ್ನು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ತಕ್ಷಣದಿಂದಲೇ ಜಾರಿಗೆ ಬರುವಂತೆ ನಿಯೋಜನೆ ಮೇರೆಗೆ ವರ್ಗಾಯಿಸಲು ಆಡಳಿತ ಮಂಡಳಿಯು ನಿರ್ಣಯಿಸಿತು.**



ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ-15: ವಿಷಯ-: ಡಾ.(ಶ್ರೀಮತಿ).ಎನ್.ಎಮ್.ಪಾಟೀಲ, ಸಹ ಪ್ರಾಧ್ಯಾಪಕರು (ಸ್ವಯಂ ನಿವೃತ್ತಿ), ಕವಿವಿ ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರ ಸೇವೆಯನ್ನು ತಾತ್ಕಾಲಿಕವಾಗಿ ಭೂಗೋಳಶಾಸ್ತ್ರ ವಿಭಾಗದ ಹುದ್ದೆಯಲ್ಲಿ ಕ್ರಮಬದ್ಧಗೊಳಿಸಿದ್ದರ ಬಗ್ಗೆ, ಸೇವಾವಧಿಯಲ್ಲಿ ಪಿ.ಎಚ್.ಡಿ. ಪದವಿಯನ್ನು ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಹಾಗೂ ದಿನಾಂಕ: 18.11.2008 ರಂದು ಮಂಜೂರ ಮಾಡಲಾದ ಸಹ ಪ್ರಾಧ್ಯಾಪಕ ಪದೋನ್ನತಿಯ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಪರಿಶೀಲಿಸುವ ಕುರಿತು.

ಟಿಪ್ಪಣಿ:

ಡಾ.(ಶ್ರೀಮತಿ).ಎನ್.ಎಮ್.ಪಾಟೀಲ, ಸಹ ಪ್ರಾಧ್ಯಾಪಕರು (ಸ್ವಯಂ ನಿವೃತ್ತಿ), ವಿಶ್ವವಿದ್ಯಾಲಯದ ಲಲಿತ ಕಲಾ ಮತ್ತು ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರು ದಿನಾಂಕ 30.09.2021 ರಂದು ವಿಶ್ವವಿದ್ಯಾಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಿರುತ್ತಾರೆ. ಸದರಿಯವರ ನಿವೃತ್ತಿ ತರುವಾಯ ಅವರ ನಿವೃತ್ತಿ ವೇತನ ಹಾಗೂ ನಿವೃತ್ತಿ ಉಪದಾನ (ಡಿ.ಸಿ.ಆರ್.ಜಿ) ಮೊತ್ತವನ್ನು ಮಂಜೂರು ಮಾಡುವುದು ವಾಡಿಕೆ. ಈ ಪ್ರಯುಕ್ತ ವರ್ಷವಾರು ಮಾನ್ಯ ಸರ್ಕಾರಿ ಲೆಕ್ಕ ಪರಿಶೋಧಕರು ಸಲ್ಲಿಸಿದ ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಶೀಲಿಸಲಾಗಿ, ಶ್ರೀಮತಿಯವರ ಸೇವೆಯನ್ನು ತಾತ್ಕಾಲಿಕವಾಗಿ ಭೂಗೋಳಶಾಸ್ತ್ರ ವಿಭಾಗದ ಹುದ್ದೆಯಲ್ಲಿ ಕ್ರಮಬದ್ಧಗೊಳಿಸಿದ್ದರ ಬಗ್ಗೆ, ಸೇವಾವಧಿಯಲ್ಲಿ ಪಿ.ಎಚ್.ಡಿ. ಪದವಿಯನ್ನು ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಹಾಗೂ ದಿನಾಂಕ: 18.11.2008 ರಂದು ಮಂಜೂರ ಮಾಡಲಾದ ಸಹ ಪ್ರಾಧ್ಯಾಪಕ ಪದೋನ್ನತಿಯ ಕುರಿತಂತೆ **2011-12, 2012-13, 2013-14 ನೇ ಸಾಲಿನ ಸಂಗೀತ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ.11 ರಲ್ಲಿ ಹಾಗೂ ಪಿ.ಎಚ್.ಡಿ ಪದವಿ ಹೊಂದಿದ್ದಕ್ಕಾಗಿ ಮಂಜೂರ ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಕುರಿತಂತೆ 2014-15, 2015-16, 2016-17 ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ.04, 06 ರಲ್ಲಿ** ಕ್ರಮವಾಗಿ ಈ ಕೆಳಕಂಡಂತೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು ಇರುತ್ತದೆ.

**2011-12, 2012-13, 2013-14 ನೇ ಸಾಲಿನ ಸಂಗೀತ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ.11 ಹಾಗೂ 2014-15, 2015-16, 2016-17 ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ.04, 06**

**"11) ಶ್ರೀಮತಿ. ಎನ್.ಎಮ್.ಪಾಟೀಲ ಉಪನ್ಯಾಸಕರು ಇವರು NET/SLET/SET ಪಾಸಾಗುವುದು ಕಡ್ಡಾಯವಾಗಿದ್ದುದರಿಂದ ಕೇವಲ ಪಿ.ಎಚ್.ಡಿ.ಮಾಡಲಾಗಿದ್ದು ಎರಡು ಮುಂಗಡ ಬಡ್ತಿ ನೀಡಿರುವ ಕುರಿತು.**

ಶ್ರೀಮತಿ.ಎನ್.ಎಮ್.ಪಾಟೀಲ ಇವರನ್ನು ಸರ್ವೋಚ್ಛ ನ್ಯಾಯಾಲಯದ ಆದೇಶ ನಂ. W.P.No. 16334 To 339/5 ರ ಪ್ರಕಾರ ದಿನಾಂಕ: 05.07.1994 ರಿಂದ ತಾತ್ಕಾಲಿಕ ಉಪನ್ಯಾಸಕಿ ಎಂದು ಮುಂದುವರೆಸಲಾಗಿರುತ್ತದೆ. ದಿನಾಂಕ: 06.07.1994 ರಂದು ಹಾಜರಾಗಿರುತ್ತಾರೆ.

ಶ್ರೀಮತಿ.ಹೇಮಾವತಿ ರಡ್ಡಿ ಉಪನ್ಯಾಸಕಿ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ ಅವರಿಗೆ ರೀಡರ್ ಎಂದು ಸ್ನಾತಕೋತ್ತರ ಭೂಗೋಳ ಶಾಸ್ತ್ರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ ಕಾರಣ ಅವರ ಪದೋನ್ನತಿಯಿಂದ ತೆರವಾದ ಉಪನ್ಯಾಸಕರ ಹುದ್ದೆಯಲ್ಲಿ ಶ್ರೀಮತಿ.ಎಸ.ಎಂ.ಪಾಟೀಲ ಇವರನ್ನು ದಿನಾಂಕ: 18.11.1996 ರಿಂದ ತಾತ್ಕಾಲಿಕ ಕ್ರಮಬದ್ಧಗೊಳಿಸಲಾಗಿದೆ.

ಸಂಗೀತ ಮಹಾವಿದ್ಯಾಲಯದಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಸರಕಾರದಿಂದ ಅನುಮತಿ ಪಡೆದು ಸಂಖ್ಯಾತಿರಿಕ್ತ ಹುದ್ದೆಯಲ್ಲಿ ಮುಂದುವರೆಸದೇ ಬೇರೆ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಅದೂ ಕೂಡಾ ಸಂಗೀತಕ್ಕೆ ಸಂಬಂಧಿಸಿದ ಭೂಗೋಳಶಾಸ್ತ್ರ ವಿಭಾಗದ ಹುದ್ದೆಯಲ್ಲಿ ಸದರಿಯವರನ್ನು ಕ್ರಮ ಬದ್ಧಗೊಳಿಸಲಾಗಿರುವುದು ನಿಯಮಾನುಸಾರವಿರುವುದಿಲ್ಲ. ಈ ರೀತಿ ಕ್ರಮಬದ್ಧಗೊಳಿಸಲಾದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗದ ಉಪನ್ಯಾಸಕ ಹುದ್ದೆಯು ಈ ವರೆಗೆ ಖಾಲಿ ಇದೆಯೇ ಎಂಬ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಒಂದು ವೇಳೆ ಸದರಿ ಹುದ್ದೆಯು ಖಾಲಿ ಇಲ್ಲವೆಂದಾದಲ್ಲಿ ಶ್ರೀಮತಿ.ಎನ್.ಎಮ್.ಪಾಟೀಲ ಅವರ ಹುದ್ದೆಯನ್ನು ಎಲ್ಲಿ ಕ್ರಮಬದ್ಧಗೊಳಿಸಲಾಗಿದೆ ಎಂಬ ಬಗ್ಗೆ ಕೂಡ ಮಾಹಿತಿ ನೀಡಲಾಗಿಲ್ಲ. ಇದಲ್ಲದೇ ಅವರು ಪಿ.ಎಚ್.ಡಿ.ಪದವಿಯನ್ನು ಮಾತ್ರ ಹೊಂದಿದ್ದು ಉಪನ್ಯಾಸಕರ ಹುದ್ದೆಗೆ ಕಡ್ಡಾಯವಿರುವ ನೆಟ್/ಸ್ಲೆಟ್/ಸೆಟ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದಿದ್ದಾಗ್ಯೂ ಅವರಿಗೆ ನಿಯಮಗಳ ಅನುಪಸ್ಥಿತಿಯಲ್ಲಿ ಆಯ್ಕೆ ವೇತನ ಶ್ರೇಣಿಯಲ್ಲಿ 2 ಮುಂಗಡ ಬಡ್ತಿಗಳನ್ನು ನೀಡಲಾಗಿರುವುದು. ಆಕ್ಷೇಪಾರ್ಹ,



ಕುಲಸಚಿವರು

ಕುಲಪತಿಗಳು

2006 ರ ಯುಜಿಸಿ ವೇತನ ಶ್ರೇಣಿಗಳು ದಿನಾಂಕ: 01.01.2006 ರಿಂದ ಜಾರಿಗೆ ಬಂದಿದ್ದರೂ ಉಳಿದ ಎಲ್ಲ ಭತ್ಯೆಗಳು, ಸೌಲಭ್ಯಗಳು ಆದೇಶದ ದಿನಾಂಕ: 24.12.2009 ರಿಂದ ಜಾರಿಗೊಳಿಸಿದ್ದು, ಅವರಿಗೆ 18.11.2008 ರಂದು ಸಹಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಿ ಆರ್ಥಿಕ ಸೌಲಭ್ಯ ನೀಡಿರುವುದು ಸರ್ಕಾರದ ಆದೇಶಕ್ಕೆ ವ್ಯತಿರಿಕ್ತವಾಗಿದೆ.

ಈ ಕುರಿತು ನೀಡಲಾದ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂ. 1 ದಿನಾಂಕ: 22.08.2012 ಕ್ಕೆ ಯಾವುದೇ ಅನುಸರಣೆ ನೀಡಿರುವುದಿಲ್ಲ. ಕಾರಣ ಮೇಲೆ ವಿವರಿಸಿದ ಎಲ್ಲ ಆಕ್ಷೇಪಣೆಗಳಿಗೆ ಸೂಕ್ತ ವಿವರ ಒದಗಿಸುವುದು ಹಾಗೂ ಶ್ರೀಮತಿ.ಎನ್.ಎಮ್.ಪಾಟೀಲ ಉಪನ್ಯಾಸಕರು ಇವರಿಗೆ ಆಯ್ಕೆ ವೇತನ ಶ್ರೇಣಿಯಲ್ಲಿ 2 ಮುಂಗಡ ಬಡ್ತಿಗಳನ್ನು ನೀಡಲಾಗಿದ್ದನ್ನು ಹಿಂಪಡೆದು ವೇತನ ಮರುನಿಗಧಿ ಮಾಡಿ ಅನುಬಂಧ "6" ರಲ್ಲಿ ವಿವರಿಸಿದಂತೆ ಹೆಚ್ಚುವರಿ ಪಾವತಿಸಲಾದ ವೇತನ ಭತ್ಯೆ '.6,62,739.00 ಗಳನ್ನು ವಸೂಲಿಸಿ ಅನುಸರಣೆ ನೀಡಲು ತಿಳಿಸಲಾಗಿದೆ."

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, ಡಾ.(ಶ್ರೀಮತಿ).ಎನ್.ಎಮ್.ಪಾಟೀಲ ಇವರ ಸೇವೆಯನ್ನು ತಾತ್ಕಾಲಿಕವಾಗಿ ಭೂಗೋಳಶಾಸ್ತ್ರ ವಿಭಾಗದ ಹುದ್ದೆಯಲ್ಲಿ ಕ್ರಮಬದ್ಧಗೊಳಿಸಿದ್ದರ ಬಗ್ಗೆ, ಸೇವಾವಧಿಯಲ್ಲಿ ಪಿ.ಎಚ್.ಡಿ. ಪದವಿಯನ್ನು ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಹಾಗೂ ದಿನಾಂಕ: 18.11.2008 ರಂದು ಮಂಜೂರ ಮಾಡಲಾದ ಸಹ ಪ್ರಾಧ್ಯಾಪಕ ಪದೋನ್ನತಿಯ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸೂಕ್ತ ಅನುಸರಣೆಯನ್ನು ಸಲ್ಲಿಸುವುದು ಆಡಳಿತಾತ್ಮಕ ದೃಷ್ಟಿಯಿಂದ ಅವಶ್ಯಕವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಡಾ.(ಶ್ರೀಮತಿ).ಎನ್.ಎಮ್.ಪಾಟೀಲ, ಇವರ ಸೇವಾ ವಹಿ ಹಾಗೂ ವೈಯಕ್ತಿಕ ಕಡತವನ್ನು ಪರಿಶೀಲಿಸಲಾಗಿ, ***1996 ರ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳಡಿಯಲ್ಲಿ*** "ಉಪನ್ಯಾಸಕ (ಹಿರಿಯ ಶ್ರೇಣಿ)" ಹಾಗೂ **"ಉಪನ್ಯಾಸಕ (ಆಯ್ಕೆ ಶ್ರೇಣಿ)"** ಪದೋನ್ನತಿಗೆ ನಿಗದಿಪಡಿಸಿದ ಒಟ್ಟು ಸೇವಾವಧಿ 06 (ಆರು) + 05 (ಐದು) ಇದ್ದು, ಅದರಂತೆ ಸದರಿಯವರು ಉಪನ್ಯಾಸಕರು ಎಂದು 6 ವರ್ಷಗಳ ಸೇವೆ ಪೂರ್ಣಗೊಳಿಸಿದ ತರುವಾಯ ದಿನಾಂಕ.18.11.2000 ರಿಂದ ಅನ್ವಯವಾಗುವಂತೆ **ಉಪನ್ಯಾಸಕರು (ಹಿರಿಯ ಶ್ರೇಣಿ)** ಪದೋನ್ನತಿಯನ್ನು ಮಂಜೂರು ಮಾಡಿರುವದು ಹಾಗೂ "ಉಪನ್ಯಾಸಕರು (ಹಿರಿಯ ಶ್ರೇಣಿ)" ಎಂದು ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ತರುವಾಯ ದಿನಾಂಕ.18.11.2005 ರಿಂದ ಅನ್ವಯವಾಗುವಂತೆ **"ಉಪನ್ಯಾಸಕರು (ಆಯ್ಕೆ ಶ್ರೇಣಿ)"** ಪದೋನ್ನತಿಯನ್ನು ಮಂಜೂರು ಮಾಡಿದ್ದು, ಈ ಪದೋನ್ನತಿಗಳಿಗೆ ಅವರು ಸೇವಾವಧಿಯಲ್ಲಿ ಹೊಂದಿದ ಪಿಎಚ್.ಡಿ ಪದವಿಯನ್ನು ಅವಶ್ಯಕ ವಿದ್ಯಾರ್ಹತೆಯನ್ನಾಗಿ ಪರಿಗಣಿಸದಿರುವುದರಿಂದ ಹಾಗೂ ಸದರಿಯವರು ನ್ಯಾಯಾಲಯದ ಆದೇಶದ ಪ್ರಕಾರ ಸೇವಾ ಸಕ್ರಮಾತಿಗೊಂಡಿರುವುದರಿಂದ ಅವರ ನೇಮಕಾತಿಗೂ ಸಹ ಪಿ.ಎಚ್.ಡಿ ಪದವಿಯನ್ನು ಕನಿಷ್ಠ ಅವಶ್ಯಕ ವಿದ್ಯಾರ್ಹತೆಯನ್ನಾಗಿ ಪರಿಗಣಿಸದಿರುವುದರಿಂದ 1996 ರ ಯುಜಿಸಿ ವೇತನ ಶ್ರೇಣಿ ಕುರಿತ ವಿಶ್ವವಿದ್ಯಾಲಯದ ದಿನಾಂಕ: 02.11.2001 ರ ಅನುಶಾಸನದಲ್ಲಿ ಕಲ್ಪಿಸಿದ ಅವಕಾಶದನ್ವಯ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳು ಕ್ರಮಬದ್ಧವಾಗಿರುವದು ಗಮನಕ್ಕೆ ಬಂದಿರುತ್ತದೆ.

ಮುಂದುವರೆದು, ಬೋಧಕ ಸಿಬ್ಬಂದಿಗಳಿಗೆ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯು ಸರ್ಕಾರಿ ಆದೇಶ **ಸಂಖ್ಯೆ:ಇಡಿ 37 ಯುಎನ್‌ಇ 2009 ದಿನಾಂಕ. 24.12.2009** ರ ಮೂಲಕ ಜಾರಿಯಾಗಿದ್ದು, ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿ ಜಾರಿ ಮಾಡುವ ಸಂದರ್ಭದಲ್ಲಿ ಬೋಧಕ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯನ್ನು ಮರು ಪದನಾಮಗೊಳಿಸಿ, ಆ ಹುದ್ದೆಯಲ್ಲಿ ಅವರು ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ ದಿನಾಂಕ.01.01.2006 ರಿಂದ ಅನ್ವಯವಾಗುವಂತೆ ಸದರ ವೇತನ ಶ್ರೇಣಿಯಲ್ಲಿ ಮೂಲ ವೇತನವನ್ನು ನಿಗದಿಪಡಿಸಲು ಅವಕಾಶವನ್ನು ಸದರಿ **ಸರ್ಕಾರಿ ಆದೇಶದ ಕಂಡಿಕೆ 12 ರ ಅಪೆಂಡಿಕ್ಸ್-111 (1.10)** ರಲ್ಲಿ ಕಲ್ಪಿಸಿದ್ದು, ಅದರಂತೆ **ಡಾ.(ಶ್ರೀಮತಿ).ಎನ್.ಎಮ್.ಪಾಟೀಲ** ಇವರು ಕಾರ್ಯನಿರ್ವಹಿಸುತ್ತಿದ್ದ "ಉಪನ್ಯಾಸಕರು (ಆಯ್ಕೆ ಶ್ರೇಣಿ)" ಹಾಗೂ **"ಉಪನ್ಯಾಸಕ (ಆಯ್ಕೆ ಶ್ರೇಣಿ)" ಹುದ್ದೆಯಲ್ಲಿ 03 (ಮೂರು) ವರ್ಷಗಳ ಸೇವೆಯನ್ನು** ಪೂರ್ಣಗೊಳಿಸಿದ್ದ ಪ್ರಯುಕ್ತ ಆ ಹುದ್ದೆಯನ್ನು ಈ ಕೆಳಗಿನಂತೆ ಮರು ಪದನಾಮಗೊಳಿಸಿ ಸದರಿ ಹುದ್ದೆಯಲ್ಲಿ ಅವರು ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆಯೆ ಹೊರತು ಸದರಿಯವರಿಗೆ **2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನುಸಾರ ಪದೋನ್ನತಿ/ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಿರುವದಿಲ್ಲ** ಎಂಬುದನ್ನು ಗಮನಿಸಲಾಗಿದ್ದು ಇರುತ್ತದೆ.

| ಅ.ಸಂ. | ಪದನಾಮ | 1996 ರ ಯುಜಿಸಿ ವೇತನ ಶ್ರೇಣಿಯ ವೇತನದಲ್ಲಿ ಪಡೆಯುತ್ತಿದ್ದ ಮೂಲ ವೇತನ/ದಿನಾಂಕ. | 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನುಸಾರ ಮರು ಪದನಾಮಗೊಳಿಸಿ, 1996 ರ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ ದಿನಾಂಕ.01.01.2006 ರಿಂದ ಅನ್ವಯವಾಗುವಂತೆ ನಿಗದಿಪಡಿಸಲಾದ ಮೂಲ ವೇತನ/ದಿನಾಂಕ. |
|---|---|---|---|
| 01. | ಉಪನ್ಯಾಸಕರು (ಅಯ್ಕೆ ಶ್ರೇಣಿ) | ರೂ. 12,840/- 01.01.2006 | ಸಹಾಯಕ ಪ್ರಾಧ್ಯಾಪಕರು ರೂ.23,890+8000/- 01.01.2006 |
| 02. | ಉಪನ್ಯಾಸಕರು (ಅಯ್ಕೆ ಶ್ರೇಣಿ) ರಲ್ಲಿ 3 ವರ್ಷ ಸೇವೆ ಸಲ್ಲಿಸಿದ ತರುವಾಯ | ರೂ. 14,100/- 18.11.2008 | ಸಹ ಪ್ರಾಧ್ಯಾಪಕರು ರೂ.37400+9000/- 18.11.2008 |



ಕುಲಸಚಿವರು ಕುಲಪತಿಗಳು

ಹಾಗೆಯೆ, ಡಾ.(ಶ್ರೀಮತಿ).ಹೇಮಾವತಿ ರೆಡ್ಡಿ, ಭೂಗೋಳಶಾಸ್ತ್ರ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಇವರು ಸ್ನಾತಕೋತ್ತರ ಭೂಗೋಳಶಾಸ್ತ್ರ ವಿಭಾಗದಲ್ಲಿ ಪ್ರವಾಚಕರೆಂದು ನೇಮಕಗೊಂಡ ಪ್ರಯುಕ್ತ ತೆರವಾದ ಹುದ್ದೆಯಲ್ಲಿ **ಡಾ.(ಶ್ರೀಮತಿ).ಎನ್.ಎಮ್.ಪಾಟೀಲ** ಇವರ ಸೇವೆಯನ್ನು ದಿನಾಂಕ.18.11.1996 ರಿಂದ ಅನ್ವಯವಾಗುವಂತೆ ತಾತ್ಕಾಲಿಕವಾಗಿ ಕ್ರಮಬದ್ಧಗೊಳಿದ್ದನ್ನು ಹಿಂಪಡೆದು, ಶ್ರೀ.ಎ.ಯು.ಪಾಟೀಲ್, ಉಪನ್ಯಾಸಕರು, ಕಕಮ, ಧಾರವಾಡ ಇವರು ಸ್ನಾತಕೋತ್ತರ ವಿಭಾಗದಲ್ಲಿ ದಿನಾಂಕ್ಕ.31.03.1981 ರಂದು ಪ್ರವಾಚಕರೆಂದು ನೇಮಕಗೊಂಡ ಪ್ರಯುಕ್ತ ಸದರಿ ನೇಮಕಾತಿಯಿಂದ ಸಂಗೀತ ಮಹಾವಿದ್ಯಾಲಯದಲ್ಲಿ ತೆರವಾಗಿದ್ದ ಸಂಖ್ಯಾತಿರಿಕ್ತವಾಗಿ ಸ್ಪಷ್ಟ ಖಾಲಿ ಇರುವ ಹುದ್ದೆಯಲ್ಲಿ **ಡಾ.(ಶ್ರೀಮತಿ).ಎನ್.ಎಮ್.ಪಾಟೀಲ** ಇವರ ಸೇವೆಯನ್ನು **ದಿನಾಂಕ. 06.07.1994** ರಿಂದ ಅನ್ವಯವಾಗುವಂತೆ ಕ್ರಮಬದ್ಧಗೊಳಿಸಿ ಈ ಕಚೇರಿ ಆದೇಶ ಸಂಖ್ಯೆ. 5311 ದಿನಾಂಕ: 27.12.2016 ರ ಮೂಲಕ ಕಚೇರಿ ಆದೇಶವನ್ನು ಜಾರಿ ಮಾಡಲಾಗಿರುತ್ತದೆ.

ಮುಂದುವರೆದು, ಮಾನ್ಯ ಅಪರ ನಿರ್ದೇಶಕರು, ಕ.ರಾ.ಲೆ.ಪ & ಲೆ.ಪ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ, ಇವರು ತಮ್ಮ ಪತ್ರ ದಿನಾಂಕ.27.11.2018 ರಲ್ಲಿ, ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರು ದಿನಾಂಕ.26.10.2018 ರ ತಮ್ಮ ಪತ್ರದಲ್ಲಿ ಈ ಕೆಳಕಾಣಿಸಿದಂತೆ ನಿರ್ದೇಶಿಸಿರುವುದಾಗಿ ತಿಳಿಸಿ, ಅದರಂತೆ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಬಾಕಿ ಇರುವ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸುವಂತೆ ತಿಳಿಸಿರುತ್ತಾರೆ.

> **"ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಈ ಕಚೇರಿಗೆ ಸಲ್ಲಿಸಿ ಆಕ್ಷೇಪಿತ ಕಂಡಿಕೆಗಳ ತೀರುವಳಿ ಮಾಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ. ಬಾಕಿ ಇರುವ ಎಲ್ಲಾ ವರ್ಷಗಳ ವರದಿಗಳಲ್ಲಿ ಕಾಣಿಸಿದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥ ಪಡಿಸದಿರುವ ವಿಷಯವನ್ನು ಕೇಂದ್ರ ಕಚೇರಿಯಲ್ಲಿ ಜರುಗಿಸಿದ್ದ ದಿನಾಂಕ.19.11.2018 ರ ಸಭೆಯಲ್ಲಿ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದ್ದಾರೆ. ಕಾರಣ ಸದರಿ ನಿರ್ದೇಶನದನುಸಾರ ಲೆಕ್ಕ ಪರಿಶೋಧನಾ ಆಕ್ಷೇಪಿತ ಕಂಡಿಕೆಗಳಿಗೆ ದ್ವಿಪ್ರತಿಗಳಲ್ಲಿ ಅನುಸರಣಾ ವರದಿ ಸಲ್ಲಿಸಲು ಕೋರಿದೆ."**

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಮೇಲ್ಕಂಡ ಪ್ರಮುಖ ಅಂಶಗಳನ್ನು ಲೆಕ್ಕಪರಿಶೋಧಕರ ಗಮನಕ್ಕೆ ತಂದು ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಸಲ್ಲಿಸಬಹುದಾಗಿರುತ್ತದೆ.

ಆದುದರಿಂದ, ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, ಡಾ.(ಶ್ರೀಮತಿ).ಎನ್.ಎಮ್.ಪಾಟೀಲ, ಸಹ ಪ್ರಾಧ್ಯಾಪಕರು (ಸ್ವಯಂ ನಿವೃತ್ತಿ), ವಿಶ್ವವಿದ್ಯಾಲಯದ ಲಲಿತಕಲಾ ಮತ್ತು ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರ ಸೇವೆಯನ್ನು ತಾತ್ಕಾಲಿಕವಾಗಿ ಭೂಗೋಳಶಾಸ್ತ್ರ ವಿಭಾಗದ ಹುದ್ದೆಯಲ್ಲಿ ಕ್ರಮಬದ್ಧಗೊಳಿಸಿದ್ದರ ಬಗ್ಗೆ, ಸೇವಾವಧಿಯಲ್ಲಿ ಪಿ.ಎಚ್.ಡಿ. ಪದವಿಯನ್ನು ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಹಾಗೂ ದಿನಾಂಕ: 18.11.2008 ರಂದು ಮಂಜೂರ ಮಾಡಲಾದ ಸಹ ಪ್ರಾಧ್ಯಾಪಕ ಪದೋನ್ನತಿಯ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ, ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಪ್ರಮುಖ ಅಂಶಗಳನುಸಾರ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಹಣಕಾಸು ಸಮಿತಿ ಸಭೆಗೆ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**ಹಣಕಾಸು ಸಮಿತಿ ಕಲಂ ಸಂಖ್ಯೆ 04 ದಿನಾಂಕ 17.08.2022**

"ಡಾ.(ಶ್ರೀಮತಿ).ಎನ್.ಎಮ್.ಪಾಟೀಲ, ಸಹ ಪ್ರಾಧ್ಯಾಪಕರು (ಸ್ವಯಂ ನಿವೃತ್ತಿ), ಕವಿವಿ ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರ ಸೇವೆಯನ್ನು ತಾತ್ಕಾಲಿಕವಾಗಿ ಭೂಗೋಳಶಾಸ್ತ್ರ ವಿಭಾಗದ ಹುದ್ದೆಯಲ್ಲಿ ಕ್ರಮಬದ್ಧಗೊಳಿಸಿದ್ದರ ಬಗ್ಗೆ, ಸೇವಾವಧಿಯಲ್ಲಿ ಪಿ.ಎಚ್.ಡಿ. ಪದವಿಯನ್ನು ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಹಾಗೂ ದಿನಾಂಕ: 18.11.2008 ರಂದು ಮಂಜೂರ ಮಾಡಲಾದ ಸಹ ಪ್ರಾಧ್ಯಾಪಕ ಪದೋನ್ನತಿಯ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ



ಕುಲಸಚಿವರು ಕುಲಪತಿಗಳು

ಅನುಸರಣೆಯನ್ನು ಹಣಕಾಸು ಸಮಿತಿಯು ಪರಿಶೀಲಿಸಿ ಸಿಂಡಿಕೇಟ್ ಸಮಿತಿಯ ಒಪ್ಪಿಗೆಯನ್ನು ಪಡೆದು, ಆಡ್-ಹಾಕ್ ಸಮಿತಿಯ ಮುಂದೆ ಮಂಡಿಸಲು ಸೂಚಿಸಿತು."

ಆದ್ದರಿಂದ, ಸದರ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

ಡಾ.(ಶ್ರೀಮತಿ). ಎನ್. ಎಮ್. ಪಾಟೀಲ, ಸಹ ಪ್ರಾಧ್ಯಾಪಕರು (ಸ್ವಯಂ ನಿವೃತ್ತಿ), ಕವಿವಿ ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರ ಸೇವೆಯನ್ನು ತಾತ್ಕಾಲಿಕವಾಗಿ ಭೂಗೋಳಶಾಸ್ತ್ರ ವಿಭಾಗದ ಹುದ್ದೆಯಲ್ಲಿ ಕ್ರಮಬದ್ಧಗೊಳಿಸಿದ್ದರ ಬಗ್ಗೆ, ಸೇವಾವಧಿಯಲ್ಲಿ ಪಿ.ಎಚ್.ಡಿ. ಪದವಿಯನ್ನು ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಹಾಗೂ ದಿನಾಂಕ: **18.11.2008** ರಂದು ಮಂಜೂರ ಮಾಡಲಾದ ಸಹ ಪ್ರಾಧ್ಯಾಪಕ ಪದೋನ್ನತಿಯ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಗಳನ್ನು ಸಲ್ಲಿಸಿದ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಆಡ್-ಹಾಕ್ ಸಮಿತಿಯ ಮುಂದೆ ಮಂಡಿಸಲು ಸೂಚಿಸಿತು.



ಕುಲಸಚಿವರು ಕುಲಪತಿಗಳು

**<u>ಕಲಂ ಸಂಖ್ಯೆ–16: ವಿಷಯ–</u>:** ಸೇವಾವಧಿಯಲ್ಲಿ ಪಿ.ಎಚ್.ಡಿ ಪದವಿ ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ **ಡಾ.ಎಸ್.ಟಿ.ಹೆಗಡೆ,** ಸಹ ಪ್ರಾಧ್ಯಾಪಕರು ಹಾಗೂ **ಡಾ.ಎಮ್.ಎಸ್.ತರ್ಲಗಟ್ಟಿ,** ನಿವೃತ್ತ ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಲಲಿತಕಲಾ ಮತ್ತು ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರುಗಳ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಹಾಗೂ 2006 ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಡಿಯಲ್ಲಿ ಪದೋನ್ನತಿ/ಸ್ಥಾನೀಕರಣ ಸೌಲಭ್ಯಗಳನ್ನು ದಿನಾಂಕ: 24.12.2009 ಕ್ಕಿಂತ ಪೂರ್ವದಲ್ಲಿ ಮಂಜೂರು ಮಾಡಿದ ಕುರಿತು **ಡಾ.ಎಸ್.ಟಿ.ಹೆಗಡೆ** ಇವರ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಸಲ್ಲಿಸಲು ಸಿದ್ಧಪಡಿಸಿದ ಸೂಕ್ತ/ಸಮಂಜಸ ಅನುಸರಣೆಯನ್ನು ಪರಿಶೀಲಿಸುವ ಕುರಿತು.

<u>ಟಿಪ್ಪಣಿ:</u>

**ಡಾ.ಎಮ್.ಎಸ್.ತರ್ಲಗಟ್ಟಿ,** ನಿವೃತ್ತ ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಲಲಿತ ಕಲಾ ಮತ್ತು ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರು ದಿನಾಂಕ 31.07.2021 ರಂದು ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಸದರಿಯವರ ನಿವೃತ್ತಿ ತರುವಾಯ ಅವರ ನಿವೃತ್ತಿ ವೇತನ ಹಾಗೂ ನಿವೃತ್ತಿ ಉಪದಾನ (ಡಿ.ಸಿ.ಆರ್.ಜಿ) ಮೊತ್ತವನ್ನು ಮಂಜೂರು ಮಾಡುವುದು ವಾಡಿಕೆ. ಈ ಪ್ರಯುಕ್ತ ವರ್ಷವಾರು ಮಾನ್ಯ ಸರ್ಕಾರಿ ಲೆಕ್ಕ ಪರಿಶೋಧಕರು ಸಲ್ಲಿಸಿದ ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಶೀಲಿಸಲಾಗಿ, ಸದರಿಯವರಿಗೆ **ಸೇವಾವಧಿಯಲ್ಲಿ ಪಿಎಚ್.ಡಿ ಪದವಿ ಹೊಂದಿದ್ದ ಪ್ರಯುಕ್ತ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಕುರಿತಂತೆ 2012–13, 2013–14 ನೇ ಸಾಲಿನ ಸಂಗೀತ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ 13 ರಲ್ಲಿ** ಈ ಕೆಳಕಂಡಂತೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು, ಸದರಿ **ಲೆಕ್ಕ ಪರಿಶೋಧನಾ ವರದಿ ಕಂಡಿಕೆಯಲ್ಲಿ** **ಡಾ.ಎಮ್.ಎಸ್.ತರ್ಲಗಟ್ಟಿ** ಇವರ ಹೆಸರಿನ ಜೊತೆ **ಡಾ.ಎಸ್.ಟಿ.ಹೆಗಡೆ,** ಸಹ ಪ್ರಾಧ್ಯಾಪಕರು ಇವರ ಹೆಸರನ್ನು ಸಹ ಪ್ರಸ್ತಾಪಿಸಲಾಗಿರುತ್ತದೆ.

<u>2012–13, 2013–14 ನೇ ಸಾಲಿನ ಸಂಗೀತ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ 13</u>

13. ನೆಟ್/ಸ್ಲೆಟ್/ಸೆಟ್ ಪಾಸಾಗುವುದು ಕಡ್ಡಾಯವಾಗಿದ್ದು, ಕೇವಲ ಪಿ.ಎಚ್.ಡಿ ಮಾಡಿದವರಿಗೆ ಎರಡು ಮುಂಗಡ ಬಡ್ತಿ ನೀಡಿರುವ ಕುರಿತು :

ಸರಕಾರದ ಆದೇಶ ಸಂಖ್ಯೆ: ಇಡಿ 100/ಯು.ಎನ್.ಇ/99 ದಿನಾಂಕ: 05.11.1999 ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಪರಿಷ್ಕೃತ ವೇತನ ಶ್ರೇಣಿಗಳ ಅಧಿನಿಯಮ ದಿನಾಂಕ: 02.11.2001 ರ ಕಂಡಿಕೆ 12 ಮತ್ತು 9 ಗಳಲ್ಲಿ ನೇಮಕಾತಿ ಸಮಯದಲ್ಲಿ ಪಿ.ಎಚ್.ಡಿ ಮತ್ತು ಎಂ.ಫಿಲ್ ಪದವಿ ಹೊಂದಿದವರಿಗೆ 4 ಮತ್ತು 2 ವಿಶೇಷ ಬಡ್ತಿಗಳನ್ನು ಪ್ರೋತ್ಸಾಹ ರೂಪದಲ್ಲಿ ಮಂಜೂರು ಮಾಡಲು ಅವಕಾಶವಿರುತ್ತದೆ.

ಆದೇ ರೀತಿ ಯು.ಜಿ.ಸಿ ವೇತನ ಶ್ರೇಣಿಗಳು 1986–89 ರಲ್ಲಿ ಸಂಶೋಧನೆಯಲ್ಲಿ ಪ್ರೋತ್ಸಾಹಿಸುವ ಕುರಿತು ಅಭ್ಯರ್ಥಿಗಳು ಉಪನ್ಯಾಸಕರ ಹುದ್ದೆಗೆ ನೇಮಕಾತಿ ಸಮಯದಲ್ಲಿ ಪಿ.ಎಚ್.ಡಿ/ಎಂ.ಫಿಲ್ ಪದವಿಯನ್ನು ಪಡೆಯದಿದ್ದಲ್ಲಿ ಅವರಿಗೆ ಕ್ರಮವಾಗಿ (2,200–4,000) ರ ವೇತನ ಶ್ರೇಣಿಯಲ್ಲಿ ಮೂರು ಮತ್ತು ಒಂದು ವಿಶೇಷ ಬಡ್ತಿಗಳನ್ನು ಮಂಜೂರು ಮಾಡಲು ತಿಳಿಸಲಾಗಿರುತ್ತದೆ.

ಉಪನ್ಯಾಸಕರು ಮತ್ತು ಇತರೇ ಹುದ್ದೆಗಳ ನೇಮಕಾತಿಗೆ ಅವಶ್ಯಕ ಕನಿಷ್ಠ ವಿದ್ಯಾರ್ಹತೆ ಕುರಿತು ಯು.ಜಿ.ಸಿ ರೆಗ್ಯುಲೇಶನ್ 2000 ರಲ್ಲಿ ನೆಟ್ ಪರೀಕ್ಷೆ ಪಾಸು ಮಾಡುವುದು ಉಪನ್ಯಾಸಕರ ಹುದ್ದೆಯು ಅಭ್ಯರ್ಥಿಗಳಿಗೆ ಕಡ್ಡಾಯವಾಗಿದ್ದು, ಅವರು ಪಿ.ಎಚ್.ಡಿ ಹೊಂದಿದ್ದರೂ ಕೂಡಾ ವಿನಾಯಿತಿ ಇರುವುದಿಲ್ಲ. ಪಿ.ಎಚ್.ಡಿ ಪದವಿಯು ಅವರಿಗೆ ಪೂರಕ ವಿದ್ಯಾರ್ಹತೆ ಎಂದು ಪರಿಗಣಿತವಾಗುತ್ತದೆ. ಅಂತಹ ಅಭ್ಯರ್ಥಿಗಳಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ತಿಳಿಸಿದಂತೆ ಮೂರು ಮತ್ತು ನಾಲ್ಕು ಎಂ.ಫಿಲ್ ಆದವರಿಗೆ ಒಂದು ಮತ್ತು ಎರಡು ಬಡ್ತಿ ಮಂಜೂರು ಮಾಡಬಹುದಾಗಿರುತ್ತದೆ. ಯು.ಜಿ.ಸಿ ರೆಗ್ಯುಲೇಶನ್ಸ್ 2000 ಜಾರಿಯಾಗುವುದಕ್ಕೆ ಪೂರ್ವದಲ್ಲಿ ಉಪನ್ಯಾಸಕರ ಹುದ್ದೆಗೆ ಕೇವಲ ಸ್ನಾತಕ ಪದವಿ ಮಾತ್ರ ವಿದ್ಯಾರ್ಹತೆಯಾಗಿದ್ದು, ಪಿ.ಎಚ್.ಡಿ ಪದವಿ ಹೊಂದಿದವರಿಗೆ ವಿಶೇಷ ಮುಂಗಡ ಬಡ್ತಿ ನೀಡಿದಲ್ಲಿ ಕ್ರಮಬದ್ಧವಾಗುತ್ತಿತ್ತು. ಆದೇ ರೀತಿ ನೇಮಕಾತಿಗೆ ಪಿ.ಎಚ್.ಡಿ ಕನಿಷ್ಠ ಮತ್ತು ಅವಶ್ಯಕ ವಿದ್ಯಾರ್ಹತೆ ಎಂದು ಪರಿಗಣಿತವಾಗಿ ಅದೇ ಆಧಾರದ ಮೇಲೆ ಉಪನ್ಯಾಸಕರ ಹುದ್ದೆಗೆ ನೇಮಕವಾಗಿದ್ದಲ್ಲಿ ಅವರಿಗೆ ಈ ವಿಶೇಷ ಮುಂಗಡ ಬಡ್ತಿ ನೀಡಲು ಅವಕಾಶಗಳಿರುವುದಿಲ್ಲ.

ಈ ಕುರಿತು ಯು.ಜಿ.ಸಿ ನವದೆಹಲಿ ಅವರು ತಮ್ಮ ಪತ್ರ ಸಂಖ್ಯೆ: ಎಫ್.05–3–2009 (ಪಿ.ಎಸ್) ದಿನಾಂಕ: 7/2002 ರಲ್ಲಿ ನೀಡಿದ ಸ್ಪಷ್ಟೀಕರಣದಲ್ಲಿ 1996 ಕ್ಕಿಂತ ಪೂರ್ವದಲ್ಲಿ ಪಿ.ಎಚ್.ಡಿ ಪಡೆದಂತಹ ಉಪನ್ಯಾಸಕರುಗಳಿಗೆ ನೇಮಕಾತಿ ಪದೋನ್ನತಿಗೆ ಪಿ.ಎಚ್.ಡಿ ಅವಶ್ಯಕ ವಿದ್ಯಾರ್ಹತೆಯಾಗಿದ್ದಲ್ಲಿ ಎರಡು ಮುಂಗಡ ಬಡ್ತಿ ನೀಡಲು ಅವಕಾಶ ಇರುವುದಿಲ್ಲ ಎಂದು ತಿಳಿಸಲಾಗಿದೆ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಉಪನ್ಯಾಸಕರುಗಳು ನೇಮಕಾತಿ ಸಮಯದಲ್ಲಿ ಪ್ರಚಲಿತವಿದ್ದಂತಹ ನೇಮಕಾತಿ ನಿಯಮಗಳ ಅನುಸಾರ ಅವರ ನೇಮಕಾತಿಗೆ ಪಿ.ಎಚ್.ಡಿ ಪದವಿ ಅವಶ್ಯಕವಾದ ಮತ್ತು ಕಡ್ಡಾಯವಾದ ವಿದ್ಯಾರ್ಹತೆಯಾಗಿದ್ದಲ್ಲಿ ಅಂತಹ ಉಪನ್ಯಾಸಕರುಗಳಿಗೆ ಮೇಲ್ಕಾಣಿಸಿದ ನಿಯಮಗಳ ಮತ್ತು ಸ್ಪಷ್ಟೀಕರಣಗಳ ಹಿನ್ನೆಲೆಯಲ್ಲಿ ಮೂರು ಮತ್ತು ನಾಲ್ಕು ಹಾಗೂ ಎಂ.ಫಿಲ್ ಪದವಿ ಹೊಂದಿದವರಿಗೆ ನೀಡಲಾದ ಒಂದು ಮತ್ತು ಎರಡು ವಿಶೇಷ ಮುಂಗಡ ಬಡ್ತಿಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಒಂದು ವೇಳೆ ಅವರು ನೆಟ್/ಸ್ಲೆಟ್/ಅರ್ಹತಾ ಪರೀಕ್ಷೆ ಪಾಸಾಗಿದ್ದು, ಆ ಅವಧಿಯಲ್ಲಿ ಪಿ.ಎಚ್.ಡಿ ಹೊಂದಿದ್ದಲ್ಲಿ ಪಿ.ಎಚ್.ಡಿ ಪದವಿ ಹೆಚ್ಚುವರಿ ಅರ್ಹತೆಯಾದಂತೆ ಆಗುತ್ತಿದ್ದಲ್ಲಿ ಅವರಿಗೆ ವಿಶೇಷ ಮುಂಗಡ ಬಡ್ತಿಗಳನ್ನು ಮಂಜೂರು ಮಾಡಬಹುದಾಗಿರುತ್ತದೆ. ಕಾರಣ ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಸಂಗೀತ ಮಹಾವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ

<u>1. ಡಾ.ಎಸ್.ಟಿ.ಹೆಗಡೆ, ಉಪನ್ಯಾಸಕರು</u>

<u>2. ಡಾ.ಎಮ್.ಎಸ್.ತರಲಗಟ್ಟಿ, ಪ್ರಿನ್ಸಿಪಾಲರು/ಅಸೋಸಿಯೇಟ್ ಪ್ರೋಫೆಸರ್</u>

ಇವರುಗಳಿಗೆ ವಿಶೇಷ ಮುಂಗಡ ಬಡ್ತಿ ಮಂಜೂರು ಮಾಡಿದ್ದು ಯಾವ ಕನಿಷ್ಠ ವಿದ್ಯಾರ್ಹತೆ ಮೇಲೆ ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡಲಾಗಿದೆ ಎಂಬ ಬಗ್ಗೆ ಪೂರ್ಣ ಮಾಹಿತಿ ನೀಡಲು ಹಿಂದಿನ ಲೆಕ್ಕ ತನಿಖಾ ವರದಿ ಕಂಡಿಕೆ (13) ರಲ್ಲಿ ತಿಳಿಸಿದ್ದರೂ ಈವರೆಗೆ ಯವುದೇ ಮಾಹಿತಿ ನೀಡಿರುವುದಿಲ್ಲ.

ಕಾರಣ ಈ ಬಗ್ಗೆ ಪರಿಶೀಲಿಸಿ, ನೇಮಕಾತಿಗೆ ಪರಿಗಣಿಸಲಾದ ವಿದ್ಯಾರ್ಹತೆ ವಿವರಗಳನ್ನು ನಿಯಮಾವಳಿಗಳೊಂದಿಗೆ ಉಲ್ಲೇಖಿಸಿ ಒದಗಿಸಲು ಸೂಚಿಸಿದೆ. ಇಲ್ಲದಿದ್ದಲ್ಲಿ ಒಂದು ವೇಳೆ ಪಿ.ಎಚ್.ಡಿ/ಎಂ.ಫಿಲ್ ಪದವಿ ಕನಿಷ್ಠ ವಿದ್ಯಾರ್ಹತೆಯಾಗಿದ್ದು, ಅದರಂತೆ ಸದರಿಯವರು ನೇಮಕಗೊಂಡು ಅವರಿಗೆ ಈ ವಿಶೇಷ ಮುಂಗಡ ಬಡ್ತಿ ನೀಡಿ ಮಂಜೂರು ಮಾಡಿದ್ದಲ್ಲಿ ಅನುಬಂಧ 7 ರಲ್ಲಿ ವಿವರಿಸಿದಂತೆ ಅದನ್ನು ಹಿಂಪಡೆದು ಪಾವತಿಸಿದ ವೇತನವನ್ನು ಮರುನಿಗದಿ ಮಾಡಲು ಹಾಗೂ ಅವರಿಗೆ ಪಾವತಿಸಿದ ಹೆಚ್ಚುವರಿ ವೇತನ ಭತ್ಯಗಳನ್ನು ರೂ. 27,40,200.00 ವಸೂಲಿಸಿ ಅನುಸರಣೆ ನೀಡಲು ತಿಳಿಸಿದೆ.

ವಿವರಗಳನ್ನು ಅನುಬಂಧ '07' ರಲ್ಲಿ ನಮೂದಿಸಿದೆ. ಒಟ್ಟು ರೂ. 13,52,800=00 ಗಳನ್ನು ವಸೂಲಿಸಲು ಸೂಚಿಸಿದೆ.

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, **ಡಾ.ಎಸ್.ಟಿ.ಹೆಗಡೆ,** ಸಹ ಪ್ರಾಧ್ಯಾಪಕರು ಹಾಗೂ ದಿನಾಂಕ 31.07.2021 ರಂದು ನಿವೃತ್ತಿ ಹೊಂದಿದ **ಡಾ.ಎಮ್.ಎಸ್.ತರ್ಲಗಟ್ಟಿ,** ನಿವೃತ್ತ ಸಹ ಪ್ರಾಧ್ಯಾಪಕರು ಇವರಿಗೆ ಸೇವಾವಧಿಯಲ್ಲಿ ಪಿ.ಎಚ್.ಡಿ ಪದವಿ ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ



ಕುಲಸಚಿವರು

ಕುಲಪತಿಗಳು

ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸೂಕ್ತ ಅನುಸರಣೆಯನ್ನು ಸಲ್ಲಿಸುವುದು ಆಡಳಿತಾತ್ಮಕ ದೃಷ್ಟಿಯಿಂದ ಅವಶ್ಯಕವಾಗಿರುತ್ತದೆ.

ಆದುದರಿಂದ, **ಡಾ.ಎಸ್.ಟಿ.ಹೆಗಡೆ,** ಸಹ ಪ್ರಾಧ್ಯಾಪಕರು ಹಾಗೂ **ಡಾ.ಎಮ್.ಎಸ್.ತರ್ಲಗಟ್ಟಿ,** ನಿವೃತ್ತ ಸಹ ಪ್ರಾಧ್ಯಾಪಕರು, ಇವರುಗಳ ಸೇವಾ ವಹಿ ಹಾಗೂ ವೈಯಕ್ತಿಕ ಕಡತವನ್ನು ಪರಿಶೀಲಿಸಲಾಗಿ, ***1996 ರ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳಡಿಯಲ್ಲಿ*** "ಉಪನ್ಯಾಸಕ (ಹಿರಿಯ ಶ್ರೇಣಿ)" ಹಾಗೂ "ಉಪನ್ಯಾಸಕ (ಆಯ್ಕೆ ಶ್ರೇಣಿ)" ಪದೋನ್ನತಿಗೆ ನಿಗದಿಪಡಿಸಿದ ಒಟ್ಟು ಸೇವಾವಧಿ 06 (ಆರು) + 05 (ಐದು) ಇದ್ದು, ಅದರಂತೆ ಸದರಿಯವರುಗಳು ಉಪನ್ಯಾಸಕರು ಎಂದು 6 ವರ್ಷಗಳ ಸೇವೆ ಪೂರ್ಣಗೊಳಿಸಿದ ತರುವಾಯ ದಿನಾಂಕ.06.07.2000 ರಿಂದ ಅನ್ವಯವಾಗುವಂತೆ **ಉಪನ್ಯಾಸಕರು (ಹಿರಿಯ ಶ್ರೇಣಿ)** ಪದೋನ್ನತಿಯನ್ನು ಮಂಜೂರು ಮಾಡಿರುವದು ಹಾಗೂ "ಉಪನ್ಯಾಸಕರು (ಹಿರಿಯ ಶ್ರೇಣಿ)" ಎಂದು ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ತರುವಾಯ ದಿನಾಂಕ.06.07.2005 ರಿಂದ ಅನ್ವಯವಾಗುವಂತೆ **"ಉಪನ್ಯಾಸಕರು (ಆಯ್ಕೆ ಶ್ರೇಣಿ)"** ಪದೋನ್ನತಿಯನ್ನು ಮಂಜೂರು ಮಾಡಿದ್ದು, ಈ ಪದೋನ್ನತಿಗಳಿಗೆ ಅವರು ಸೇವಾವಧಿಯಲ್ಲಿ ಹೊಂದಿದ ಪಿಎಚ್.ಡಿ ಪದವಿಯನ್ನು ಅವಶ್ಯಕ ವಿದ್ಯಾರ್ಹತೆಯೆಂದು ಪರಿಗಣಿಸದಿರುವುದರಿಂದ ಹಾಗೂ ಸದರಿಯವರು ನ್ಯಾಯಾಲಯದ ಆದೇಶದ ಪ್ರಕಾರ ಸೇವಾ ಸಕ್ರಮಾತಿಗೊಂಡಿರುವುದರಿಂದ ಅವರ ನೇಮಕಾತಿಗೂ ಸಹ ಪಿ.ಎಚ್.ಡಿ ಪದವಿಯನ್ನು ಕನಿಷ್ಠ ಅವಶ್ಯಕ ವಿದ್ಯಾರ್ಹತೆ ಎಂದು ಪರಿಗಣಿಸದಿರುವುದರಿಂದ ***ಸರ್ಕಾರದ ಸುತ್ತೋಲೆ ದಿನಾಂಕ. 19.09.2007 ರಲ್ಲಿ ಕಲ್ಪಿಸಿದ*** ಅವಕಾಶದನ್ವಯ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳು ಕ್ರಮಬದ್ಧವಾಗಿರುತ್ತವೆ.

ಆದರೆ, ಸದರಿ ಶಿಕ್ಷಕರಿರ್ವರಿಗೆ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯಡಿಯಲ್ಲಿ ಪುನಃ ಎರಡು ಮುಂಗಡ ವೇತನ ಬಡ್ತಿಗಳನ್ನು ದಿನಾಂಕ: 19.09.2007 ರಿಂದ ಅನ್ವಯವಾಗುವಂತೆ ಕ್ರಮವಾಗಿ ಈ ಕಚೇರಿ ಆದೇಶ ಸಂಖ್ಯೆ: 7072 ಹಾಗೂ ಈ ಕಚೇರಿ ಆದೇಶ ಸಂಖ್ಯೆ: 7064 ದಿನಾಂಕ: 05.01.2011 ರ ಮೂಲಕ ಮಂಜೂರ ಮಾಡಿದ್ದು, ಸದರ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿ ಸರ್ಕಾರದ ಆದೇಶ ದಿನಾಂಕ: 24.12.2009 ರ APPENDIX-IV ರ ಉಪ ಕಂಡಿಕೆ 23 ರಲ್ಲಿ ಅವಕಾಶವಿಲ್ಲದಿರುವುದರಿಂದ ಎರಡನೇ ಬಾರಿಗೆ ಮಂಜೂರ ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳನ್ನು ಹಿಂಪಡೆದು ಹೆಚ್ಚುವರಿಯಾಗಿ ಪಾವತಿಸಲ್ಪಟ್ಟ ವೇತನವನ್ನು ಸದರಿಯವರುಗಳ ವೇತನದಿಂದ ಕಡಿತಗೊಳಸಲು ಕ್ರಮವಾಗಿ ಈ ಕಚೇರಿ ಆದೇಶ ಸಂಖ್ಯೆ: 1319, ದಿನಾಂಕ: 23.10.2021 ಹಾಗೂ ಈ ಕಚೇರಿ ಆದೇಶ ಸಂಖ್ಯೆ: 399, ದಿನಾಂಕ: 21.06.2021 ರ ಮೂಲಕ ಆದೇಶ ಜಾರಿ ಮಾಡಲಾಗಿರುತ್ತದೆ. ಅದರಂತೆ, ಹಣಕಾಸು ಅಧಿಕಾರಿಗಳು, ಕವಿವಿ, ಧಾರವಾಡ ಇವರು ಸದರಿಯವರುಗಳ ವೇತನವನದಿಂದ ಕಡಿಗೊಳಿಸಿ, ಒಟ್ಟು ವಸೂಲಾತಿ ಮಾಡಿದ ಮೊತ್ತ ರೂ.18,393/- ಗಳ ಕುರಿತ ಮಾಹಿತಿಯನ್ನು ಸಿಬ್ಬಂದಿವಾರು ತಮ್ಮ ಕಚೇರಿ ಟಿಪ್ಪಣಿ ದಿನಾಂಕ: 16.11.2021 ಹಾಗೂ ದಿನಾಂಕ: 16.08.2021 ರ ಪತ್ರದ ಮೂಲಕ ಸಿ.ಆ.ಸು ವಿಭಾಗಕ್ಕೆ ಸಲ್ಲಿಸಿರುತ್ತಾರೆ.

ಇಲ್ಲಿ ನಿವೇದಿಸುವುದೇನೆಂದರೆ, **ಡಾ.ಎಸ್.ಟಿ.ಹೆಗಡೆ ಹಾಗೂ ಡಾ.ಎಮ್.ಎಸ್.ತರ್ಲಗಟ್ಟಿ** ಇವರುಗಳ ಹೆಸರುಗಳು ಪಿ.ಎಚ್.ಡಿ ಪದವಿಗೆ ಎರಡು ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿದ ಕುರಿತ ಆಕ್ಷೇಪಣಾ ಕಂಡಿಕೆಯಲ್ಲಿ ಪ್ರಸ್ತಾಪವಾಗಿದೆ. ಆದರೆ, ಮತ್ತೊಮ್ಮೆ ಪರಿಶೀಲಿಸಿದಾಗ **ಡಾ.ಎಸ್.ಟಿ.ಹೆಗಡೆ** ಇವರ ಹೆಸರು ಮಾತ್ರ **2006 ರ ಯು.ಜಿ.ಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳ ಕುರಿತ 2014-15, 2015-16, 2016-17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ: 9, 10 ರ ಆಕ್ಷೇಪಣಾ ಕಂಡಿಕೆಯಲ್ಲಿ** ಪ್ರಸ್ತಾಪವಾಗಿರುವುದನ್ನು ಗಮನಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ, ಪಿ.ಎಚ್.ಡಿ ಪದವಿಗೆ ನೀಡಿದ ಮುಂಗಡ ವೇತನ ಬಡ್ತಿಗಳ ಕುರಿತಂತೆ ವಸ್ತು ವಿವರಗಳನ್ನು ಈಗಾಗಲೇ ಕಂಡಿಕೆ ಸಂಖ್ಯೆ 15 ರಿಂದ 21 ಹಾಗೂ 46 ರಲ್ಲಿನಂತೆ ಮಂಡಿಸಲಾಗಿದ್ದು, ಇನ್ನುಳಿದಂತೆ 2006 ರ ಯು.ಜಿ.ಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳ ಕುರಿತ ಆಕ್ಷೇಪಣೆಗೆ ಸಂಬಂಧಿಸಿದಂತೆ ಇಲ್ಲಿ ಗಮನಕ್ಕೆ ತರಬಯಸುವುದೇನೆಂದರೆ, ಬೋಧಕ ಸಿಬ್ಬಂದಿಗಳಿಗೆ 2006 ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಯು ಸರ್ಕಾರಿ ಆದೇಶ **ಸಂಖ್ಯೆಇಡಿ 37 ಯುಎನ್ಇ 2009 ದಿನಾಂಕ. 24.12.2009** ರ ಮೂಲಕ ಜಾರಿಯಾಗಿದ್ದು, ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿ ಜಾರಿ ಮಾಡುವ ಸಂದರ್ಭದಲ್ಲಿ ಬೋಧಕ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯನ್ನು ಮರು ಪದನಾಮಗೊಳಿಸಿ, ಆ ಹುದ್ದೆಯಲ್ಲಿ ಅವರು ಪಡೆಯುವ ಮೂಲ ವೇತನಕ್ಕೆ ಸಂವಾದಿಯಾಗಿ ದಿನಾಂಕ.01.01.2006 ರಿಂದ ಅನ್ವಯವಾಗುವಂತೆ ಸದರ ವೇತನ ಶ್ರೇಣಿಯಲ್ಲಿ ಮೂಲ ವೇತನವನ್ನು ನಿಗದಿಪಡಿಸಲು ಅವಕಾಶವನ್ನು ಸದರಿ ಸರ್ಕಾರಿ ಆದೇಶದ ಕಂಡಿಕೆ 12 ರ ಅಪ್ಪೆಂಡಿಕ್ಸ್-III (1.10) ರಲ್ಲಿ ಕಲ್ಪಿಸಿದ್ದು ಅದರಂತೆ **ಡಾ.ಎಸ್.ಟಿ.ಹೆಗಡೆ** ಇವರು ಆ ಸಮಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಗಳನ್ನು ಈ ಕೆಳಗಿನಂತೆ **ಮರು ಪದನಾಮಗೊಳಿಸಿ,** ಸದರಿ ಹುದ್ದೆಗಳಲ್ಲಿ ಅವರು ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ 2006 ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಯ ವೇತನವನ್ನು ಈ ಕಚೇರಿ ಆದೇಶ ಸಂಖ್ಯೆ:6329, ದಿನಾಂಕ:30.01.2010 ರ ಮೂಲಕ ನಿಗದಿಪಡಿಸಲಾಗಿದೆಯೆ ಹೊರತು ಸದರಿಯವರಿಗೆ **2006 ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನುಸಾರ ಪದೋನ್ನತಿ/ ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಿರುವದಿಲ್ಲ** ಎಂಬುದು ಕಂಡು ಬಂದಿದ್ದು ಅದರಂತೆಯೆ ಅನುಸರಣೆಯನ್ನು ಸಲ್ಲಿಸಬಹುದಾಗಿರುತ್ತದೆ.



ಕುಲಸಚಿವರು

ಕುಲಪತಿಗಳು

| ಅ.ಸಂ. | ಪದನಾಮ | 1996 ರ ಯುಜಿಸಿ ವೇತನ ಶ್ರೇಣಿಯ ವೇತನದಲ್ಲಿ ಪಡೆಯುವ ಮೂಲ ವೇತನ/ದಿನಾಂಕ. | 2006 ರ ಪರಿಷ್ಕತ ಯುಜಿಸಿ ವೇತನ ಶ್ರೇಣಿಯನುಸಾರ ಮರು ಪದನಾಮಗೊಳಿಸಿ 1996 ರ ವೇತನ ಶ್ರೇಣಿಯಲ್ಲಿ ಪಡೆಯುವ ಮೂಲ ವೇತನಕ್ಕೆ ಸಂವಾದಿಯಾಗಿ ದಿನಾಂಕ.01.01.2006 ರಿಂದ ಅನ್ವಯವಾಗುವಂತೆ ನಿಗದಿಪಡಿಸಲಾದ ಮೂಲ ವೇತನ/ದಿನಾಂಕ. |
|---|---|---|---|
| 01. | ಉಪನ್ಯಾಸಕರು (ಆಯ್ಕೆ ಶ್ರೇಣಿ) | ರೂ. 12,000/- 01.01.2006 | ಸಹಾಯಕ ಪ್ರಾಧ್ಯಾಪಕರು (ಎಜಿಪಿ-8000) ರೂ.30320/- 01.01.2006 |
| 02. | ಉಪನ್ಯಾಸಕರು (ಆಯ್ಕೆ ಶ್ರೇಣಿ) ಎಂದು 03 (ಮೂರು) ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ದಿನಾಂಕದಿಂದ | ರೂ. 14,100/- 06.07.2008 | ಸಹ ಪ್ರಾಧ್ಯಾಪಕರು(ಎಜಿಪಿ-9000) ರೂ.46400/- 06.07.2008 |

ಮುಂದುವರೆದು, ಮಾನ್ಯ ಅಪರ ನಿರ್ದೇಶಕರು, ಕ.ರಾ.ಲೆ.ಪ & ಲೆ.ಪ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ, ಇವರು ದಿನಾಂಕ.27.11.2018 ರ ತಮ್ಮ ಪತ್ರದಲ್ಲಿ ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ ಮಾನ್ಯ ಪ್ರಧಾನ ನಿರ್ದೇಶಕರು, ಕರಾಲೆಪ ಮತ್ತು ಲೆ.ಪ ಇಲಾಖೆ, ಬೆಂಗಳೂರು ಇವರು ದಿನಾಂಕ.26.10.2018 ರ ತಮ್ಮ ಪತ್ರದಲ್ಲಿ **"ಸಲ್ಲಿಸಲ್ಪಡುವ ಅನುಸರಣೆಯನ್ನು ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸಲು"** ನಿರ್ದೇಶಿಸಿರುವುದಾಗಿ ತಿಳಿಸಿ, ಅದರಂತೆ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಬಾಕಿ ಇರುವ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸುವಂತೆ ತಿಳಿಸಿರುತ್ತಾರೆ.

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ಸೇವಾವಧಿಯಲ್ಲಿ ಪಿ.ಎಚ್.ಡಿ ಪದವಿ ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ **ಡಾ.ಎಸ್.ಟಿ.ಹೆಗಡೆ, ಡಾ.ಎಮ್.ಎಸ್.ತರ್ಲಗಟ್ಟಿ**, ಇವರುಗಳ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಹಾಗೂ 2006 ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಡಿಯಲ್ಲಿ ಪದೋನ್ನತಿ/ಸ್ಥಾನೀಕರಣ ಸೌಲಭ್ಯಗಳನ್ನು ದಿನಾಂಕ: 24.12.2009 ಕ್ಕಿಂತ ಪೂರ್ವದಲ್ಲಿ ಮಂಜೂರು ಮಾಡಿದ ಕುರಿತು **ಡಾ.ಎಸ್.ಟಿ.ಹೆಗಡೆ** ಇವರ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಮೇಲ್ಕಂಡ ಪ್ರಮುಖ ಅಂಶಗಳನ್ನು ಲೆಕ್ಕಪರಿಶೋಧಕರ ಗಮನಕ್ಕೆ ತಂದು, ಎರಡನೇ ಬಾರಿಗೆ ಮಂಜೂರು ಮಾಡಲಾದ ಮುಂಗಡ ವೇತನ ಬಡ್ತಿಗಳನ್ನು ಹಿಂಪಡೆದು ಹೆಚ್ಚುವರಿಯಾಗಿ ಪಾವತಿಸಲ್ಪಟ್ಟ ವೇತನವನ್ನು ವಸೂಲಿಸಿದ ಕುರಿತ ಮಾಹಿತಿಯನ್ನು ಉಲ್ಲೇಖಿಸಿ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಸಲ್ಲಿಸುವದು ಆಡಳಿತಾತ್ಮಕವಾಗಿ ಅಗತ್ಯವಾಗಿರುತ್ತದೆ.

ಆದುದರಿಂದ, ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, ಸೇವಾವಧಿಯಲ್ಲಿ ಪಿ.ಎಚ್.ಡಿ ಪದವಿ ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ **ಡಾ.ಎಸ್.ಟಿ.ಹೆಗಡೆ**, ಸಹ ಪ್ರಾಧ್ಯಾಪಕರು ಹಾಗೂ **ಡಾ.ಎಮ್.ಎಸ್.ತರ್ಲಗಟ್ಟಿ**, ನಿವೃತ್ತ ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಲಲಿತಕಲಾ ಮತ್ತು ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರುಗಳ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಹಾಗೂ 2006 ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಡಿಯಲ್ಲಿ ಪದೋನ್ನತಿ/ಸ್ಥಾನೀಕರಣ ಸೌಲಭ್ಯಗಳನ್ನು ದಿನಾಂಕ: 24.12.2009 ಕ್ಕಿಂತ ಪೂರ್ವದಲ್ಲಿ ಮಂಜೂರು ಮಾಡಿದ ಬಗ್ಗೆ **ಡಾ.ಎಸ್.ಟಿ.ಹೆಗಡೆ** ಇವರ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ, ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಪ್ರಮುಖ ಅಂಶಗಳನ್ನು ಹಾಗೂ ಎರಡನೇ ಬಾರಿಗೆ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳನ್ನು ಹಿಂಪಡೆದು ಹೆಚ್ಚುವರಿಯಾಗಿ ಪಾವತಿಸಲ್ಪಟ್ಟ ವೇತನವನ್ನು ವಸೂಲಿಸಿದ ಕುರಿತ ಮಾಹಿತಿಯನ್ನು ಒಳಗೊಂಡಂತೆ ಸೂಕ್ತ/ಸಮಂಜಸ ಎರಡು ಪ್ರತ್ಯೇಕ ಅನುಸರಣೆಯನ್ನು **ಅನುಬಂಧ- "ಅ" ಮತ್ತು ಅನುಬಂಧ- "ಬ"** ದಲ್ಲಿ ಸಿದ್ಧಪಡಿಸಿ ಹಣಕಾಸು ಸಮಿತಿ ಸಭೆಗೆ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**ಹಣಕಾಸು ಸಮಿತಿ ಕಲಂ ಸಂಖ್ಯೆ. 05 ದಿನಾಂಕ 17.08.2022**

"ಸೇವಾವಧಿಯಲ್ಲಿ ಪಿ.ಎಚ್.ಡಿ ಪದವಿ ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಡಾ.ಎಸ್.ಟಿ.ಹೆಗಡೆ, ಸಹ ಪ್ರಾಧ್ಯಾಪಕರು ಹಾಗೂ ಡಾ.ಎಮ್.ಎಸ್.ತರ್ಲಗಟ್ಟಿ, ನಿವೃತ್ತ ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಲಲಿತಕಲಾ ಮತ್ತು ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರುಗಳ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಹಾಗೂ 2006 ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಡಿಯಲ್ಲಿ ಪದೋನ್ನತಿ/ಸ್ಥಾನೀಕರಣ ಸೌಲಭ್ಯಗಳನ್ನು ದಿನಾಂಕ: 24.12.2009 ಕ್ಕಿಂತ ಪೂರ್ವದಲ್ಲಿ ಮಂಜೂರು ಮಾಡಿದ ಕುರಿತು ಡಾ.ಎಸ್.ಟಿ.ಹೆಗಡೆ ಇವರ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಸಲ್ಲಿಸಲು ಸಿದ್ಧಪಡಿಸಿದ ಅನುಸರಣೆಯನ್ನು ಹಣಕಾಸು ಸಮಿತಿಯು ಪರಿಶೀಲಿಸಿ ಸಿಂಡಿಕೇಟ್ ಸಮಿತಿಯ ಒಪ್ಪಿಗೆಯನ್ನು ಪಡೆದು, ಆಡ್-ಹಾಕ್ ಸಮಿತಿಯ ಮುಂದೆ ಮಂಡಿಸಲು ಸೂಚಿಸಿತು."



ಕುಲಸಚಿವರು

ಕುಲಪತಿಗಳು

ಆದ್ದರಿಂದ, ಸದರ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಸೇವಾವಧಿಯಲ್ಲಿ ಪಿ.ಎಚ್.ಡಿ ಪದವಿ ಹೊಂದಿದ್ದಕ್ಕಾಗಿ ಮಂಜೂರು ಮಾಡಲಾದ ಎರಡು ಮುಂಗಡ ವೇತನ ಬಡ್ತಿಗಳ ಬಗ್ಗೆ ಡಾ.ಎಸ್.ಟಿ.ಹೆಗಡೆ, ಸಹ ಪ್ರಾಧ್ಯಾಪಕರು ಹಾಗೂ ಡಾ.ಎಮ್.ಎಸ್.ತರ್ಲಗಟ್ಟಿ, ನಿವೃತ್ತ ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಲಲಿತಕಲಾ ಮತ್ತು ಸಂಗೀತ ಮಹಾವಿದ್ಯಾಲಯ, ಧಾರವಾಡ ಇವರುಗಳ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಹಾಗೂ 2006 ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಡಿಯಲ್ಲಿ ಪದೋನ್ನತಿ/ ಸ್ಥಾನೀಕರಣ ಸೌಲಭ್ಯಗಳನ್ನು ದಿನಾಂಕ: 24.12.2009 ಕ್ಕಿಂತ ಪೂರ್ವದಲ್ಲಿ ಮಂಜೂರು ಮಾಡಿದ ಕುರಿತು ಡಾ.ಎಸ್.ಟಿ.ಹೆಗಡೆ ಇವರ ಪ್ರಕರಣದಲ್ಲಿ ವ್ಯಕ್ತವಾದ ಆಕ್ಷೇಪಣೆಗೆ ಸಲ್ಲಿಸಲು ಸಿದ್ಧಪಡಿಸಿದ ಸೂಕ್ತ/ ಸಮಂಜಸ ಅನುಸರಣೆಯನ್ನು ಸಲ್ಲಿಸಿದ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಆಡ್-ಹಾಕ್ ಸಮಿತಿಯ ಮುಂದೆ ಮಂಡಿಸಲು ಸೂಚಿಸಿತು.**



ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ-17: ವಿಷಯ-:** ಕರ್ನಾಟಕ ವಿಶ್ವವಿದ್ಯಾಲಯ/ ಕರ್ನಾಟಕ ಕಾಲೇಜ್ ಆವರಣದಲ್ಲಿರುವ ವಸತಿಗೃಹಗಳ ಲಭ್ಯತೆಯ ಅನುಸಾರವಾಗಿ ಸರ್ಕಾರದ ಅಧೀನ ಸಂಸ್ಥೆ ಅಧಿಕಾರಿಗಳಿಗೆ ವಿತರಿಸುವ ವಿಷಯವನ್ನು ಪರಿಶೀಲಿಸುವ ಕುರಿತು.

ಟಿಪ್ಪಣಿ:-

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಧಾರವಾಡ ವಿಜ್ಞಾನ ಕೇಂದ್ರದ ಸಿಬ್ಬಂದಿಗಳಿಗೆ ಸಿಂಡಿಕೇಟ್ ನಿರ್ಣಯದಂತೆ ಖಾಲಿ ವಸತಿ ಗೃಹಗಳನ್ನು ವಿತರಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಮನೆ ವಿತರಣಾ ನಿಯಮಾವಳಿ 2019, ದಿನಾಂಕ 1-08-2019 ರಿಂದ ಜಾಲ್ತಿಯಲ್ಲಿದ್ದು ಮನೆ ವಿತರಣಾ ನಿಯಮಾವಳಿ VIII ರಲ್ಲಿಯ ಅಂಶಗಳು ಇಂತಿವೆ.

1. Eighteen percent (18%) of the quarters shall be reserved for the employees belonging to SC/ST staff.
2. Five percent (5%) of the quarters shall be reserved for women employees and women employees whose spouses are working in defense personal.
3. The different type of quarters and to the cadre of employees to whom they may be allotted is as follows.
4. (1) type A and B: Professors, Associate Professors, Administrative Officers of the Rank of Deputy Registrars and above.
5. Type C & D: Associate Professors, Essential Non-Teaching Officer of the rank of Asst Registrars.
6. Type J & T: Non-Teaching employees of the rank of Group-B officers(i.e Office Supdt., /equivalent)
7. Type P, E, F Type : employees belonging to group C &D and employees in the essential services.
8. Exception to the above, If the Quarters of Type A & B fall vacant, they shall be allotted to Non-Teaching employees (except D- group) on temporary basis, if they are ready and willing to pay the minimum HRA of the Asst. Professor cadre at the entry level. Further, & P type quarters shall be allotted to D-Group employees & Contract Basis (Spl. Cases vide Rule III (iv) staff of University.

ಶ್ರೀ. ಪ್ರಭುಲಿಂಗಯ್ಯ ಎಸ್. ಹಿರೇಮಠ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಧಾರವಾಡ ಇವರ ಅರ್ಜಿ ದಿ: 25-1-2023 ರಲ್ಲಿ ಕರ್ನಾಟಕ ಲೋಕಾಯುಕ್ತ, ಧಾರವಾಡ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕೌಟುಂಬಿಕ ಅನುಕೂಲತೆಯ ದೃಷ್ಟಿಯಿಂದ ಕರ್ನಾಟಕ ವಿಶ್ವವಿದ್ಯಾಲಯ ಆವರಣದಲ್ಲಿ ಖಾಲಿ ಇರುವ ವಸತಿ ಗೃಹಗಳನ್ನು ವಿತರಿಸಲು ವಿನಂತಿಸುತ್ತಾ ಡಿಸೆಂಬರ್ 2022 ರ ವೇತನ ಚೀಟಿ ಸಲ್ಲಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಖಾಯಂ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಮಂಜೂರಾದ ಹುದ್ದೆಗಳಿಗಿಂತ ಕಡಿಮೆ ಇದ್ದ ಪ್ರಯುಕ್ತ ಡಿ ಮಾದರಿ ಮನೆಗಳು ಖಾಲಿ ಇರುತ್ತವೆ.

ಸದರ ಸಿಬ್ಬಂದಿ Group B ವೃಂದದಲ್ಲಿ ಬರುವದರಿಂದ ನಿಯಮಾನುಸಾರ 'ಡಿ' ಮಾದರಿ ಮನೆ ವಿತರಿಸಲು ಪರಿಶೀಲಿಸಬಹುದಾಗಿದೆ. ಸದರಿಯವರ ಮೂಲ ವೇತನದ 16% HRA ಪ್ರಕಾರ ರೂ. 9,320/- ಆಗುತ್ತಿದ್ದು ವೇತನದಿಂದ ಮನೆ ಬಾಡಿಗೆ ಕಟಾಯಿಸುವ ಮತ್ತು ಇನ್ನಿತರ ಶುಲ್ಕ ವಿಧಿಸಿ ಪ್ರತಿ ತಿಂಗಳು ವಿಶ್ವವಿದ್ಯಾಲಯದ ನಿಧಿಗೆ ಜಮಾಯಿಸಲು ಸೂಚಿಸಬಹುದಾಗಿದೆ. ಸದರಿ ವಿತರಣೆಯನ್ನು ನಿಯಮಬದ್ಧವಾಗಿ ನಿರ್ವಹಿಸುವುದಕ್ಕಾಗಿ ಮೇಲೆ ತಿಳಿಸಿದ ಮನೆ ವಿತರಣಾ ನಿಯಮಾವಳಿ VIII ರಲ್ಲಿಯ ಅಂಶಗಳಿಗೆ ಹೆಚ್ಚುವರಿಯಾಗಿ ಈ ಕೆಳಗಿನ ಕಂಡಿಕೆ ಸೇರಿಸಿ ಜಾರಿಗೊಳಿಸಬೇಕಾಗುತ್ತದೆ.



ಕುಲಸಚಿವರು ಕುಲಪತಿಗಳು

In case of exigencies of the situation that exist for the smooth conduct of the university academic and administrative nature and also the public interest involved including the student community in particular, the quarters which are fit for occupation lying vacant for more than one year, the vice chancellor of the university is authorized to allot such quarters on HRA rental basis on par with the employees of the university

ಇದರಿಂದ ವಿಶ್ವವಿದ್ಯಾಲಯದ ಕೋಟ್ಯಾಂತರ ರೂಪಾಯಿ ಮೌಲ್ಯದ ಆಸ್ತಿಗಳನ್ನು ಕಾಪಾಡುವುದರೊಂದಿಗೆ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಆದಾಯ ಬರುತ್ತದೆ.

ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲಾಯಿತು.

<u>ನಿರ್ಣಯ</u>

ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಿಬ್ಬಂದಿಗಳ ವಸತಿ ಗೃಹಗಳು ಖಾಲಿ ಇದ್ದು ಮನೆಗಳ ನಿರ್ವಹಣೆ, ಸ್ವಚ್ಛತೆಯ ದೃಷ್ಟಿ ಹಾಗೂ ಖಾಲಿ ಇರುವ ಮನೆಗಳು ಹಾಳಾಗದಂತೆ ಕ್ರಮ ಜರುಗಿಸುವ ದೃಷ್ಟಿಯಿಂದ ಸರ್ಕಾರದ ಇತರೇ ಇಲಾಖೆಗಳಿಂದ ಅಥವಾ ಅಧೀನ ಸಂಸ್ಥೆಯ ಅಧಿಕಾರಿಗಳಿಗೆ ವಿಶ್ವವಿದ್ಯಾಲಯದ ಆವರಣದಲ್ಲಿರುವ ಮನೆಗಳ ಲಭ್ಯತೆಯ ಅನುಸಾರವಾಗಿ ಅಧಿಕಾರಿಗಳ ಮೂಲ ವೇತನದ ಶೇ.16% ಅಥವಾ ಸರ್ಕಾರದಿಂದ ಕಾಲಕಾಲಕ್ಕೆ ಪರಿಷ್ಕರಿಸುವ ಮನೆ ಬಾಡಿಗೆ ಭತ್ಯೆಯನ್ನು ಹಾಗೂ ಇನ್ನಿತರ ಶುಲ್ಕ ವಿಧಿಸಿ ಪ್ರತಿ ತಿಂಗಳು ವಿಶ್ವವಿದ್ಯಾಲಯಕ್ಕೆ ಭರಿಸುವ ಕರಾರಿನೊಂದಿಗೆ ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳ ಅನುಸಾರ ಮನೆ ವಿತರಿಸಲು ತೀರ್ಮಾನಿಸಿತು.



ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ-18: ವಿಷಯ-: ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

ಟಿಪ್ಪಣಿ:

ಕರ್ನಾಟಕ ವಿಶ್ವವಿದ್ಯಾಲಯದ ಈ ಕೆಳಗೆ ನಮೂದಿಸಿದ ದಿನಾಂಕಗಳಂದು ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಅಧಿಕಾರದ ಅವಧಿಯು ಕೊನೆಗೊಂಡ ಪ್ರಯುಕ್ತ/ ನಿವೃತ್ತಿ ಹೊಂದಿದ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ರ ಅಡಿಯಲ್ಲಿ, ಜೇಷ್ಠತೆಯ ಅನುಸಾರ ಆಯಾ ವಿಭಾಗಗಳ ಹಿರಿಯ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿದ್ದರಿಂದ, ಸಿಬ್ಬಂದ್ಧಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪಡೆದ ವಿವಿಧ ಅಧ್ಯಯನ ವಿಭಾಗಗಳ ಪ್ರಸ್ತುತ ಶಿಕ್ಷಕರ ಜೇಷ್ಠತಾ ಯಾದಿಯ ಪ್ರಕಾರ ಈ ಕೆಳಗಿನ ಶಿಕ್ಷಕರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ತೆಗೆದುಕೊಂಡ ಕ್ರಮದಂತೆ ಆಯಾ ವಿಭಾಗಗಳ ಶಿಕ್ಷಕರ ಜೇಷ್ಠತೆಯ ಅನುಸಾರವಾಗಿ ಹಿರಿಯ ಪ್ರಾಧ್ಯಾಪಕರುಗಳನ್ನು ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮುಂದುವರೆದು, ಅನುಕ್ರಮ ಸಂಖ್ಯೆ 02ರಲ್ಲಿ ಶಿಕ್ಷಣ ಅಧ್ಯಯನ ವಿಭಾಗದ ಮುಖ್ಯಸ್ಥರನ್ನು ನೇಮಿಸುವಾಗ ಡೀನರು, ಶಿಕ್ಷಣ ನಿಕಾಯ ಇವರನ್ನು ನೇಮಿಸುವ ಬದಲು ನಜರಚೂಕಿನಿಂದ ಡಾ.ಬಿ.ಎಂ.ಪಾಟೀಲ, ಉಪ-ನಿರ್ದೇಶಕರು ಎಂದು ನೇಮಿಸಿ ದಿನಾಂಕ 31.12.2022 ರ ಮೂಲಕ ಅಧಿಸೂಚಿಸಲಾಗಿರುತ್ತದೆ. ಆದ್ದರಿಂದ, ಸದರ ಅಧಿಸೂಚನೆಯನ್ನು ಅಲ್ಪಮಾರ್ಪಾಡಿಸಿ ಡೀನರು, ಶಿಕ್ಷಣ ನಿಕಾಯ ಇವರನ್ನು ಶಿಕ್ಷಣ ವಿಭಾಗಕ್ಕೆ ಪದನಿಮಿತ್ತ ಮುಖ್ಯಸ್ಥರೆಂದು ನೇಮಿಸಿದ ಬಗ್ಗೆ ತಿದ್ದುಪಡೆ ಅಧಿಸೂಚನೆಯನ್ನು ದಿನಾಂಕ 13.02.2023 ರಂದು ಹೊರಡಿಸಲಾಗಿರುತ್ತದೆ.

| ಅ.ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ/ ನಿವೃತ್ತಿ ಹೊಂದಿದ ದಿನಾಂಕ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 1) | ಜಾನಪದ ವಿಭಾಗ | ಡಾ. ವಿ. ಎಲ್. ಪಾಟೀಲ ಪ್ರಾಧ್ಯಾಪಕರು | 27-12-2022 | ಡಾ. ವಿ. ಎಲ್. ಪಾಟೀಲ ಪ್ರಾಧ್ಯಾಪಕರು | 28-12-2022 | 28-12-2022 |
| 2) | ಶಿಕ್ಷಣ ಅಧ್ಯಯನ ವಿಭಾಗ | ಡಾ. ಆರ್.ಆರ್. ಮದನಕರ ಪ್ರಾಧ್ಯಾಪಕರು | 31-12-2022 | ಡೀನರು ಶಿಕ್ಷಣ ನಿಕಾಯ (ಪದನಿಮಿತ್ತ) | 01-01-2023 | 31-12-2022 & 13-02-2023 |
| 3) | ವಾಣಿಜ್ಯಶಾಸ್ತ್ರ ವಿಭಾಗ | ಡಾ(ಶ್ರೀಮತಿ). ಚಂದ್ರಮ್ಮ ಎಂ., ಪ್ರಾಧ್ಯಾಪಕರು | 18-01-2023 | ಡಾ. ಆರ್.ಎಲ್. ಹೈದ್ರಾಬಾದ, ಪ್ರಾಧ್ಯಾಪಕರು | 19-01-2023 | 18-01-2023 |
| 4) | ಮನೋವಿಜ್ಞಾನ ವಿಭಾಗ | ಡಾ(ಶ್ರೀಮತಿ). ವಿಜಯಲಕ್ಷ್ಮೀ ಎ. ಅಮ್ಮಿನಭಾವಿ, ಪ್ರಾಧ್ಯಾಪಕರು | 31-01-2023 | ಡಾ. ಎಸ್.ವಿ. ಕಾಂಬಳೆ, ಪ್ರಾಧ್ಯಾಪಕರು | 01-02-2023 | 31-01-2023 |

ಆದ್ದರಿಂದ, ಮೇಲ್ಕಾಣಿಸಿದಂತೆ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ಆಡಳಿತಾತ್ಮಕ ಹಿತದೃಷ್ಟಿಯಿಂದ ಸ್ನಾತಕೋತ್ತರ 04 ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು. ಮುಂದುವರೆದು, ಡಾ. ಎಸ್.ಬಿ. ನಾರಿ, ಮುಖ್ಯಸ್ಥರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ, ಕ.ವಿ.ವಿ.ಧಾರವಾಡ ಇವರು ದಿನಾಂಕ.17.02.2023ರ ಪತ್ರದ ಮೂಲಕ ವಿಭಾಗದ ಮುಖ್ಯಸ್ಥರ ಕಾರ್ಯಭಾರಕ್ಕೆ ರಾಜೀನಾಮೆ ನೀಡಿದ ಮನವಿಯನ್ನು ಅಂಗೀಕರಿಸಿ ಸದರಿ ವಿಭಾಗದ ಹಿತದೃಷ್ಟಿಯಿಂದ ಜೇಷ್ಠತೆ ಯಾದಿಯಂತೆ ಮುಂದಿನ ಹಿರಿಯ ಪ್ರಾಧ್ಯಾಪಕರಾದ ಡಾ.ಎಸ್.ಟಿ.ಬಾಗಲಕೋಟಿ ಇವರನ್ನು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರನ್ನಾಗಿ ನಿಯಮಾನುಸಾರ ನೇಮಕ ಮಾಡಲು ಕ್ರಮ ಜರುಗಿಸುವಂತೆ ಸಿಂಡಿಕೇಟ್ ಠರಾಯಿಸಿತು.**



ಕುಲಸಚಿವರು

ಕುಲಪತಿಗಳು

## ಅಧ್ಯಕ್ಷರ ಅಪ್ಪಣೆಮೇರೆಗೆ ಬಂದ ವಿಷಯಗಳು

**ಕಲಂ ಸಂಖ್ಯೆ-19: ವಿಷಯ-:** ಡಾ. ಶ್ರೇಯಸ್ ಎನ್.ಆರ್. ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ ಗದಗ, ಇವರನ್ನು ಹುದ್ದೆ ರಹಿತವಾಗಿ ಮೈಸೂರು ವಿಶ್ವವಿದ್ಯಾಲಯ ಮೈಸೂರು ಇಲ್ಲಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಂತರ ವಿಶ್ವವಿದ್ಯಾಲಯದ ವರ್ಗಾವಣೆ ಅಡಿ ವರ್ಗಾಯಿಸಲು ಆಡಳಿತ ಮಂಡಳಿ ಸಭೆಯು ಪರಿಶೀಲಿಸುವ ಕುರಿತು.

ಟಿಪ್ಪಣಿ:

ಡಾ. ಶ್ರೇಯಸ್ ಎನ್.ಆರ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ.ಸ್ನಾತಕೋತ್ತರ ಕೇಂದ್ರ ಗದಗ, ಇವರನ್ನು ಹುದ್ದೆ ರಹಿತವಾಗಿ ಮೈಸೂರು ವಿಶ್ವವಿದ್ಯಾಲಯ ಮೈಸೂರು ಇಲ್ಲಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಂತರ ವಿಶ್ವವಿದ್ಯಾಲಯದ ವರ್ಗಾವಣೆ ಅಡಿ ವರ್ಗಾಯಿಸುವ ಪ್ರಸ್ತಾವನೆಯನ್ನು ದಿನಾಂಕ:27.01.2020 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ಪರಿಶೀಲಿನೆಗಾಗಿ ಮಂಡಿಸಲಾಗಿತ್ತು.ಈ ವಿಷಯವಾಗಿ, ಸದರ ಆಡಳಿತ ಮಂಡಳಿ ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

ಆಡಳಿತ ಮಂಡಳಿ ನಿರ್ಣಯ ಸಂಖ್ಯೆ:11 ದಿನಾಂಕ:27.02.2020

" ಡಾ.ಎನ್.ಆರ್.ಶ್ರೇಯಸ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಮೈಸೂರು ವಿಶ್ವವಿದ್ಯಾಲಯಕ್ಕೆ ಅಂತರ ವಿಶ್ವವಿದ್ಯಾಲಯದಡಿ ಹುದ್ದೆ ರಹಿತ ವರ್ಗಾವಣೆ ಮಾಡುವ ಕುರಿತು ಚರ್ಚಿಸಿದ ಸಿಂಡಿಕೇಟ್ ಸಭೆಯು ಕ.ವಿ.ವಿ ನಿಯಮದಂತೆ ಜರುಗಿಲು ಅನುಮೋದಿಸಿತು."

ಸದರ ಆಡಳಿತ ಮಂಡಳಿಯ ನಿರ್ಣಯದಂತೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಈ ಕಚೇರಿ ಪತ್ರ ಸಂಖ್ಯೆ:ಕವಿವಿ/ಸಿಆಸುವಿ/ಶಿಕ್ಷಕ-3/2020/5136 ದಿನಾಂಕ:18.02.2020 ಹಾಗೂ ಈ ಕಚೇರಿ ಪತ್ರ ಸಂಖ್ಯೆ:ಕವಿವಿ/ಸಿಆಸುವಿ/ಶಿಕ್ಷಕ-3/2020/3835 ದಿನಾಂಕ:09.12.2020 ರ ಮೂಲಕ ಡಾ.ಎನ್.ಆರ್.ಶ್ರೇಯಸ್ ಇವರನ್ನು ಹುದ್ದೆ ರಹಿತವಾಗಿ,ಕ.ವಿ.ವಿ.ಸ್ನಾತಕೋತ್ತರ ಕೇಂದ್ರ ಗದಗದಿಂದ ಮೈಸೂರು ವಿಶ್ವವಿದ್ಯಾಲಯಕ್ಕೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆಅಡಿ ವರ್ಗಾವಣೆ ಮಾಡಲು ಅಭಿಪ್ರಾಯಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.

ಮುಂದುವರೆದು,ಶ್ರೀ ಬಿ.ವಿ.ಮಾರುತಿ ಪ್ರಸನ್ನ, ಸಚಿವರ ಆಪ್ತ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಐಟಿ ಮತ್ತು ಬಿಟಿ. ಮತ್ತು ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ:24.11.2022 ರ ಮೂಲಕ ಡಾ.ಎನ್.ಆರ್.ಶ್ರೇಯಸ್ ಸಹಾಯಕ ಪ್ರಾಧ್ಯಾಪಕರು (ವಾಣಿಜ್ಯ ವಿಭಾಗ) ಇವರು ಕೆಲವೊಂದು ಕೌಟುಂಬಿಕ ಸಮಸ್ಯೆಗಳ ಕಾರಣ ವೈಯಕ್ತಿಕ ಮತ್ತು ಅನಾರೋಗ್ಯದ ಹಿನ್ನಲೆಯಲ್ಲಿ ಸದರಿಯವರನ್ನು ಕ.ವಿ.ವಿ ಸ್ನಾತಕೋತ್ತರ ಕೇಂದ್ರ ಗದಗ ಇಲ್ಲಿಂದ ಮೈಸೂರು ವಿಶ್ವವಿದ್ಯಾಲಯ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಅಡಿವರ್ಗಾಯಿಸಲು ಕೋರಿರುತ್ತಾರೆ. ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ:15.12.2022 ರ ಮೂಲಕ ಸದರಿಯವರ ವರ್ಗಾವಣೆಗೆ ಸಂಬಂದಿಸಿದಂತೆ ನಿಯಮಾಸಾರ ಪರಿಶೀಲಿಸಿ ಸ್ಪಷ್ಟವಾದ ಅಭಿಪ್ರಾಯವನ್ನು ನೀಡುವಂತೆ ಸಹ ನಿರ್ದೇಶಿಸಿರುತ್ತಾರೆ.

ಆದ್ದರಿಂದ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಡಾ. ಶ್ರೇಯಸ್ ಎನ್, ಆರ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ.ಸ್ನಾತಕೊತ್ತರ ಕೇಂದ್ರ ಗದಗ, ಇವರನ್ನು ಹುದ್ದೆ ರಹಿತವಾಗಿ ಮೈಸೂರು ವಿಶ್ವವಿದ್ಯಾಲಯ ಮೈಸೂರು ಇಲ್ಲಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಂತರ ವಿಶ್ವವಿದ್ಯಾಲಯದ ವರ್ಗಾವಣೆ ಅಡಿ ವರ್ಗಾಯಿಸಲು ಆಡಳಿತ ಮಂಡಳಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಯಿತು.

### ನಿರ್ಣಯ

**ಡಾ. ಶ್ರೇಯಸ್ ಎನ್.ಆರ್. ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ ಗದಗ, ಇವರನ್ನು ಹುದ್ದೆ ರಹಿತವಾಗಿ ಮೈಸೂರು ವಿಶ್ವವಿದ್ಯಾಲಯ ಮೈಸೂರು ಇಲ್ಲಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಂತರ ವಿಶ್ವವಿದ್ಯಾಲಯದ ವರ್ಗಾವಣೆ ಅಡಿ ವರ್ಗಾಯಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಆಡಳಿತ ಮಂಡಳಿಯು ಸದ್ಯದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಸದರ ವಿಭಾಗದಲ್ಲಿ ಬೋಧಕ ಸಿಬ್ಬಂದಿಗಳ ತೀವ್ರ ಕೊರತೆಯಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರಸ್ತಾವನೆಗೆ ಅನುಮೋದನೆ ನೀಡದಂತೆ ಕ್ರಮ ಜರುಗಿಸಲು ಠರಾಯಿಸಿತು.**



ಕುಲಸಚಿವರು

ಕುಲಪತಿಗಳು

**ಕಲಂ ಸಂಖ್ಯೆ-20: ವಿಷಯ-:** ವಿಶ್ವವಿದ್ಯಾಲಯದ 73ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ವಿಷಯವನ್ನು ದೊಡ್ಡ ಖರೀದಿ ಸಮಿತಿ ಸಭೆಯ ನಿರ್ಣಯವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

**ಟಿಪ್ಪಣಿ:**

1. ವಿಶ್ವವಿದ್ಯಾಲಯದ ಸನ್ 2021-22 ನೇ ಸಾಲಿನ 73ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಪೂರ್ವಸಿದ್ಧತೆಗಾಗಿ ವಿವಿಧ ಸ್ನಾತಕ/ ಸ್ನಾತಕೋತ್ತರ/ ಡಿಪ್ಲೋಮಾ ಪದವಿಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣ ಪದಕಗಳನ್ನು ಖರೀದಿಸಲು ಇ-ಟೆಂಡರ್ ಆಹ್ವಾನಿಸಬೇಕಾಗುವುದು.

2. ಹೊಸದಾಗಿ ಸ್ಥಾಪಿಸಲ್ಪಟ್ಟ ಸುವರ್ಣಪದಕಗಳು ಸೇರಿ ಪ್ರಸ್ತುತ ವರ್ಷಕ್ಕೆ ಒಟ್ಟು 250 ಸುವರ್ಣ ಪದಕಗಳು ಸ್ಥಾಪಿತಗೊಂಡಿವೆ. ಸನ್ 2021-22 ನೇ ಸಾಲಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗಿಸಿದ ವಿವಿಧ ಸ್ನಾತಕ/ ಸ್ನಾತಕೋತ್ತರ ಮತ್ತು ಡಿಪ್ಲೋಮಾ ಕೋರ್ಸಗಳ ವಿಷಯಗಳ ಪರೀಕ್ಷೆಗಳಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸುವರ್ಣ ಪದಕಗಳನ್ನು ದಾನಿಗಳು ರೂಪಿಸಿದ ನಿಯಮಾವಳಿಗಳ ಅನುಗುಣವಾಗಿ ಪ್ರದಾನ ಮಾಡುವ ಕುರಿತು ಸುವರ್ಣ ಪದಕಗಳನ್ನು ಸಿದ್ಧಪಡಿಸಿ ಪೂರೈಸಲಾಗುವುದು.

3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ, 2000 ರ (ಕರ್ನಾಟಕ ರಾಜ್ಯಪತ್ರ ಸಂಖ್ಯೆ :758 ರ FD 574(A) Exp-12/2019, Bengaluru dated : 7th September 2019ರಲ್ಲಿ 30 ದಿನಗಳ ಕಾಲಾವಕಾಶವನ್ನು ಕಡಿತಗೊಳಿಸಿ 15 ದಿನಗಳಿಗೆ ನಿಗದಿಪಡಿಸಿದೆ.) ನಿಯಮದಂತೆ ಸುವರ್ಣ ಪದಕಗಳನ್ನು ಖರೀದಿಸಲು ಇ-ಟೆಂಡರ ಆಹ್ವಾನಿಸಿ ಖರೀದಿಸಲಾಗುವುದು.

4. ವಿಶ್ವವಿದ್ಯಾಲಯದ ಸನ್ 2020-21 ನೇ ಸಾಲಿನಲ್ಲಿ ಜರುಗಿದ 72 ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾದ ಒಟ್ಟು 233 ಚಿನ್ನದ ಪದಕಗಳನ್ನು ತಯಾರಿಸಿ ಪೂರೈಸಿದ Naveen Enterprises, Bangalore ಇವರಿಗೆ ರೂ.6,05,800/- ಗಳನ್ನು ಪಾವತಿಸಲಾಗಿದೆ. ಕಾರಣ ಪ್ರಸ್ತುತ ವರ್ಷದ 73ನೇ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಖರೀದಿಸಲು ಅಂದಾಜು **ರೂ.7,00,000/-** (ರೂಪಾಯಿ ಎಳು ಲಕ್ಷ) ಗಳ ವೆಚ್ಚ ಪಾವತಿಸಬೇಕಾಗುವುದು.

5. ದಿನಾಂಕ 14-02-2023 ರಂದು ಜರುಗಿದ ದೊಡ್ಡ ಖರೀದಿ ಸಮಿತಿ ಸಭೆ ಕಲಂ ನಂ-01 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ.

   ***"ದೊಡ್ಡ ಕರೀದಿ ಸಮಿತಿಯು ವಿಶ್ವವಿದ್ಯಾಲಯದ 73ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ ಸುಧಿರ್ಗವಾಗಿ ಚರ್ಚಿಸಿ ಇ-ಟೆಂಡರ್ ಮೂಲಕ ಖರೀದಿಸಲು ಕ್ರಮ ಜರುಗಿಸುವಂತೆ ಒಪ್ಪಿಗೆ ಸೂಚಿಸಿತು."***

6. ಕಾರಣ ದೊಡ್ಡ ಖರೀದಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

## ನಿರ್ಣಯ

**ವಿಶ್ವವಿದ್ಯಾಲಯದ 73ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ ದೊಡ್ಡ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು.**



ಕುಲಸಚಿವರು ಕುಲಪತಿಗಳು